ಶ್ರೀ ಎನ್. ಯೋಗೀಶ್ ಭಟ್: ಮಾನವೀಯತೆಯ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಕರೆಯುವಂಥ ಕೆಲಸ ಮಾಡಬೇಕು. ಉಳಿದವರಿಗೆ ತಕ್ಷಣ ನ್ಯಾಯ ಕೊಡಿಸುವಂಥ ಕೆಲಸ ಆಗಬೇಕು. ದಯವಿಟ್ಟು ಆದೇಶವಾದರೂ ಕೊಡಿ ಸಾರ್. .

ಶ್ರೀ ಬಿ. ನಾಗರಾಜಶೆಟ್ಟಿ: ಮಂಗಳೂರಿನಲ್ಲಿ ಮೂರು ಜನ ಸತ್ತು ಹೋಗಿದ್ದಾರೆ, ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಕೂಡಲೇ ನಿವಾರಿಸಬಹುದು.

ಶ್ರೀ ಧರ್ಮಸಿಂಗ್: ಮಾನ್ಯ ಹೆಗಡೆಯವರು ಹೇಳುತ್ತಿದ್ದಾರೆ, ಅವರು ಯಾರು? ವಿಜಯಮಲ್ಯರವರಿಗೆ ನಾವೇ ವೋಟು ಕೊಟ್ಟು ರಾಜ್ಯಸಭೆಗೆ ಕಳುಹಿಸಿದ್ದೇವೆ, ವಿಜಯಮಲ್ಯರಿಗೆ ನಾವು ಎಷ್ಟೋ ಸಾರಿ ಪೋನು ಮಾಡಿದ್ದೇನೆ, ನೀವು ಸ್ವಲ್ಪ ಸಣ್ಣ ಕೆಲಸ ಮಾಡಬೇಕು ಎಂದು ಹೇಳಿದ್ದೆವು, ಅವರು ಅಲ್ಲಿಗೆ ಮ್ಯಾನೇಜರ್ ಕೂಡ ಕಳುಹಿಸಿದ್ದರು ತಮಗೆ ಗೊತ್ತಿರಬಹುದು. ಮಂಗಳೂರಿನಿಂದ ಮಾಜಿ ಶಾಸಕರು ಬಹಳಷ್ಟು ಜನ ಬಂದಿದ್ದು ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು ನೀವೂ ಕೂಡಿ ಇನ್ನೊಂದು ಸಲ ಅವರನ್ನು ಕರೆಸಿ ಮಾತನಾಡಿ ಪರಿಹಾರ ಮಾಡೋಣ.

7. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

ಶ್ರೀ ಡಿ.ಎನ್. ಜೀವರಾಜ್: ಸಾಮಾಜಿಕ ಅರಣ್ಯದಲ್ಲಿ ಅಕೇಶಿಯಾ ಗಿಡ ನೆಡುವುದರ ಬಗ್ಗೆ ನಾನು ಹೇಳುತ್ತಿದ್ದೆ. ಈ ಅಕೇಶಿಯಾ ಪರಿಸ್ಥಿತಿ ಹೇಗಿದೆ ಎಂದರೆ, . .

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರು ಈ ಅಕೇಶಿಯಾ ಬೀಜವನ್ನು ರೈತರಿಗೆ ಯಾವಾಗ ಕೊಡುತ್ತೇವೆ ಎಂಬುದರ ಬಗ್ಗೆ ಹೇಳುತ್ತೇನೆ. ಈಗ ಏನಾಗಿದೆ ಎಂದರೆ ಖಾಸಗಿ ಜಮೀನುದಾರರು ಅವರು ಯಾವ ಬೀಜ ಕೇಳುತ್ತಾರೋ ಆ ಬೀಜಗಳನ್ನು ಕೊಡುತ್ತೇವೆ, ಬೇವು, ಅಕೇಶಿಯಾ, ಹೊಂಗೆ, ಹುಣಿಸೆ, ನೇರಳೆ, ತೇಗ, ಹೀಗೆ ಬೇರೆ ಬೇರೆ ಸಸಿಗಳನ್ನೂ ಕೂಡ ಕೊಡುತ್ತೇವೆ. ಅವರು ಯಾವುದು ಕೇಳುತ್ತಾರೋ ಅದನ್ನು ನಾವು ಕೊಡುತ್ತೇವೆ. ಆದರೆ ಖಾಸಗಿಯವರು ಜಾಸ್ತಿ ಅಕೇಶಿಯಾ ಬೇಕು ಎಂದಾಗ ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ ಏನು ಮಾಡಬೇಕು ಎಂದು ನೀವು ಸಲಹೆ ಕೊಡಿ ಏನೇನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಮಂತ್ರಿಗಳು, ರೈತರು ಅಕೇಶಿಯಾ ಗಿಡ ಕೇಳುತ್ತಾರೆ ಆದುದರಿಂದ ನಾವು ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದು ಬೇಗ ಬೆಳೆಯುತ್ತದೆಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ಇದು ಅಕೇಶಿಯಾ, ಮ್ಯಾಂಜಿಯಂ ಇದೆ, ಈ ರೀತಿಯಾಗಿ ಹೇಳಿ ಹೇಳಿ ಕೊಡುವಂಥ ಸಂಪ್ರದಾಯವನ್ನು ರೂಢಿ ಮಾಡಿಕೊಂಡಿದ್ದಾರೆ. ಇದರ ಜೊತೆಗೆ ನನ್ನ ತಾಲ್ಲೂಕಿನಲ್ಲಿ ಉದಾಹರಣೆ ಕೊಡುವುದಾದರೆ, ಬಹಳ ಚೆಂದ ಇದ್ದಂಥ ಕಾಡನ್ನು ಕ್ಲಿಯರ್ ಫೆಲ್ಲಿಂಗ್ ಮಾಡಿದ್ದಾರೆ, ಸುತ್ತಾ ಎನ್ನುವಂಥ ಒಂದು ಊರಿನಲ್ಲಿ ಏನೂ ಇಲ್ಲದಿರುವಂಥ ಗಿಡಗಳನ್ನು ಪೂರ ಕಿತ್ತು ಹಾಕಿ ಅದಕ್ಕೆ ಈಗ ಅಕೇಶಿಯಾ ಎನ್ನುವಂಥ ಗಿಡಗಳನ್ನು ನೆಡುವಂಥ ಪ್ರಯತ್ನ ನಡೆಯುತ್ತಿದೆ. ನಾನು ಆ ರೇಂಜ್ ಆಫೀಸರ್ ಅವರನ್ನು ಕರೆದು ಕೇಳಿದೆ, ಏಕೆ, ಈ ರೀತಿ ಮಾಡುತ್ತಿದ್ದೀರಿ, ಕ್ಲಿಯರ್ ಫೆಲ್ಲಿಂಗ್ ಮಾಡುವುದರಿಂದ ಏನು ಲಾಭ ಸಿಗುತ್ತದೆ, ಕಾಡು ಏಕೆ ಹಾಳು ಮಾಡುತ್ತೀರಿ ಎಂದು ಕೇಳಿದರೆ, ಅದಕ್ಕೆ ಅವರು ಸಾರ್ ಅದರ ಮಧ್ಯದಲ್ಲಿ ಬುಲ್ಡೋಜರ್ ಹೋಗುವುದಿಲ್ಲ ಸಾರ್, ಅದರ ಮಧ್ಯೆ ಬುಲ್ಡೋಜರ್ ಹೋಗದೇ ಇದ್ದರೆ ನಮ್ಮ ಲೇಬರ್ ಕೆಲಸ ಮಾಡಿಸದಿದ್ದರೆ ವರ್ಕ್‌ಔಟ್

ಆಗುವುದಿಲ್ಲ, ಅದಕ್ಕೆ ಎಲ್ಲಾ ಕ್ಲಿಯರ್ ಫೆಲ್ಲಿಂಗ್ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಆ ರೀತಿ ಕ್ಲಿಯರ್ ಫೆಲ್ಲಿಂಗ್ ಮಾಡುವುದರಿಂದ ಮಲೆನಾಡಿನ ಕಾಡುಗಳನ್ನು ಹಾಳು ಮಾಡಿ ಅಕೇಶಿಯಾವನ್ನು ಇನ್ನೊಂದು ಐದಾರು ವರ್ಷಕ್ಕೆ ಕಡಿದು ಬಿಟ್ಟರೆ, ಮತ್ತೆ ಅದು ಕಾಡು ಇಲ್ಲದ ಹಾಗೆ ಆಗುತ್ತದೆ. ದಯಮಾಡಿ ಇದಕ್ಕೆ ಫಾರೆಸ್ಟ್ ಇಲಾಖೆ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಅಕೇಶಿಯಾ ಗಿಡಗಳನ್ನು ನೆಡುತ್ತಾ ನೆಡುತ್ತಾ ಏನು ಮಾಡುತ್ತಿದ್ದಾರೆಂದರೆ, ಎಲೆಕ್ಟ್ರಿಕ್ ಲೈನ್‌ಗಳ ಕೆಳಗಡೆ ಅಕೇಶಿಯಾ ನೆಡುತ್ತಾರೆ. ಇದನ್ನು ತಾವು ಇಡೀ ರಾಜ್ಯಕ್ಕೆ ಸೂಚನೆ ಕೊಡಬೇಕು, ಎಲೆಕ್ಟ್ರಿಕ್ ಲೈನ್ ಕೆಳಗಡೆ ಕಡೇ ಪಕ್ಷ 200 ಮೀಟರ್ ಅಗಲವಾದರೂ ಅಕೇಶಿಯಾ ನೆಡಬಾರದು ಎಂದು ಹೇಳಬೇಕು, ಇದರಿಂದ ಬಹಳ ಡ್ಯಾಮೇಜ್ ಆಗುತ್ತದೆ, ಅಕೇಶಿಯಾ ಮರ ಬೀಳುವುದರಿಂದ ಎಲೆಕ್ಟ್ರಿಕ್ ಕಂಬಗಳು ಲೈನಿಗೆ 10–15 ಮುರಿದು ಹೋಗುತ್ತದೆ. ಇದರಿಂದ ಸರ್ಕಾರಕ್ಕೆ ಬಹಳ ಲಾಸ್ ಆಗುತ್ತದೆ, ತಾವು ದಯಮಾಡಿ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಪಿ. ಕುಮಾರ್ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ಅಕೇಶಿಯಾ ಗಿಡವನ್ನು ಸ್ವಾಮಿ ಪರಿಸರ ದೃಷ್ಟಿಯಿಂದ ಪಕ್ಷಿಗಳ ದೃಷ್ಟಿಯಿಂದ ಮಾಡಿರುತ್ತೀರಿ, ನೀವು ಬೆಳೆಯುವ ಗಿಡದಲ್ಲಿ ಒಂದೇ ಒಂದು ಹಕ್ಕಿಯೂ ಕೂಡ ಗೂಡು ಕಟ್ಟುವುದಿಲ್ಲ, ನೀವು ಬೇಕಾದರೆ ನಮ್ಮ ಮಲೆನಾಡಿನಲ್ಲಿ ಬಂದು ನೋಡಿ, ನಿಮ್ಮ ಅಕೇಶಿಯಾ ಗಿಡದಲ್ಲಿ ಏನಾದರೂ ಹಕ್ಕಿಗಳು ಗೂಡು ಕಟ್ಟಿವೆಯೇ ಹೇಗೆ ಗೊತ್ತಾಗುತ್ತದೆ. ಆದುದರಿಂದ, ಪರಿಸರಕ್ಕೆ ಏನೂ ಪ್ರಯೋಜನವಿಲ್ಲವೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಡಿ.ಎನ್.ಜೀವರಾಜ್: ಎಲೆಕ್ಟ್ರಿಕ್ ಲೈನ್ ಕೆಳಗಡೆ ಅಕೇಶಿಯಾ ಗಿಡ ಇದನ್ನು ನೆಡಬಾರದೆಂದು ತಾವು ಶೀಘ್ರವಾಗಿ ಆದೇಶ ಹೊರಡಿಸಬೇಕೆಂದು ನಾನು ತಮ್ಮ ಹತ್ತಿರ ಒತ್ತಾಯ ಮಾಡುತ್ತೇನೆ. ಎಲೆಕ್ಟ್ರಿಕ್ ಲೈನ್ ಕೆಳಗಡೆ ಇರುವಂಥ ಅಕೇಶಿಯಾ ಮರಗಳನ್ನು ಅದು ಸಣ್ಣದು ಇದ್ದರೂ ಈಗಲೇ ಕಡಿಸಬೇಕೆಂದು ನಿಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ಹೇಳುತ್ತಿದ್ದೆ ದಕ್ಷ ಅಧಿಕಾರಿಗಳನ್ನು ಹಾಗಿ ಕೊಟ್ಟಿದ್ದೀರಿ, ಅದಕ್ಕೆ ಸರ್ಕಾರವನ್ನು ನಾನು ಅಭಿನಂದಿಸಬೇಕಾಗುತ್ತದೆ. ದಕ್ಷ ಅಧಿಕಾರಿಗಳನ್ನು ಹಾಕಿದ ಕೂಡಲೇ ಕಳ್ಳರಿಗೆ ಕಾಕರಿಗೆ ಸ್ವಲ್ಪ ಕಷ್ಟವಾಗುತ್ತದೆ, ಏಕೆಂದರೆ, ರಸ್ತೆ ಮಧ್ಯೆ ಇರುವಂಥವರು ಅವರದೇ ತಾಪತ್ರಯ ಜಾಸ್ತಿಯಾಗಿದೆ. ಹೀಗಾಗಿ ಕೆಲಸ ಮಾಡುವಂಥ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕಾಗುತ್ತದೆ, ರಕ್ಷಣೆ ಕೊಡುವ ಅವಶ್ಯಕತೆ ಸರ್ಕಾರದ ಕಡೆ ಇದೆ ಎಂದು ಹೇಳುತ್ತಾ ನಾವು ಮಲ್ನಾಡ್‌ನಲ್ಲಿ ಇರಬಹುದು, ಎಲ್ಲಾ ಕಡೆ ಗಂಧ ಸಾಗಿಸುತ್ತಿದ್ದ ಕಾರುಗಳನ್ನು ನಾಟ ಸಾಗಿಸುತ್ತಿದ್ದ ಲಾರಿಗಳನ್ನು ಹಿಡಿದಾಗ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ನೀವು ನಿಲ್ಲಿಸುತ್ತೀರಿ, ಇದನ್ನು ನಿಲ್ಲಿಸಿ ಇದಕ್ಕೆ ಓನರ್ ಯಾರೆಂದು ಡಿಕ್ಲೇರ್ ಆಗಿಲ್ಲ ಎನ್ನುವ ಕಾರಣಕ್ಕಾಗಿ ಆ ವೆಹಿಕಲ್ಸ್‌ಗಳು ಮೂರು ವರ್ಷ ನಾಲ್ಕು ವರ್ಷ ನಿಲ್ಲುತ್ತವೆ. ಇದರಿಂದ ಸರ್ಕಾರಕ್ಕೆ ಲಾಸ್ ಆಗುತ್ತದೆ, ಕೊನೆಯ ಪಕ್ಷ ಒಂದು ಟೈಮ್ ಲಿಮಿಟ್ ಫಿಕ್ಸ್ ಮಾಡಬೇಕು, ಎರಡು ತಿಂಗಳು ಅಥವಾ ಮೂರು ತಿಂಗಳಲ್ಲಿ ಈ ಕಾರುಗಳಿಗೆ ಅದರ ಓನರ್ ಯಾರು ಎಂದು ಅದರ ಕ್ಲೈಮ್ ತೆಗೆದುಕೊಂಡು ಹೋಗದೇ ಹೋದರೆ, ಆ ಕಾರನ್ನು ಆಕ್ಷನ್ ಮಾಡಿ ಆ ದುಡ್ಡನ್ನು ಬ್ಯಾಂಕಿನಲ್ಲಿಡುವಂಥದ್ದು ಏನೋ ಒಂದು ಮಾಡದೇ ಇದ್ದರೆ ಅಲ್ಲಿ ಏನಾಗುತ್ತದೆಂದರೆ, ಹೋಗುವವನು ಬರುವವನು ಆ ವೆಹಿಕಲ್ಸ್‌ನ ಬೇಕಾದ ಸಾಮಾನುಗಳನ್ನು ಬಿಚ್ಚಿಕೊಂಡು ಹೋಗಿ ಕೊನೆಗೆ ಅದರ ಸಾಮಾನು ಇಲ್ಲ, ಇನ್ನೊಂದು ಕಡೆ ಅದು ರೆಸ್ಟ್ ಹಿಡಿದು ಹೋಗುತ್ತದೆ. ಅಷ್ಟೊಂದು ಲಾರಿಗಳನ್ನು

ನಿಲ್ಲಿಸಲಿಕ್ಕೆ, ಕಾರುಗಳನ್ನು ನಿಲ್ಲಿಸಲಿಕ್ಕೆ ನಮ್ಮಲ್ಲಿ ಯಾವುದೇ ವ್ಯವಸ್ಥೆಯಿಲ್ಲ. ಹೀಗಾಗಿ ಅದನ್ನು ಮೂರು ನಾಲ್ಕು ತಿಂಗಳೊಳಗೆ ಆಕ್ಷನ್ ಹಾಕುವಂತೆ ಮಾಡಬೇಕು. ನಮ್ಮ ಕೊಪ್ಪದಲ್ಲಿ ಆಗಿತ್ತು, ಗಂಧ ಸಾಗಿಸುತ್ತಿದ್ದ ಒಂದು ಕಾರನ್ನು ಹಿಡಿದಾಗ ಅಲ್ಲಿರುವ ಡಿಎಫ್‌ಓ ನಂಬರ್ ಪ್ಲೇಟ್ ಚೇಂಜ್ ಮಾಡಿ ಓಡಿಸುತ್ತಿದ್ದ ಎಂದು ಹಿಂದಿನ ಸಾರಿ ಇದೇ ಸದನದಲ್ಲಿ ಅದನ್ನು ಮಾನ್ಯ ಧರ್ಮೇಗೌಡರವರು ಪ್ರಸ್ತಾಪ ಮಾಡಿದ್ದರು, ಆಗ ಚರ್ಚೆಗೆ ಬಂದಿತ್ತು. ಹೀಗಾಗಿ ಈ ರೀತಿಯಾಗದೆ ಇರುವಂಥ ವ್ಯವಸ್ಥೆ ಮಾಡಬೇಕಾದರೆ ನಾವು ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ನಾವು ಒಂದು ಕಡೆ ಕಾಡನ್ನು ಮಾಡುತ್ತೇವೆ, ಗಿಡ ನೆಡುತ್ತೇವೆ, ಈ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾ ಮಾಡುತ್ತಾ, ಕುದುರೆ ಮುಖ್ಯ ರಾಷ್ಟ್ರೀಯ ಉದ್ಯಾನವನದಂಥ ದೊಡ್ಡ ಕಾಡನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಮಾಡಬೇಕೆಂದು ಯೋಚಿಸಿದ್ದೇವೆ, ಅದು ತಪ್ಪು ಎಂದು ಹೇಳುವುದಿಲ್ಲ. ಅದರ ಬಗ್ಗೆ ಸರ್ಕಾರ ನಿರ್ಧಾರವನ್ನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಲ್ಲಿರುವಂಥ ಗಿರಿಜನರನ್ನು, ಎಲ್ಲಾ ಜನರನ್ನು, ಗಿರಿಜನ ಎನ್ನುವಂಥ ಪದವನ್ನು ನಾವು ಎಲ್ಲಾ ಕಡೆ ಪ್ರಸ್ತಾಪ ಮಾಡುತ್ತೇವೆ, ಇದು ತಪ್ಪು, ಇಲ್ಲಿ ಗಿರಿಜನರು ಇದ್ದಾರೆ, ಬ್ರಾಹ್ಮಣರು, ಇದ್ದಾರೆ, ಶೆಟ್ಟರು ಇದ್ದಾರೆ, ಗೌಡರು ಇದ್ದಾರೆ, ಎಲ್ಲಾ ಜಾತಿಯ ಜನಾಂಗದವರು ಇದ್ದಾರೆ, ಅಲ್ಲಿರುವಂಥ ಕಾಡಿನ ಮಧ್ಯೆದಲ್ಲಿ ವಾಸ ಮಾಡುವಂಥ ಜನರನ್ನು ನಾವು ಅಲ್ಲಿ ಬಿಡುತ್ತೇವೆಯೋ ಇಲ್ಲಾ ಅವರನ್ನು ಹೊರಗೆ ಕಳುಹಿಸುತ್ತೇವೆಯೋ ಅದನ್ನು ಸ್ಪಷ್ಟವಾಗಿ ನಾವು ಹೇಳದೆ ಹೋದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಕೆ. ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೆ, ಅದರೊಟ್ಟಿಗೆ ಅಭಯಾರಣ್ಯದಲ್ಲಿ ವಾಸ ಮಾಡಿಕೊಂಡಿರುವಂಥ ಅನೇಕ ಜನ ಇದ್ದಾರೆ, ಮಲೆನಾಡು ಪ್ರದೇಶದಲ್ಲಿ ಜಾಸ್ತಿ ಜನ ಇದ್ದಾರೆ, ಅದರ ಬಗ್ಗೆ ಈಗಾಗಲೇ ಕೆಲವು ಕಡೆಗಳಲ್ಲಿ ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ಹಾಗೂ ಬೇರೆ ಕಡೆಗಳಲ್ಲಿ ಕೂಡ ಅದರ ಬಗ್ಗೆ ಹೋರಾಟಗಳು ಆಗುತ್ತಿವೆ. ಅವರ ಜಾಗವನ್ನು ಗುರುತು ಮಾಡುವಂಥದ್ದು ಆಗಬೇಕು, ಸರ್ವೆ ಮಾಡುವಂಥದ್ದು ಆಗಬೇಕು, ನಾನು ತಮ್ಮ ಮೂಲಕ ಒತ್ತಾಯ ಮಾಡುವುದು ಇಷ್ಟೆ, ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಅವರು ಒಟ್ಟಿಗೆ ಇದ್ದು ಸರ್ವೆ ಮಾಡಬೇಕು, ಎಷ್ಟು ಜಾಗದಲ್ಲಿ ಅವನು ಕೃಷಿ ಮಾಡಿದ್ದಾನೆಂದು ಗುರುತು ಮಾಡುವಂಥದ್ದನ್ನು ತಾವು ಮಾಡಿಕೊಂಡು ಅವನಿಗೆ ರಕ್ಷಣೆಯನ್ನು ಕೊಡಬೇಕು ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಬಾರದು ಎಂದು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಡಿ.ಎನ್. ಜೀವರಾಜ್: ಅವರನ್ನು ಅಲ್ಲಿ ಏನು ಮಾಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳದೆ ಇರುವುದರಿಂದ ನಮಗೆ ಬಹಳ ಸಮಸ್ಯೆಗಳು ಉದ್ಭವವಾಗಿವೆ. ಒಂದು ಕಡೆ ಅಲ್ಲಿರುವಂಥ 250 ಕುಟುಂಬಗಳು ನಮ್ಮನ್ನು ಕೇಳುತ್ತಾರೆ ನೀವು ಹೊರಗೆ ಕಳುಹಿಸುತ್ತೀರಾ? ಹೊರಗೆ ಕಳುಹಿಸುವುದಾದರೆ ನಮಗೆ ಪರಿಹಾರ ಕೊಡುವುದಾದರೆ ನಮಗೆ ಕೊಟ್ಟರೆ ನಾವು ಹೋಗಿಬಿಡುತ್ತೇವೆಂದು ಹೇಳುತ್ತಾರೆ. ಹೋಗುವವರನ್ನು ಕಳುಹಿಸುತ್ತೀರಾ. ಇಲ್ಲಾ ಅಲ್ಲಿಯೇ ಬಿಡುತ್ತೀರಾ ಎಂಬುದರ ಬಗ್ಗೆ ಸ್ಪಷ್ಟವಾದ ನಿರ್ಧಾರ ಹೇಳಬೇಕಾಗುತ್ತದೆ. ನಂತರ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನಾವು ಯಾವ ರೀತಿ ನಿರ್ಧಾರಗಳನ್ನು ಮಾಡುತ್ತೇವೆ ಎಂದರೆ, ಎಲ್ಲೋ ಒಂದು ಕಡೆ ನಕ್ಸಲ್‌ರು ಬಂದು ಯಾರನ್ನೋ ಹೊಡೆದರು ಯಾರದೋ ಮನೆಯಲ್ಲಿ ಯಾರನ್ನೋ ಸಾಯಿಸಿದರು, ಈ ತರಹ ಆದಾಗ ಕೂಡಲೇ ಆ ಊರಿಗೆ ಲೈಟ್ ಕೊಡುತ್ತೇವೆಂದು ಹೇಳುತ್ತಾ, ಸೋಲಾರ್ ಲೈಟ್‌ನ್ನು ಹಿಡಿದುಕೊಂಡು ಹೋಗಿಬಿಡುತ್ತೇವೆ. ನಾವು ಇದನ್ನು ಮಾಡುವುದಕ್ಕಿಂಥ ನಾವು ಅಲ್ಲಿ ಏನು ಮಾಡುತ್ತಿದ್ದೇವೆ ಎಂಬುದು ಮುಖ್ಯ. ನಕ್ಸಲ್‌ರು ಬಂದು ಹೋದ ಮೇಲೆ ನಾವು ಸೋಲಾರ್

ಲೈಟ್ಸ್‌ಗಳನ್ನು ಹಿಡಿದುಕೊಂಡು ಹೋಗುವುದಲ್ಲ, ಅದಕ್ಕಿಂತ ಮುಂಚೆ ಆ ಭಾಗದ ಜನರಿಗೆ ಏನೇನು ಸವಲತ್ತು ಕೊಡಬೇಕೋ ಅದನ್ನು ಕೊಡುವಂಥದ್ದರ ಕಡೆಗೆ ಗಮನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ನಕ್ಸಲ್‌ರು ಬಂದು ಹೋದ ಮೇಲೆ ನಾವು 'ಲೈಟ್ ಕೊಟ್ಟ ಕೂಡಲೇ, ಅವನು ಬೆಳಿಗ್ಗೆ ಬಂದು ನಕ್ಸಲ್ ಏನು ಹೇಳುತ್ತಾನೆಂದರೆ, ನೋಡಪ್ಪಾ ನಾನು ಬಂದಿದ್ದರಿಂದ ನಿಮಗೆ ಈ ಲೈಟ್ ಸಿಕ್ಕಿತು, ಇಲ್ಲದಿದ್ದರೆ ಸಿಕ್ಕುತ್ತಿತ್ತಾ? ಹೀಗಾಗಿ ನಾನೇ ಬಲ ಎಂದು ಹೇಳುತ್ತಾನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಸದಸ್ಯರೇನು ಹೇಳುತ್ತಿದ್ದಾರೆ ಅದು ನೂರಕ್ಕೆ ನೂರರಷ್ಟು ಸತ್ಯ. ನೀವು ಕಾರ್ಯಕ್ರಮ ಹಾಕುವುದು ಸಮಸ್ಯೆ ಉದ್ಭವ ಆದಮೇಲೆ, ಮೊದಲೇ ಸಮಸ್ಯೆ ಏನಿದೆ ಎಂದು ಅದನ್ನು ನಿಮ್ಮ ಅಧಿಕಾರಿಗಳು ಅರಿವು ಮಾಡಿಕೊಂಡು ಅಲ್ಲಿ ಅವರ ಆರ್‌ಟಿಸಿಯಲ್ಲಿ ಫಾರೆಸ್ಟ್ ಲ್ಯಾಂಡ್ ಎಂದು ಎಂಟ್ರಿ ಚೇಂಜ್ ಮಾಡಲಿಲ್ಲ, ಗೊತ್ತಿಲ್ಲದೆ ಅನೇಕ ಜನ ಹೋಗಿ ಸರ್ಕಾರಿ ಭೂಮಿ ಎಂದು ಕುಳಿತಿದ್ದಾರೆ. ಈಗ ಅದು ಅರಣ್ಯಭೂಮಿ ಎಂದು ಒಕ್ಕಲೆಬ್ಬಿಸಲಿಕ್ಕೆ ಹೋದರೆ, ಅವರು ಕೇಳುತ್ತಾರೆ: ಮಾಡದೆ ಇದ್ದಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಇವರನ್ನು ಒಕ್ಕಲೆಬ್ಬಿಸಲಿಕ್ಕೆ ಹೋಗಬೇಡಿ. ಇದರಿಂದ ಈ ನಕ್ಸಲ್ ಸಮಸ್ಯೆ ಇನ್ನೂ ಉಲ್ಬಣಗೊಳ್ಳುತ್ತದೆ ಎಂದು ತಮಗೆ ಹೇಳಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ಬಹಳ ಸೀರಿಯೆಸ್ಸಾಗಿ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತಾ, ಸರ್ಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಚಿರಂಜೀವಿ ಸಿಂಗ್‌ರವರನ್ನು ಕಳುಹಿಸಿದರು, ವಿಜಯ ಗೋರೆ ಅವರನ್ನು ಕಳುಹಿಸಿದರು, ಹೋದವರೆಲ್ಲರೂ ಅಲ್ಲಿ ಹೇಳಿ ಬಂದರು, ಒಬ್ಬರು 60 ಕೋಟಿ ರೂ. ಪ್ಯಾಕೇಜ್ ಹೇಳಿದರು, ಇನ್ನೊಬ್ಬರು ಗಿರಿಜನರ ಮಕ್ಕಳಿಗೆ ಯಾವುದೇ ತರಹದ ವಿದ್ಯಾಭ್ಯಾಸಕ್ಕೆ ತೊಂದರೆಯಿಲ್ಲ, ನಿಮಗೆಲ್ಲಾ ಶೃಂಗೇರಿ ಹಾಸ್ಟೆಲ್‌ನಲ್ಲಿ ಸ್ಥಾನ ಕಲ್ಪಿಸುತ್ತೇವೆಂದು ಹೇಳಿ ಬಂದರು. ಆದರೆ ಯಾರೊಬ್ಬರಿಗೆ ಈವರೆಗೆ ಅಲ್ಲಿರುವಂಥ ಗಿರಿಜನರ ಮಕ್ಕಳಿಗಾಗಲಿ ಅಥವಾ ಬೇರೆ ಮಕ್ಕಳಿಗಾಗಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಡೆ ಇರುವವರಿಗೆ ನಕ್ಸಲ್‌ಪೀಡಿತ ಪ್ರದೇಶದ ಒಳಗಡೆ ಇರುವವರಿಗೆ ಹಾಸ್ಟೆಲ್ ಸೀಟ್ ಕೊಡಲಿಲ್ಲ. ನಾನು ಮೊನ್ನೆ ಹೇಳಿದೆ, ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ತಾವು ದಯಮಾಡಿ ಹೊಸ ಹಾಸ್ಟೆಲ್ಸ್ ತೆಗೆಯಲಿಕ್ಕೆ ಆಗದಿದ್ದರೆ ತಕ್ಷಣವೆ ಆ ಮಕ್ಕಳಿಗೆ ಸೀಟುಗಳನ್ನಾದರೂ ಹೆಚ್ಚಿಸಿ ಎಂದು ಕೇಳುತ್ತಿದ್ದೇನೆ. ಅದನ್ನು ಮಾಡದೇ ಹೋದರೆ, ನಾವು ಯಾವುದೇ ಕಾರಣಕ್ಕೆ ಅಲ್ಲಿರುವಂಥ ಜನಗಳನ್ನು ಸರ್ಕಾರದ ಪರವಾಗಿ ಯೋಚನೆಗಳಿಗೆ ತರಲಿಕ್ಕೆ ಸಾಧ್ಯವಿಲ್ಲ. ಅವರ ಯೋಚನೆಗಳು ಪೂರ್ತಿ ನಕ್ಸಲೀಯರ ಪರವಾಗಿರುವ ಯೋಚನೆಗಳು ಇವೆ. ಇದಾಗಬಾರದೆನ್ನುವ ನನ್ನ ಕಳಕಳಿ ಇದೆ, ಸರ್ಕಾರ ಇದರ ಬಗ್ಗೆ ಶೀಘ್ರವಾಗಿ ಗಮನ ಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿರುವ ಜನ ಮಾತನಾಡುತ್ತಾರೆ. ಏನ್ರಿ ಯಾರಾದರೂ ಸತ್ತರೆ ಆ ಮನೆಗೆ ಬಂದು ದುಡ್ಡು ಕೊಡುತ್ತಾರೆ, ಇಲ್ಲದಿದ್ದರೆ ಅದೂ ಇಲ್ಲ ಕಣ್ರಿ ಎಂದು ಮಾತನಾಡುತ್ತಾರೆ, ಸತ್ತವರಿಗೆ ನಾಲ್ಕು ಲಕ್ಷ ರೂಪಾಯಿ ಕೊಡುತ್ತೇವೆಂದು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಶೇಷಪ್ಪನವರಿಗೆ ಹೇಳಿ ಬಂದರು. ಎರಡು ಲಕ್ಷ ರೂಪಾಯಿ ಮಾತ್ರ ಸರ್ಕಾರ ಕೊಟ್ಟಿತು, ಉಳಿದ ಹಣವನ್ನು ಕೊಡಲಿಲ್ಲ, ಇನ್ನು ಎರಡು ಲಕ್ಷ ರೂ. ಯಾವಾಗ ಕೊಡುತ್ತೀರಿ? ಗಿರಿಜನರ ಮನೆಯವರು ಸತ್ತು ಹೋಗಿದ್ದಾರೆ, ಅಟ್ರಾಸಿಟಿ ಆಗಿದೆ, ಅವರ ಮಗನಿಗೆ ಯಾವಾಗ ಕೆಲಸ ಕೊಡುತ್ತೀರಿ? ಇದನ್ನೆಲ್ಲಾ

ಸರ್ಕಾರ ಗಮನಿಸಬೇಕು, ಅಲ್ಲಿ ಏನೋ ಒಂದು ಗಲಾಟೆ ಹೊಡೆದಾಟವಾದ ಮೇಲೆ, ಚಳುವಳಿ ಆದ ಮೇಲೆ ಕೊಡುವುದಕ್ಕಿಂತ ಮುಂಚೆ, ನಮಗೆ ಜವಾಬ್ದಾರಿ ಇದೆ ಎಂದು ಸರ್ಕಾರ ಅರಿತುಕೊಂಡು ಕೆಲಸ ಮಾಡಬೇಕು. ನಮ್ಮ ಇಚ್ಛಾಶಕ್ತಿಯನ್ನು ಪ್ರಯೋಗ ಮಾಡಬೇಕೆಂದು ನಾನು ತಮ್ಮ ಹತ್ತಿರ ಕೇಳುತ್ತೇನೆ. ವಿಜಯ್‌ಗೋರೆ ಮತ್ತು ಚಿರಂಜೀವಿಸಿಂಗ್‌ರವರ ಪ್ಯಾಕೇಜ್ ಎಲ್ಲಿಗೆ ಹೋಯಿತು ಎಂಬುದು ಗೊತ್ತಿಲ್ಲ. ಎಲ್ಲವನ್ನು ಪ್ಯಾಕ್‌ಮಾಡಿ ಕಟ್ಟಿಟ್ಟಾಗಿದೆ. ಇದರ ಬಗ್ಗೆ ಮೊನ್ನೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ಡಿಸೀಷನ್ ಆಗಿದೆ. ನಕ್ಸಲ್ ಪ್ರದೇಶದೊಳಗಡೆ 3 ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕು. ಆ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆವಿಗೆ ಆ ಮೂರು ಕೋಟಿ ರೂಪಾಯಿಗಳ ಹಣ ಬಿಡುಗಡೆಯಾಗಲಿಲ್ಲ. ಆ ಮೂರು ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದರೆ ಕನಿಷ್ಠಪಕ್ಷ ಆ ಭಾಗದಲ್ಲಿ ಕೆಲಸಗಳು ಆಗುತ್ತಿತ್ತು. ತಾವು ದಯವಿಟ್ಟು ಮಾಡಿ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಕಡೆಗೆ ಗಮನಹರಿಸಬೇಕೆಂದು ಕೇಳುತ್ತೇನೆ. ಬಹಳ ಆಶ್ಚರ್ಯದ ವಿಚಾರ, ನನ್ನ ಕ್ಷೇತ್ರದೊಳಗಡೆ ಜಯಪುರ ಎಂಬ ಪೊಲೀಸ್ ಸ್ಟೇಷನ್ ಇದೆ, ಇದು ಅರಣ್ಯ ಇಲಾಖೆಗೆ ಸಂಬಂಧಪಡದೆ ಇದ್ದರೂ ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದ್ದರಿಂದ ಹೇಳುತ್ತಿದ್ದೇನೆ. ಆ ಜಯಪುರ ಸ್ಟೇಷನ್‌ಗೆ ರಾತ್ರಿ ವೇಳೆ ಬೀಗ ಹಾಕುತ್ತಾರೆ. ಏತಕ್ಕಾಗಿ ಬೀಗ ಹಾಕುತ್ತಾರೆಂದರೆ ಪೊಲೀಸ್‌ನವರಿಗೆ ನಕ್ಸಲ್‌ರು ಬಂದು ಹೊಡೆಯುತ್ತಾರೆಂಬ ಹೆದರಿಕೆ ಇದೆ. ಪೊಲೀಸ್ ಸ್ಟೇಷನ್‌ಗೆ ಬೀಗ ಹಾಕಿಕೊಳ್ಳುವಂತಹ ಪರಿಸ್ಥಿತಿ ಉದ್ಭವವಾದರೆ ಇನ್ನು ನಾಗರೀಕರಿಗೆ ನಾವು ಏನು ರಕ್ಷಣೆಯನ್ನು ಕೊಡುತ್ತೇವೆ; ನಾವು ಜನಪ್ರತಿನಿಧಿಗಳು ತಲೆ ಎತ್ತಿಕೊಂಡು ಸುತ್ತಿ ಬರುವುದಕ್ಕಾಗುತ್ತದೆಯೇ? ಇದರ ಬಗ್ಗೆ ನಾನು ಪೊಲೀಸ್ ಹಿರಿಯ ಅಧಿಕಾರಿಗಳ ಜೊತೆ ಮಾತನಾಡಿದೆ. ನಂತರ ಒಂದು ಹೊಸ ಬೆಳವಣಿಗೆಯಾಯಿತು ಏನೆಂದರೆ ಮುಂಚೆ ಬೀಗ ಹಾಕುತ್ತಿದ್ದರು, ಈಗ ಬೀಗ ತೆಗೆದು ಖಾಲಿ ಸ್ಟೇಷನ್ ಬಿಟ್ಟು ಹೋಗುತ್ತಿದ್ದಾರೆ. ಒಂದು ಸ್ಟೇಷನ್‌ನ್ನು ಬೀಗ ಹಾಕಿಕೊಂಡು ಹೋಗುವುದು 75 ವರ್ಷಗಳ ಇತಿಹಾಸ ಇರುವಂತಹ ಸ್ಟೇಷನ್‌ನ್ನು ಕರ್ನಾಟಕ ರಾಜ್ಯವನ್ನು ಆಳುತ್ತಿರುವವರು ನಾವು ತಲೆ ತಗ್ಗಿಸಬೇಕಾಗಿದೆ. ಇದರ ಬಗ್ಗೆ ಸರ್ಕಾರ ಶೀಘ್ರವಾಗಿ ಕ್ರಮತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಒಂದು ಕಡೆ ರಾಷ್ಟ್ರೀಯ ಉದ್ಯಾನವನ ಮಾಡುತ್ತೇವೆ, ಕುದುರೆಮುಖ ಪಶ್ಚಿಮಘಟ್ಟಗಳ ಅತ್ಯುನ್ನತ ಶ್ರೇಣಿ ಎಂದು ಹೇಳುತ್ತೇವೆ. ಇನ್ನೊಂದು ಕಡೆ ಅಧ್ಯಕ್ಷರೆ, ಅದೇ ಪಶ್ಚಿಮಘಟ್ಟದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಡೆ ನಾವು ಕುದುರೆಮುಖ ಕಬ್ಬಿಣದ ಅದಿರನ್ನು ತೆಗೆಯುತ್ತೇವೆಂದು ಬಿಟ್ಟಿದ್ದೇವೆ. ಅದು 2005ರ ಡಿಸೆಂಬರ್ ವೇಳೆಗೆ ಮುಗಿಯಬೇಕೆಂದು ಸುಪ್ರೀಂಕೋರ್ಟ್ ಆದೇಶವಾಗಿದೆ. ನಾನು ಮೊನ್ನೆ ಪತ್ರಿಕೆಯಲ್ಲಿ ಓದಿದೆ ಅದು ಎಷ್ಟು ಸತ್ಯವೋ ಏನೋ ಗೊತ್ತಿಲ್ಲ. ಸರ್ಕಾರ ಅದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಪತ್ರಿಕೆಯಲ್ಲಿ ಏನಿದೆ ಅಂದರೆ ಕುದುರೆಮುಖ ಅದಿರು ಫ್ಯಾಕ್ಟರಿ ಮುಚ್ಚಿಹೋದರೆ ಅದು ನಕ್ಸಲ್‌ರ ಕೇಂದ್ರಸ್ಥಾನ ಆಗಿಬಿಡುತ್ತದೆ. ಹಾಗಾಗಿ ಆ ಫ್ಯಾಕ್ಟರಿ ಇರಬೇಕೆಂದು ಪೊಲೀಸ್ ಹಿರಿಯ ಅಧಿಕಾರಿಗಳು ಇಂಟಲಿಜೆನ್ಸಿ ರಿಪೋರ್ಟ್ ಕಳುಹಿಸಿದ್ದಾರೆ. ಕೋರ್ಟು ಅದಕ್ಕಾಗಿ ಎಕ್ಸ್‌ಟೆನ್‌ಷನ್ ಕೊಡುತ್ತಿದೆ ಎಂದು ಹೇಳುತ್ತಿದ್ದಾರೆ. ಇದೇನಾದರೂ ಆಗುವುದಿದ್ದರೆ ಇದರಂತಹ ದುರಂತ ಇನ್ನೊಂದಿಲ್ಲ. ಯಾವುದೇ ಕಾರಣಕ್ಕಾಗಿಯಾದರೂ ಫ್ಯಾಕ್ಟರಿ ರನ್ ಆಗುವುದು ಬೇಡ ಅಲ್ಲಿ ಫ್ಯಾಕ್ಟರಿ ಮುಚ್ಚಬೇಕು. ಫ್ಯಾಕ್ಟರಿಯನ್ನು ಇಟ್ಟುಕೊಂಡು ರಾಷ್ಟ್ರೀಯ ಉದ್ಯಾನವನ ಮಾಡಿದರೆ,

ಗೋಣಿಚೀಲದೊಳಗಡೆ ಇಲಿಯನ್ನು ಇಟ್ಟುಕೊಂಡ ಹಾಗೆ ಆಗುತ್ತದೆ. ಅದು ರಾಷ್ಟ್ರೀಯ ಉದ್ಯಾನವನ ಆಗುವುದಿಲ್ಲ. ಕುದುರೆಮುಖ ಫ್ಯಾಕ್ಟರಿ ಮುಚ್ಚುವಂತಹದ್ದು ಶೀಘ್ರಗತಿಯಲ್ಲಿ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರ ಬಗ್ಗೆ ಪೇಪರ್‌ನಲ್ಲಿ ಬಂದಿರುವಂತಹ ವಿಷಯ ಸತ್ಯವೋ ಅಥವಾ ಸುಳ್ಳೋ ಎನ್ನುವುದರ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಒಳಗಡೆಯೆ ಲಕ್ಯಡ್ಯಾಂ ಬರುತ್ತದೆ. ಅದನ್ನು ಮಾಡಿರುವುದು ಕುದುರೆಮುಖ ಫ್ಯಾಕ್ಟರಿಗೆ ಅನುಕೂಲವಾಗಲಿ, ಅಲ್ಲಿಂದ ಅದಿರನ್ನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಆ ಕಾರ್ಖಾನೆ ಮುಚ್ಚಿದ ಮೇಲೆ ಆ ಡ್ಯಾಮ್‌ನ ನೀರನ್ನು ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗುತ್ತೇವೆ, ಮಾಗುಂಡಿಯಲ್ಲಿ ಡ್ಯಾಂ ಮಾಡಿ ಎಂದು ಹೇಳುತ್ತಾರಲ್ಲಾ, ಅದಕ್ಕೂ ಮತ್ತು ಇದಕ್ಕೂ ಬಹಳ ಹತ್ತಿರದಲ್ಲಿ ಇದೆ. ಅದು 25 ಕಿಲೋ ಮೀಟರ್ ದೂರದಲ್ಲಿದೆ, ಹಾಗೂ ಹೈಟ್‌ನಲ್ಲಿದೆ. ಆ ಡ್ಯಾಂನಲ್ಲಿರುವಂತಹ ಸಿಲ್ಟ್‌ನ್ನು ತೆಗೆದು ಅದನ್ನು ಸ್ವಲ್ಪ ರಿಪೇರಿ ಮಾಡಿ ಚಿತ್ರದುರ್ಗಕ್ಕೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗುತ್ತೀರೋ ಅದು ಏನು ಮಾಡುತ್ತೀರೋ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದರಿಂದ ಪರಿಸರದ ಮೇಲೆ ಹೊಸದಾಗಿ ಪರಿಣಾಮ ಬೀರುವುದು ಏನೂ ಇಲ್ಲ. ಇರುವಂತಹ ಡ್ಯಾಂಗೆ ಹೊಸದಾಗಿ ಚಾನಲ್‌ಗಳನ್ನು ಮಾಡಿ ನೀರು ತೆಗೆದುಕೊಂಡು ಹೋಗುವುದರಿಂದ ಪರಿಸರವು ಉಳಿಯುತ್ತದೆ. ಮಲೆನಾಡು ಸಹ ಉಳಿಯುತ್ತದೆ, ನಮ್ಮ ಮಾನ್ಯ ಆಂಜನೇಯರವರ ಗಲಾಟೆಯೂ ಕೂಡ ಉಳಿಯುತ್ತದೆ, ಎಂದು ಹೇಳಿ ನಾನು ತಮ್ಮ ಹತ್ತಿರ ಒತ್ತಾಯ ಮಾಡುತ್ತೇನೆ. ಬಹಳ ಇನ್ನೊಂದು ಆಶ್ಚರ್ಯವೆಂದರೆ, ಯಾರೋ ಆಗದೆ ಇರುವವನು ಪಕ್ಕದ ಮನೆಯ ಜಾಗಕ್ಕೆ ಇವನು ಒತ್ತುವರಿ ಮಾಡಿದ್ದಾನೆಂದು ಪತ್ರ ಬರೆಯುತ್ತಾನೆ. ನಮ್ಮ ಮುಖ್ಯಮಂತ್ರಿಗಳ ಕಛೇರಿಯಿಂದ ಈ ಒತ್ತುವರಿ ಮಾಡಿದ್ದವರ ಬಗ್ಗೆ ಇದನ್ನು ನೋಡಿ, ಇದನ್ನು ಖುಲ್ಲಾ ಮಾಡಿಸಿ, ನನಗೆ ಒಂದು ವರದಿಯನ್ನು ಕಳುಹಿಸಿ ಎಂದು ಕಳುಹಿಸಿಬಿಡುತ್ತಾರೆ. ಅಲ್ಲಿ ಒತ್ತುವರಿ ಮಾಡಿದ್ದಾರೋ ಇಲ್ಲವೋ ಎಂದು ಗೊತ್ತಿದೆಯಾ? ಸಿ.ಎಂ. ಆಫೀಸ್‌ನಿಂದ ಆರ್ಡರ್ ಬಂದಿದೆ ಎಂದ ಕೂಡಲೇ ರೇಂಜರ್‌ರವರು ಹಿಂದೆ ಮುಂದೆ ನೋಡುವುದಿಲ್ಲ, ಜೀಪನ್ನು ತೆಗೆದುಕೊಂಡು ಹೊರಟರು ಅಲ್ಲಿ 15–20 ವರ್ಷಗಳ ಹಿಂದೆ ಅಡಿಕೆ ಗಿಡಗಳನ್ನು ಹಾಕಿರುತ್ತಾರೆ, ಅದನ್ನು ಕಡಿಯುತ್ತೇವೆಂದು ಹೇಳುತ್ತಾರೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಬಹಳ ಸೀರಿಯಸ್ಸಾಗಿ ಒತ್ತಾಯವನ್ನು ಮಾಡುತ್ತೇನೆ. ಸರ್ಕಾರಕ್ಕೆ ಆ ತರಹ ಮೂಕರ್ಜಿ ಬಂದಿದ್ದಕ್ಕೆ ಮುಖ್ಯಮಂತ್ರಿಗಳ ಕಛೇರಿಯಿಂದ ಉತ್ತರವನ್ನು ಬರೆಯುವುದು, ಇಲ್ಲ ಕ್ಲಾರಿಫಿಕೇಷನನ್ನು ಕೇಳುವುದನ್ನು ನಿಲ್ಲಿಸಬೇಕು. ಇದರಿಂದ ರೈತರ ಮೇಲೆ ತೀವ್ರ ಪರಿಣಾಮವಾಗುತ್ತದೆಂದು ನಾನು ತಮ್ಮ ಹತ್ತಿರ ಒತ್ತಾಯ ಮಾಡುತ್ತೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿರುವಂತಹ ಹಿರಿಯ ಐಎಫ್‌ಎಸ್ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗ ಮಾಡಿಬಿಟ್ಟಿದ್ದೀರಿ. ಇದನ್ನು ತಕ್ಷಣ ನಿಲ್ಲಿಸಿ ಅವರನ್ನು ವಾಪಸ್ಸು ಕರೆಸಬೇಕು. ಅವರನ್ನು ಯಾವ ಯಾವ ಇಲಾಖೆಗಳಿಗೆ ವರ್ಗಾವಣೆ ಮಾಡಿದ್ದಿರೋ ಅವರನ್ನು ವಾಪಸ್ಸು ಕರೆಸಿ ಕಾಡು ಕಾಯಿರಿ ಎಂದು ಹಾಕದೆ ಹೋದರೆ ಅದರಿಂದ ಬಹಳ ಕೆಟ್ಟದ್ದು ಆಗುತ್ತದೆ. ಇದರಿಂದಾಗಿ ಕಾಡಿನ ಮೇಲೆ ತೀವ್ರ ಪರಿಣಾಮವಾಗುತ್ತದೆ. ಐಎಫ್‌ಎಸ್ ಅಧಿಕಾರಿಗಳನ್ನು ಫಾರೆಸ್ಟ್ ಇಲಾಖೆಗೆ ವಾಪಸ್ಸು ಕರೆಸಬೇಕು. ಅದೇ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಲೆನಾಡಿನಲ್ಲಿ ಕಾಡೇ ಇಲ್ಲ, ಕಾಡು ಒಂದು ಕಡೆಯಿಂದ ಕಿತ್ತುಕೊಂಡು ಹೋಗಿದೆ.

ಬಿದಿರಿಗೆ ಕಟ್ಟೆ ಕಾಯಿಲೆ ಬಂದು ಬಿದಿರು ಪೂರ್ತಿ ಹಾಳಾಗಿ ಹೋಗಿದೆ. ಬಿದಿರು ಯಾವ ರೀತಿಯಾಗಿ ಕೆಲಸ ಮಾಡುತ್ತದೆ ಎಂದರೆ ಮಳೆ ಬಂದರೆ ನೀರನ್ನು ಸ್ಪಂಜಿನ ರೀತಿ ಬಿದಿರಿನ ಬೇರುಗಳಲ್ಲಿ ಹಿಡಿದಿಟ್ಟುಕೊಂಡು ಅದು ನೆಲಕ್ಕೆ ಬಿಟ್ಟುಕೊಡುತ್ತದೆ. ಭೂಮಿಯಲ್ಲಿ ನೀರಿನ ಅಂಶ ಹೆಚ್ಚಾಗುತ್ತದೆ. ಆದರೆ ಬಿದಿರಿಗೆ ಒಂದು ಕಡೆ ಕಾಯಿಲೆ ಬಂದರೆ ಮತ್ತೆ ಬಿದಿರಿನ ಮೇಲೆ ದೌರ್ಜನ್ಯ ಆಗುತ್ತದೆ. ಊದುಬತ್ತಿ ಕಡ್ಡಿ ಮಾಡುತ್ತೇವೆಂದು ಹೇಳಿ ಆ ಬಿದಿರನ್ನು ಕಡಿದು ಒಂದು ಲಾರಿಗೆ ಪರ್ಮಿಶನ್ ಇದ್ದರೆ, ಅದರಲ್ಲಿ 10 ಲೋಡ್ ಹೊಡೆಯುತ್ತಾರೆ. ಈ ಬೆಂಗಳೂರಿನಲ್ಲಿರುವಂತಹ ಊದುಬತ್ತಿ ಫ್ಯಾಕ್ಟರಿಯವರಿಗೋ, ಯಾರಿಗೋ ಲಾಭ ಮಾಡುತ್ತೇವೆಂದು ಹೇಳಿ ಮಲೆನಾಡನ್ನು ಮುಳುಗಿಸುವಂತಹ ಕಾರ್ಯಕ್ರಮ ಬೇಡ, ಮಲೆನಾಡಿನಲ್ಲಿರುವಂತಹ ಬಿದಿರಿಗೆ ಕಾಯಿಲೆ ಬಂದಿರುವುದರಿಂದ ತಾತ್ಕಾಲಿಕವಾಗಿ ಪರ್ಮಿಷನ್ ಕೊಡುವುದನ್ನು ನಿಲ್ಲಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಬಹಳ ಇಡೀ ರಾಜ್ಯದಲ್ಲಿ ಕಾಡು ಇರಬೇಕು, ಕಾಡನ್ನು ಕಾಪಾಡಬೇಕೆಂದು ಹೊರಟರೆ, ನನ್ನ ಕ್ಷೇತ್ರದ ಕೊಪ್ಪ ತಾಲ್ಲೂಕಿನ ಕುಂಬಾರ ಕೊಪ್ಪ ಎಂಬ ಊರು ಇದೆ ಅಲ್ಲಿ 1930ರಲ್ಲಿ ಸರ್ವೆ ನಂ:57ರಲ್ಲಿ ಒಬ್ಬರಿಗೆ 50 ಎಕರೆ ಜಾಗ ಸ್ಯಾಂಕ್ಷನ್ ಆಗುತ್ತದೆ. ಅವರು 1968ರಲ್ಲಿ ಒಂದು ಸಾರಿ ಮರವನ್ನು ಕಡಿದುಬಿಟ್ಟಿದ್ದಾರೆ. ಕ್ಲಿಯರ್‌ಫೆಲ್ಲಿಂಗ್ ಮಾಡಿದ್ದಾರೆ. ಈಗ ಹೊಸದಾಗಿ ಸ್ಕೆಚ್‌ನ್ನು ಚೇಂಜ್ ಮಾಡಿ 2000 ಮರಗಳಿರುವಂತಹ ದಿಕ್ಕಿಗೆ ತಿರುಗಿಸಿ ಆ ಕಾಡು 168 ಎಕರೆ ಇದೆ, ಉಳಿದ 50 ಎಕರೆಯಲ್ಲಿ ಆ ಮರಗಳನ್ನು ಕಡಿಯುವುದಕ್ಕೆ ಹೊರಟಿದ್ದಾರೆ. 2000 ಮರಗಳನ್ನು ಕಡಿಯುತ್ತಾರೆ, ಈ ಕೊಪ್ಪ ತಾಲ್ಲೂಕಿನಲ್ಲಿ 2000 ಮರಗಳನ್ನು ಕಡಿದರೆ, ನಮ್ಮ ಪಶ್ಚಿಮಘಟ್ಟಗಳ ಪರಿಸ್ಥಿತಿ ಪೂರ್ತಿ ಚಿಂತಾಜನಕವಾಗುತ್ತದೆ. ಹೈಕೋರ್ಟಿಗೆ ಕೇಸ್ ಬಂದರೆ ನಮ್ಮ ಸರ್ಕಾರ ಸರಿಯಾದ ರೀತಿಯಲ್ಲಿ ಅಲ್ಲಿ ಸರ್ಕಾರಿ ವಕೀಲರು ಹೋಗದೆ, ಆ ಕೇಸ್ ಹೋಯಿತೊ ಏನಾಗಿ ಹೋಯಿತೋ ಗೊತ್ತಿಲ್ಲ. ಸರಿಯಾದ ದಾಖಲೆಗಳನ್ನು ಕೇಸ್‌ಗೆ ಸಂಬಂಧಪಟ್ಟ ಹಾಗೆ ಒದಗಿಸಿಲ್ಲವೆನ್ನುವ ಕಾರಣಕ್ಕಾಗಿ, ಯಾರು ಮರವನ್ನು ಕಡಿಯುತ್ತಾನೆಂದು ಹೊರಟಿದ್ದಾನೋ ಅವನ ಪರವಾಗಿದೆ. ಇದು ಸಿಂಗಲ್ ಬೆಂಚ್‌ನಲ್ಲಿ ಆಗಿದ್ದರೆ ಅದಕ್ಕೆ ಮುಂದೆ ಅಪೀಲ್ ಹೋಗಬೇಕಾಗಿದೆ. ಸರ್ಕಾರ ಅದರ ಬಗ್ಗೆ ದಾಖಲಾತಿಗಳನ್ನು ತರಿಸಿ ಹಳೆಯ ಸ್ಕೆಚ್ ಏನಾಗಿತ್ತು, ಹೊಸ ಸ್ಕೆಚ್ ಯಾವುದನ್ನು ಮಾಡಿದ್ದಾರೆ ಎಂಬುದನ್ನು ನೋಡಿ ಆ 50 ಎಕರೆಯ ಮರಗಳನ್ನು ಉಳಿಸುವುದರ ಕಡೆಗೆ ಗಮನಹರಿಸಬೇಕು. 1,75,000 ರೂಪಾಯಿಗಳಿಗೆ ಅವರು 2000 ಮರಗಳನ್ನು ಕೊಂಡುಕೊಂಡಿದ್ದಾರೆ ಗೊತ್ತೇ, ಕುಂಬಾರಕೊಪ್ಪ ಎನ್ನುವಂತಹ ಊರು ಅಲ್ಲಿ ಅಪ್ಪಿಕೋ ಎಂಬ ಚಳುವಳಿ ನಡೆಯಿತು, ಅಲ್ಲಿ ಚಳುವಳಿ ನಡೆದ ಮೇಲೆ ಕೇಸ್ ಕೋರ್ಟಿಗೆ ಬಂದಿದೆ, ಇದರ ಬಗ್ಗೆ ಬಹಳ ಸೀರಿಯಸ್ಸಾಗಿ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಈ ಅಕ್ರಮ ಮರಗಳನ್ನು ಕಡಿಯುವುದು ಎಲ್ಲಿಗೆ ಬಂದಿದೆ ಎಂದರೆ ಅದು ಕುವೆಂಪು ಜೈವಿಕ ಅರಣ್ಯವೆಂದು ತಾವು ಏನು ಮಾಡುವುದಕ್ಕೆ ಹೊರಟಿದ್ದೀರಿ, ಅದರೊಳಗಡೆ ಇದೆ, ಇದರಿಂದಾಗಿ ಪರಿಸರದ ಮೇಲೆ ಪೂರ್ಣ ಪರಿಣಾಮ ಬೀರುತ್ತದೆ. ಒಂದು ಕಡೆ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯನ್ನು ಮಾಡುವುದಕ್ಕೆ ಹೋಗುತ್ತಾರೆ, ಈ ಗಣಿಗಾರಿಕೆಯನ್ನು ಮಾಡುವುದಕ್ಕಾಗಿ ಏನು ಮಾಡುತ್ತಾರೆಂದರೆ, ಡೈನಾಮೇಟ್ ಹಾಕುತ್ತಾರೆ. ಆ ಡೈನಾಮೇಟ್ ಹಾಕಿ ಸ್ಫೋಟ ಮಾಡುವುದರಿಂದಾಗಿ ಇಡೀ ಮಲೆನಾಡಿನ ಪರಿಸರ ಹಾಳಾಗುತ್ತಿದೆ.

ಶ್ರೀ ಎಸ್. ಬಾಲರಾಜ್(ಕೊಳ್ಳೇಗಾಲ): ಮಾನ್ಯ ಛೇರ್ಮನ್‌ರವರೆ, ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದರ ಬಗ್ಗೆ ನನ್ನ ಕ್ಷೇತ್ರದಲ್ಲಿ ಪ್ರಮುಖವಾದ ಒಂದು ಸಮಸ್ಯೆ ಇದೆ. ಅದು ಮಧುಮಲ್ಲೈ ಅರಣ್ಯ ವ್ಯಾಪ್ತಿಗೆ ಸಂಬಂಧಪಟ್ಟಂತೆ 1963ರ ಅರಣ್ಯ ಕಾಯಿದೆಯಲ್ಲಿ ಸೆಕ್ಷನ್(4)ರ ಅನ್ವಯ ಅರಣ್ಯ ಎಂದು ಘೋಷಣೆಯಾಗಿರುವಂತಹ ಮಧುಮಲ್ಲೈ ಬೆಟ್ಟ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಯಾವುದೇ ಅನುಮತಿಯನ್ನು ಪಡೆಯದೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಸರ್ಕಾರ ಲೀಸ್ ಕೊಟ್ಟಿದೆ. ಇದನ್ನು ಹೇಗೆ ಕೊಟ್ಟಿದೆ? ಅರಣ್ಯ ಪ್ರದೇಶಕ್ಕೆ ಸೇರಿರುವಂತಹ ಜಾಗದಲ್ಲಿ ಅಲ್ಲಿ ಕಾಡು ಬಹಳ ಹತ್ತಿರದಲ್ಲಿದೆ, ಅದು ಸುಮಾರು ಮೂರುವರೆ ಕಿಲೋ ಮೀಟರ್ ಹತ್ತಿರದಲ್ಲಿದೆ, ಅದು ಬಹಳ ಸಂವೃದ್ಧಿಯಾಗಿರುವಂತಹ ಕಾಡಾಗಿದೆ. ಅದು ದೊಡ್ಡ ಸಂಪಿಗೆ ಕಾಡು, ಆ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ಗಣಿಗಾರಿಕೆ ನಡೆದಿದೆ ಎಂದರೆ ದಿನಂಪತ್ರಿ ಕನಿಷ್ಠಪಕ್ಷ 40 ರಿಂದ 50 ಲೋಡ್ ಜಲ್ಲಿ ಹೋಗುತ್ತಿದೆ. ಅಲ್ಲಿ ರಾಜಾರೋಷವಾಗಿ ಕ್ರಷರ್‌ನ್ನು ಅಳವಡಿಸಿದ್ದಾರೆ. ಅಲ್ಲಿ ನೂರಾರು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಸಾಕಷ್ಟು ಜನರಿಗೆ ಸರ್ಕಾರ ಲೀಸ್ ನೀಡಿದೆ. ಏತಕ್ಕಾಗಿ ಕೊಟ್ಟಿದೆ? ನಾನು ಅರಣ್ಯ ಇಲಾಖೆಯಿಂದ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. 25 ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಗಣಿ ಇಲಾಖೆ ಲೀಸ್ ಕೊಟ್ಟಿದೆ ಎಂದು ಹೇಳಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಅದನ್ನು ಮೆಷರ್‌ಮೆಂಟ್ ಮಾಡಿನೋಡಿದಾಗ $43^1/_2$ ಎಕರೆಯಲ್ಲಿ ಅರಣ್ಯ ಪ್ರದೇಶದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಕಾನೂನು ಚೌಕಟ್ಟಿನೊಳಗಡೆ ಕ್ರಮ ಜರುಗಿಸಬೇಕೆಂದು ಮಾಡಿದ್ದೇವೆ. ಮತ್ತೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಡಿ.ಸಿ.ಯವರಿಗೆ ಪತ್ರ ಬರೆದಿದ್ದೇವೆ ಎನ್.ಎಸ್.ನ್ನು ರದ್ದು ಮಾಡುವುದಕ್ಕೆ ಬರೆದಿದ್ದೇವೆಂದು ಹೇಳಿದ್ದಾರೆ. ಆದರೆ ಈ ಅರಣ್ಯ ಪ್ರದೇಶದಲ್ಲಿ ಮಾಡುತ್ತಿರುವ ಬಗ್ಗೆ ಇದರಿಂದಾಗಿ ಎಷ್ಟು ಅನಾಹುತಗಳು ಆಗಿವೆ, ಎಷ್ಟು ಪರಿಸರಕ್ಕೆ ಧಕ್ಕೆಯಾಗಿದೆ, ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ? ಇದನ್ನು ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕೆಂಬ ವಿಚಾರವಾಗಿದೆ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಛೇರ್ಮನ್‌ರವರೆ, ಒಂದು ಕಡೆ ಕುವೆಂಪು ಜೈವಿಕ ಅರಣ್ಯದೊಳಗಡೆ ಮರವನ್ನು ಕಡಿಯುವುದು, ಅಲ್ಲಿಯೇ ಡೈನಾಮೇಟ್ ಇಡುವುದು ಈ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಇದ್ದಕಿದ್ದಹಾಗೆ ಕುವೆಂಪು ಜೈವಿಕ ಅರಣ್ಯ ಮಾಡುತ್ತೇವೆಂದು ಹೇಳುತ್ತಾರೆ. ಕುವೆಂಪುರವರು ಮಹಾನ್ ಚೇತನ, ಅವರ ಕನಸು ಏನಿತ್ತು, ಯಥಾಸ್ಥಿತಿಯು ಹೇಗಿದೆ ಅದೇ ತರಹ ನನ್ನ ಊರು ಇರಬೇಕು ಎಂಬ ಆಸೆ ಇತ್ತು ಅವರಿಗೆ. ಆದರೆ ಅಲ್ಲಿರುವಂತಹ ಮನುಷ್ಯರೆಲ್ಲರನ್ನೂ ಕಳುಹಿಸಿದರೆ ಹೇಗೆ? ಕುವೆಂಪು ಯಾವತ್ತೂ ಕೂಡ ಮನುಷ್ಯರ ಜೊತೆ ಇರಬಾರದು ಎಂದು ಯೋಚನೆ ಮಾಡಿದವರಲ್ಲ, ಅವರು ಮನುಷ್ಯರ ಜೊತೆ ಬದುಕಬೇಕು ಯೋಚನೆ ಮಾಡಿದ್ದವರು. ಅಲ್ಲಿರುವ ಮನುಷ್ಯರನ್ನು ಬೇರೆ ಕಡೆ ಕಳುಹಿಸಿ ಕಾಡು ಬೆಳೆಸಿದರೆ ಕುವೆಂಪುರವರ ಆಸೆ ಫಲಿಸುವುದಿಲ್ಲ. ಕುವೆಂಪುರವರ ಜೈವಿಕ ಅರಣ್ಯವನ್ನು ಮಾಡುತ್ತೇವೆಂದು ಏನು ಹೊರಟಿದ್ದೀರಿ ಅದು ದಟ್ಟವಾದ ಅರಣ್ಯವಿದೆ ಅದರೊಳಗಡೆ ಮಾಡಿಕೊಂಡರೆ ಅದರ ಬಗ್ಗೆ ನಮ್ಮದು ಯಾರದ್ದೂ ವಿರೋಧ ಇಲ್ಲ. ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿರುವುದು ಎಂದರೆ ಮಲೆನಾಡಿನಲ್ಲಿ ಬೀಳುತ್ತಿರುವ ಬೆಂಕಿಯನ್ನು ಆರಿಸಲಿಕ್ಕೆ ನಾವ್ಯಾರು ಯೋಚನೆ ಮಾಡಿಲ್ಲ. ಕಾಡಿಗೆ ಬೆಂಕಿ ಏತಕ್ಕೆ ಬೀಳುತ್ತಿದೆಯೆಂದರೆ ಅಲ್ಲಿ ಅಂಟವಾಳದ ಸೀಗೆ ಏನಿದೆ ಅದನ್ನು ಅವರೇ ಟೆಂಡರ್ ಹಾಕುತ್ತಾರೆ. ಗುಡಿಸಿಕೊಂಡು ಆ ಕಾಯಿಯನ್ನು ಹರಿಯಲಿಕ್ಕೆ ಕಷ್ಟವೆಂದು ನೀವು ಯಾರಿಗೆ

ಟೆಂಡರ್ ಕೊಡುತ್ತೀರಿ, ಆ ದರ್ಗೆಯೆಲ್ಲಾ ಸುಟ್ಟು ಹೋದರೆ ಕಾಯಿಯನ್ನು ಹರಿದುಕೊಳ್ಳುವುದು ಸುಲಭವೆಂದು ಅವರೇ ಅಲ್ಲಿ ಬೆಂಕಿಯನ್ನು ಹಾಕುತ್ತಾರೆ. ಈ ನಡುವೆ ಇದನ್ನು ಜೈವಿಕ ಅರಣ್ಯವೆಂದು ನೀವು ಮಾಡಿಬಿಟ್ಟರೆ ರೈತ ದರ್ಗು ಸಹಿತ ಗುಡಿಸುವುದಿಲ್ಲ. ದರ್ಗು ಎಂದರೆ ಒಣಗಿದ ಎಲೆಗಳು, ಅದನ್ನು ಗುಡಿಸಿ ತೆಗದುಕೊಂಡು ತೋಟಕ್ಕೆ ಅಥವಾ ಗದ್ದೆಗೆ ಹಾಕಿಕೊಳ್ಳುತ್ತೇವೆ. ಆದರೆ ಅದನ್ನು ತೆಗೆಯದೇ ಆ ಕಾಡಿನಲ್ಲಿ ಉಳಿಯುವುದರಿಂದ ಅಲ್ಲಿರುವ ಸೌದೆಯನ್ನು ತೆಗೆಯದಿರುವುದರಿಂದ ಬೆಂಕಿಯೇನಾದರೂ ಬಿದ್ದರೆ ಅದನ್ನು ಕೆಡಿಸಲಿಕ್ಕೆ ಸಾಧ್ಯವಾಗದಿರುವಷ್ಟು ಅಪಾಯಕಾರಿ ಬೆಂಕಿ ಬೀಳುತ್ತದೆ. ಹಾಗಾಗಿ ಸರ್ಕಾರ ಈ ಕಾಡಿಗೆ ಬೆಂಕಿ ಬೀಳುವುದನ್ನು ತಪ್ಪಿಸಲು ಇದುವರೆಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು ಇಷ್ಟು ವರ್ಷಗಳಿಂದ ನೋಡುತ್ತಿದ್ದೇನೆ. ಹಿಂದೆ ಈ ಬೆಂಕಿ ಕೆಡಿಸಲಿಕ್ಕೆ ಗಾರ್ಡಗಳು ಕಾಡಿನ ಮಧ್ಯದಲ್ಲಿ ಓಡಾಡುತ್ತಿದ್ದರು. ಈಗ ಅವರ್ಯಾರು ಕಾಡಿನ ಮಧ್ಯದಲ್ಲಿ ಹೋಗುವುದಿಲ್ಲ. ಹಾಗಾಗಿ ಜೈವಿಕ ಅರಣ್ಯ ಅನ್ನುವ ಪದವನ್ನು ಬಿಟ್ಟು ಅದನ್ನು ರಿಸರ್ವ ಅಥವಾ ಮೈನರ್ ಫಾರೆಸ್ಟ್ ಎಂದು ಮಾಡಿ ಅದನ್ನು ರಕ್ಷಿತ ಅರಣ್ಯವೆಂದು ಮಾಡಿ. ಅದಕ್ಕೆ ನಮಗೂ ಸಹಮತ ಇದೆ. ಏಕೆಂದರೆ ಮಲೆನಾಡಿನಲ್ಲಿ ಕಾಡುಗಳು ಹಾಳಾಗಿರುವುದರಿಂದಲೇ ನಮ್ಮ ಪರಿಸ್ಥಿತಿ ಇಷ್ಟೊಂದು ಕೆಟ್ಟದಾಗಿರುವುದು, ಮಳೆ ಇಲ್ಲದಿರುವುದು, ಬರಗಾಲ ಉಂಟಾಗಿರುವುದು. ಕುಡಿಯುವ ನೀರಿಗೆ ಬರ ಎಂದು ಡಿಕ್ಲೇರ್ ಮಾಡಿಸಿಕೊಳ್ಳುವಂತಹ ಪರಿಸ್ಥಿತಿಗೆ ನಾವು ಇವತ್ತು ಬಂದಿದ್ದೇವೆ. ಹಾಗಾಗಿ ಯಾವುದೇ ಕಾರಣಕ್ಕೂ ಮಲೆನಾಡಿನಲ್ಲಿ ಈ ತರಹದ ಕಾರ್ಯಕ್ರಮಗಳನ್ನು ಮಾಡಬಾರದೆಂದು ನಾನು ಒತ್ತಾಯ ಮಾಡುತ್ತೇನೆ. ಆ ಕಾಡಿಗೆ ಬೆಂಕಿ ಬಿದ್ದಾಗ ಆ ಪ್ರಾಣಿಗಳು, ಹಾವುಗಳು ಜೀವಭಯದಿಂದ ದಿಕ್ಕೆಟ್ಟು ಓಡುವ ದೃಶ್ಯವನ್ನು ಕಣ್ಣಿನಿಂದ ನೋಡಲಿಕ್ಕಾಗುವುದಿಲ್ಲ. ಅಂತಹದ್ದರಲ್ಲಿ ಈ ಕಡೆ ಬೆಂಕಿ ಇಟ್ಟು ಕೆಲವು ವ್ಯಕ್ತಿಗಳು ಕೋವಿಗಳನ್ನು ಹಿಡಿದುಕೊಂಡು ಬರುವ ಪ್ರಾಣಿಗಳನ್ನು ಕೊಂದು ತಿನ್ನುವುದಕ್ಕೆ ಕಾಯುತ್ತಾ ಕುಳಿತಿರುತ್ತಾರೆ. ಇದಕ್ಕಾಗಿ ನಾನು ಈ ಜೈವಿಕ ಎನ್ನುವ ಪದವನ್ನು ಬಿಟ್ಟು ಇದನ್ನು ರಕ್ಷಿತ ಅರಣ್ಯವೆಂದು ಮಾಡಿಕೊಂಡರೆ ನಮ್ಮದೇನೂ ಸಮಸ್ಯೆಯಿಲ್ಲವೆಂದು ನಾನು ಒತ್ತಾಯಿಸುತ್ತೇನೆ. ಇದೆಲ್ಲಾ ಒಂದು ಕಡೆ, ಕಾಡು ಮಾಡುತ್ತೇವೆಂದು ಹೇಳುತ್ತಾ ಅಲ್ಲಿರುವ ರೈತರ ಜಮೀನಿನ ಒತ್ತುವರಿ ಭೂಮಿಯ ಪರಿಸ್ಥಿತಿಯೇನು ಎನ್ನುವ ಬಗ್ಗೆ ಯಾರಾದರೂ ತೀರ್ಮಾನ ಮಾಡಿದ್ದೇವೆಯೇ? ರೈತ ಆ ಕಾಡನ್ನು ಕಾಪಾಡಿಕೊಂಡು ಬಂದಿದ್ದಾನೆ. ನಮ್ಮ ತೋಟದ ತಲೆಯ ಮೇಲಿರುವ 10,15 ಎಕರೆ ಜಮೀನನ್ನು ಕಾಪಾಡಿಕೊಂಡು ಬಂದಿದ್ದೇವೆ. ನಮ್ಮಲ್ಲಿ ಗಡಿಕಲ್ಲು ಎಂದು ಒಂದು ಊರಿದೆ, ಅಲ್ಲಿಗೆ ನಮ್ಮ ಮಾನ್ಯ ಸಚಿವರು ಬರಬೇಕೆಂದು ಒತ್ತಾಯ ಮಾಡುತ್ತೇನೆ. ಲೆಫ್ಟ್‌ಸೈಡ್‌ನಲ್ಲಿ ಒಬ್ಬನ ತೋಟದ ಎದುರಿಗೆ ಇರುವಂತಹ ಒಂದು ಹಡ್ಡೆಯಿದೆ, ಕಾಡನ್ನು ಕಾಪಾಡಿಕೊಂಡದ್ದನ್ನು ನಾವು ಹಡ್ಡೆ ಎಂದು ಕರೆಯುತ್ತೇವೆ. ಬಲಗಡೆ ನಿಮ್ಮ ಅರಣ್ಯ ಇಲಾಖೆಯ ಒಂದು ಜಾಗವಿದೆ. ಆ ಅರಣ್ಯ ಇಲಾಖೆಯೊಳಗೆ ಒಂದು ಗಿಡ ನೋಡಬೇಕೆಂದರೂ ಕಣ್ಣಿಗೆ ಕಾಣುವುದಿಲ್ಲ. ಅದು ಕ್ಲಿಯರ್ ಫೆಲ್ಲಿಂಗ್ ಆಗಿದೆ. ಆದರೆ ರೈತರು ತೋಟದ ಮೇಲೆ ಅವರು ದರ್ಗು ಗುಡಿಸಲಿಕ್ಕೆ, ಸೌದೆ ತೆಗೆಯಲಿಕ್ಕೆ ಏನು ಜಾಗವನ್ನು ಮಾಡಿಕೊಂಡಿದ್ದಾರೆ. ಕಣ್ಣಲ್ಲಿ ಅದನ್ನು ನೋಡಬೇಕು. ಬಹುಶಃ ನಮ್ಮ ಕುಮಾರ ಬಂಗಾರಪ್ಪನವರು ಅದನ್ನು ನೋಡಿದರೆ ಸ್ಫೂರ್ತಿ ಬಂದು ಒಂದು ಪಿಕ್ಚರ್‌ಗೆ ಅಲ್ಲಿಗೆ ಹೋಗಿಬಿಡಬಹುದು. ಅಷ್ಟು ಚಂದವಾಗಿ ಕಾಪಾಡಿಕೊಂಡಿದ್ದಾರೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಅಧ್ಯಕ್ಷರೆ, ರೈತ ಕಾಪಾಡಿಕೊಂಡಿರುವಷ್ಟು ಕಾಡು ಮಾತ್ರ ಉಳಿದಿದೆ, ಇಲಾಖೆ ಕಾಪಾಡಿಕೊಂಡಿರುವುದೆಲ್ಲಾ ಬುಡಸಮೇತ

ಹೋಗಿದೆ. ಹಾಗಾಗಿ ರೈತರು ಕಾಪಾಡಿಕೊಂಡಿರುವುದರ ಕಡೆಗೆ ಹಾಗೂ ರೈತರ ಕಡೆಗೆ ತಮ್ಮ ಗಮನಹರಿಸಬೇಕು. ಅರಣ್ಯ ಇಲಾಖೆಯವರ ಜಾಗವನ್ನು ರೈತರು ಏನು ಬೇಲಿ ಹಾಕಿಟ್ಟಿದ್ದಾರೆ ಅದನ್ನು ತಾವು ಒಂದು ಸಾರಿ ಬಂದು ಸ್ಥಳ ಪರಿಶೀಲನೆ ಮಾಡಬೇಕು. ಅದರ ಬಗ್ಗೆ ತಮಗೆ ಗೊತ್ತಾಗುತ್ತದೆ. ಅಧ್ಯಕ್ಷರೆ, ನನ್ನ ಸಮಯವನ್ನು ಪೂರ್ತಿ ಬೇರೆಯವರೇ ತೆಗೆದುಕೊಂಡು ನನಗೆ ಮಾತನಾಡಲಿಕ್ಕೆ ಬಿಡಲಿಲ್ಲ, ಹಾಗಾಗಿ ನನಗೆ ಇನ್ನೂ ಐದು ನಿಮಿಷ ಕಾಲಾವಕಾಶ ಕೊಡಬೇಕು. ಹಾಗಾಗಿ ನಾನು ಒತ್ತುವರಿ ಅರಣ್ಯದ ಬಗ್ಗೆ ಹೇಳುತ್ತಿದ್ದೆ. ಒತ್ತುವರಿ ಯಾರು ಮಾಡಿದ್ದಾರೆ., ರೈತರ ಅಡಿಕೆ ತೋಟಕ್ಕೆ ಹಳದಿ ಎಲೆ ರೋಗ ಬಂದಿದೆ. ಅದು ಯಾವರೀತಿ ಬಂದಿದೆಯೆಂದರೆ ಹತ್ತು ಎಕರೆ ಅಡಿಕೆ ತೋಟವಿರುವವನಿಗೆ ಹತ್ತು ಕೆ.ಜಿ. ಅಡಿಕೆಯಾಗುವುದಿಲ್ಲ. ಪಕ್ಕದ ಮನೆಗೆ ಹೋಗಿ ಎಲೆಅಡಿಕೆ ಹಾಕಲಿಕ್ಕೆ ಅಡಿಕೆ ಕೇಳುವ ಪರಿಸ್ಥಿತಿಯಲ್ಲಿದ್ದಾನೆ. ಬದುಕಬೇಕು ಎನ್ನುವಂತಹ ಪರಿಸ್ಥಿತಿ ಬಂದಾಗ ಅಡಿಕೆ ತೋಟದಲ್ಲಿ ಕಾಫಿ ಗಿಡವನ್ನು ನೆಟ್ಟ. ಹಾಗಾಗಿ ಕಾಫಿ ಗಿಡವನ್ನು ಎರಡು ಮೂರು ಎಕರೆ ನೆಟ್ಟರೆ ಪ್ರಯೋಜನವಾಗುವುದಿಲ್ಲ. ಸ್ವಲ್ಪ ಮೇಲಕ್ಕೆ ಕಾಫಿ ಗಿಡವನ್ನು ನೆಡುತ್ತಾ ಹೋದಂತೆಲ್ಲಾ ಸ್ವಲ್ಪ ಗುಡ್ಡವನ್ನು ಹತ್ತಿದ್ದಾನೆ, ಇಲ್ಲವೆನ್ನುತ್ತಿಲ್ಲ. ಆ ಗುಡ್ಡ ಹತ್ತಿರುವುದರಿಂದ ಕಾಡನ್ನೇನೂ ಆತ ಹಾಳು ಮಾಡಿಲ್ಲ. ಆ ಕಾಡನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ. ಅವರು ಒತ್ತುವರಿಯನ್ನು ಸಕ್ರಮ ಮಾಡಬೇಕಾಗುತ್ತದೆ. ಅವರು ಎಷ್ಟು ವರ್ಷಗಳ ಮುಂಚೆಯಿಂದ ಮಾಡಿಕೊಂಡು ಬಂದಿದ್ದಾರೆ. ಅನಾದಿ ಕಾಲದಿಂದ ಇದೆ. ಸರ್ಕಾರದ ಆದೇಶದ ಪ್ರಕಾರವೇ ಹೋದರೆ ಹನ್ನೆರಡು ವರ್ಷವಿದ್ದರೆ ಅಡ್ವರ್ಸ್ ಪೋಸಿಷನ್ ಬರುತ್ತದೆಂದು ಹೇಳುತ್ತೀರಿ. ನಾವು 120 ವರ್ಷದಿಂದ ಇದ್ದೇವೆ. ಇದಕ್ಕೆ ಯಾವ ಪೋಸಿಷನ್ ಬರುತ್ತದೆ? ನಮಗೆ ಆ ಅಡ್ವರ್ಸ್ ಪೋಸಿಷನ್ ಲೆಕ್ಕಾಚಾರಕ್ಕಾದರೂ ಕೊಡಬೇಕಾಗುತ್ತದೆ. 78ಕ್ಕಿಂತ ಮುಂಚೆ ಇರುವವರಿಗೆ ಅದೇ ಜಾಗವನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ ನಮ್ಮ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ನಮಗೆ ಹೆಣ್ಣು ಕೊಡಬೇಕೆಂದರೆ ಆರ್.ಟಿ.ಸಿ. ನೋಡುತ್ತಾರೆ. ಮ್ಯುಟೇಶನ್ ನೋಡುತ್ತಾರೆ ಸತ್ಯವಾಗಲೂ ಈ ಜಾಗ ಇವನದ್ದೇ ಅಥವಾ ಹಿಂದೆ ಈ ಗೋಪಾಲಕೃಷ್ಣ ಗೌಡರು ಬರೆದಿದ್ದ ಜಾಗವಿದೆಯೇ ಎಂದು ನೋಡುತ್ತಾರೆ. ಸರೋಜಿನಿ ಮಹಿಷಿ, ನಂಜುಂಡಪ್ಪ ವರದಿ ಇದ್ದಹಾಗೆ ನಮಗೆ ಒಂದು ಹೊಸ ವರದಿಯಿದೆ, ಗೋಪಾಲಕೃಷ್ಣ ಗೌಡರ ಫಾರೆಸ್ಟ್ ಯಾವುದು ಎಂದು. ಗೋಪಾಲಕೃಷ್ಣಗೌಡರ ಅರಣ್ಯವೊಂದು, ಸರ್ಕಾರಿ ಅರಣ್ಯ ಒಂದು, ನಾವು ಈಗ ಒಟ್ಟಾರೆ ಗೊಂದಲದಲ್ಲಿದ್ದೇವೆ. ನಮ್ಮ ರಕ್ಷಣೆಗೆ ಸರ್ಕಾರ ಬರಬೇಕು ಇಲ್ಲದಿದ್ದರೆ ಬಹಳ ಜನ ಸಾಯುತ್ತಾರೆ. ಇಂತಹ ಕೆಟ್ಟ ಸ್ಥಿತಿಯಲ್ಲಿ ನಾವಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ಸರ್ಕಾರ ಜಮೀನು ಉಳಿಸಲಿಕ್ಕೆ ಬರಬೇಕೆ ಅಥವಾ ಹೆಣ್ಣು ಕೊಡಿಸಲಿಕ್ಕೆ ಬರಬೇಕೇ ಎಂಬುದು ತೀರ್ಮಾನವಾಗಿಬಿಡಲಿ. ಯಾವುದಕ್ಕೆ ಸರ್ಕಾರ ಬರಬೇಕು?

ಶ್ರೀ ಡಿ.ಎನ್. ಜೀವರಾಜ್: ನಮ್ಮ ಪರಿಸ್ಥಿತಿ ಹೇಗಿದೆ ಅಂದರೆ ನಮ್ಮ ಮೂಡಿಗೆರೆ ಶಾಸಕರಾದ ಕುಮಾರಸ್ವಾಮಿಯವರಿಗೆ ಹೆಣ್ಣು ಸಿಗದೆ ಇನ್ನೂ ಮದುವೆ ಮಾಡಿಸಲಿಕ್ಕಾಗಿಲ್ಲ. ನಮಗೆ ನಮ್ಮ ಜಾಗವೆಂದು ಒಂದು ಹಕ್ಕುಪತ್ರ ಕೊಟ್ಟುಬಿಟ್ಟರೆ ಹೆಣ್ಣು ಕೊಡುವವರು ನಮಗೆ ಕೊಡುತ್ತಾರೆ.

ಛೇರ್‌ಮನ್: ಜಮೀನು ಉಳಿಸುವುದರ ಮೂಲಕ ಮದುವೆ ಮಾಡಿಸಿ ಅಂತ.

ಶ್ರೀ ಎಸ್.ಎಸ್. ಪಾಟೀಲ್: ಮೊನ್ನೆ ನಾನು ಪತ್ರಿಕೆಯಲ್ಲಿ ಒಂದು ವರದಿಯನ್ನು ನೋಡಿದೆ, ಕರ್ನಾಟಕದಲ್ಲಿ ಅತಿ ಹೆಚ್ಚು ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದೆ. ಹೆಣ್ಣು ಭ್ರೂಣ ಹತ್ಯೆ ನಿಲ್ಲಬೇಕು. ಹೆಣ್ಣುಮಕ್ಕಳ ಅಂತರ ಬಹಳ ಕಡಿಮೆಯಿದೆ. ವರದಕ್ಷಿಣೆ ಪಿಡುಗು ಹೋಗಬೇಕು. ಈ ಲಗ್ನಪದ್ಧತಿಗಳು ಹೋಗಬೇಕು. ಇದು ಹೋಗದಿದ್ದರೆ ಇಲ್ಲಿ ಕನ್ಯೆಯರೇ ಯಾರಿಗೂ ಸಿಗುವುದಿಲ್ಲ.

ಶ್ರೀ ಬಿ.ಎ. ಜೀವಿಜಯ: ಮೂಡಿಗೆರೆ ಶಾಸಕರಾದ ಕುಮಾರಸ್ವಾಮಿಯವರಿಗೆ, ಹುಡುಗಿ ಕೊಡುವವರು ಬೇಕಾದಷ್ಟು ಜನ ಇದ್ದಾರೆ. ಆದರೆ ಅವರಿಗೆ ಇಂಗ್ಲೇಂಡ್ ಹುಡುಗಿಬೇಕಂತೆ.

ಶ್ರೀ ಎಂ.ಪಿ.ಕುಮಾರಸ್ವಾಮಿ:- ಹುಡುಗಿ ಸೆಟಲ್‌ಮೆಂಟ್ ಆಗಿದೆ. ಅದು ಮಾನ್ಯ ಜೀವಿಜಯರವರಿಗೆ ಗೊತ್ತಿಲ್ಲ.

ಶ್ರೀ ಡಿ.ಎನ್. ಜೀವರಾಜ್: ನಮ್ಮ ಪರಿಸ್ಥಿತಿ ಈಗ ಬಹಳಷ್ಟು ಕೆಟ್ಟದಾಗಿದೆ. ನಮ್ಮ ಮಲೆನಾಡಿನ ರೈತರ ಪರಿಸ್ಥಿತಿ ಹೇಗಿದೆಯೆಂದರೆ ಸ್ವಂತ ಎಕರೆ ಜಾಗವೆಷ್ಟು? ಗೋಪಾಲಕೃಷ್ಣಗೌಡರದ್ದೆಷ್ಟು? ಖಾತೆ ಇರುವುದೆಷ್ಟು? ಸರ್ಕಾರದ್ದೆಷ್ಟು? ಇದರಲ್ಲಿ ಒತ್ತುವರಿಯಲ್ಲಿ ನಮ್ಮ ಸಚಿವರಿಗೆ ಗೊತ್ತಿದೆಯೇ ಇಲ್ಲವೋ ಗೊತ್ತಿಲ್ಲ. ಬಾಳೆಹೊನ್ನೂರಿನಲ್ಲಿರುವ ಫಾರೆಸ್ಟ್ ಆಫೀಸ್ ಮೈನರ್ ಹಾಗೂ ರಿಸರ್ವ ಫಾರೆಸ್ಟ್‌ನೊಳಗೆ ಇದೆ. ನೀವೇನಾದರೂ ಅದನ್ನು ಕಿತ್ತುಕೊಂಡು ಹೋಗಬೇಕೆಂದರೆ ನಿಮ್ಮ ಫಾರೆಸ್ಟ್ ಆಫೀಸನ್ನು ಕಿತ್ತುಕೊಂಡು ಹೋಗಬೇಕು. ಅಂತಹ ಕೆಟ್ಟ ಪರಿಸ್ಥಿತಿಯಿದೆ. ಮಲೆನಾಡಿನ ಯಾವ ಶಾಲೆಗಳೂ ಸಹ ರೆವಿನ್ಯೂ ಜಾಗದಲ್ಲಿಲ್ಲದೆ ಫಾರೆಸ್ಟ್ ಜಾಗದಲ್ಲಿವೆ. ನೂರಾರು ಶಾಲೆಗಳನ್ನು ಪೂರ್ತಿಯಾಗಿ ಹೊಸದಾಗಿ ಕಟ್ಟಬೇಕಾಗುತ್ತದೆ. ಹಾಗಾಗಿ ಸ್ವಲ್ಪ ಸರ್ಕಾರಿ ಒತ್ತುವರಿಗಳು, ಸ್ವಲ್ಪ ರೈತರ ಒತ್ತುವರಿಗಳು ಇವೆ. . ನೀವು ಯಾರ್ಯಾರು ಯಾವ್ಯಾವ ಜಾಗಗಳನ್ನು ಮಾಡಿದ್ದಾರೋ ಆಯಾಯ ಜಾಗಗಳನ್ನು ಕೊಟ್ಟು ಇವತ್ತಿನ ನಂತರ ಯಾರೂ ಸಹ ಒಂದು ಗುಂಟೆ ಜಾಗವನ್ನು ಒತ್ತುವರಿ ಮಾಡಬಾರದೆಂದು ಒಂದು ಟ್ರೆಂಚ್ ಹೊಡೆದು ತೆಗೆಯಿರಿ. ಅದರಿಂದ ಕಾಡು ಉಳಿಯುತ್ತದೆ. ಹಾಗಾಗಿ ಈ ಸದನದಲ್ಲಿ ಆ ಬಗ್ಗೆ ಒಂದು ನಿರ್ಣಯವಾಗಬೇಕೆಂದು ನಾನು ಒತ್ತಾಯಿಸುತ್ತೇನೆ. ಯಾರ್ಯಾರು ಯಾವ್ಯಾವ ಜಾಗವನ್ನು ಒತ್ತುವರಿ ಮಾಡಿದ್ದಾರೋ ಆ ಜಾಗವನ್ನು ಅವರಿಗೆ ಕೊಡಬೇಕು ಎಂದು ಹೇಳಿ ರೈತರ ಪರವಾದ ಒತ್ತುವರಿಯನ್ನು ಇಲ್ಲಿ ಮಾಡಬೇಕು ಎಂದು ಸದನದ ಎಲ್ಲಾ ಸದಸ್ಯರು ಒಕ್ಕೊರಲಿನ ನಿರ್ಧಾರವನ್ನು ಕೊಡುತ್ತಾರೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಒತ್ತುವರಿ ವಿಚಾರ ಬಂದಾಗ ನೋಡಿ ಒಂದು ಕಡೆ ಏನು ಹೇಳುತ್ತಾರೆಂದರೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮೀಸಲು ಅರಣ್ಯ ಒತ್ತುವರಿ ತೆರವು ಅನಿವಾರ್ಯವೆಂದು ಹೇಳುತ್ತಾರೆ. ಇನ್ನೊಂದು ಕಡೆ ಒತ್ತುವರಿ ಅರಣ್ಯ ಭೂಮಿ ಸಕ್ರಮ ಸಾಧ್ಯವಿಲ್ಲವೆಂದು ನಮ್ಮ ಸಚಿವರೇ ಹೇಳುತ್ತಾರೆ. ಇನ್ನೊಂದು ಕಡೆ ನಮ್ಮ ಮುಖ್ಯಮಂತ್ರಿಗಳು ಅರಣ್ಯ ಕಾಯ್ದೆ ಬಿಗುವನ್ನು ಸಡಿಲಿಸಲು ಮನವಿ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯ. ಅರಣ್ಯವಾಸಿಗಳಿಗೆ ಪುನರ್‌ವಸತಿಗೆ ಪ್ರಧಾನಿಗೆ ಧರಂಸಿಂಗ್‌ರವರ ಮನವಿ ಎಂದು ಇನ್ನೊಂದು ಕಡೆ ಹೇಳುತ್ತಾರೆ. ನಮ್ಮ ಮುಖ್ಯಮಂತ್ರಿಗಳು ಹೇಳಿದ್ದು ಕೇಳಬೇಕೆ? ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದು ಕೇಳಬೇಕೆ? ಒಟ್ಟಾರೆ ಊರ ಜನರೆದುರು ಶಾಸಕರಾದ ನಾವು ತಲೆ ಎತ್ತಿ ಓಡಾಡಲಿಕ್ಕೆ ಆಗದಂಥ ಪರಿಸ್ಥಿತಿಯಲ್ಲಿದ್ದೇವೆ. ಸರ್ಕಾರ ನಮ್ಮ ರಕ್ಷಣೆಗೆ ಬರಬೇಕಾಗಿದೆ. ಇದರ ಬಗ್ಗೆ ಏನು ಆಗಬೇಕಾಗಿದೆ, ನಾವು ಏನು ಮಾಡುತ್ತಿದ್ದೇವೆಂಬ ಬಗ್ಗೆ ತೀರ್ಮಾನವಾಗಬೇಕೆಂದು

ಹೇಳಿ ನಾನು ಒತ್ತಾಯಿಸುತ್ತೇನೆ. ಜೈಪುರದಲ್ಲಿ ಚೌಡಿಕಟ್ಟೆಯೆಂದಿದೆ, ಅಲ್ಲಿನ ಜನ ಎರಡು ಗುಂಟೆಗಳಿಗೆ ಬೇಲಿ ಹಾಕಿಕೊಂಡಿದ್ದಾರೆ, ಅವರಿಗೆ ಅದನ್ನು ಬಿಟ್ಟರೆ ಬೇರೆ ಜಾಗವಿಲ್ಲ. ಅವರು ಜಮೀನು ಮಾಡಿಲ್ಲ, ಮನೆ ಮಾಡಿಕೊಂಡು ಬದುಕುತ್ತಿದ್ದಾರೆ, ಒಂದು ವೇಳೆ ಅವರನ್ನು ಆ ಜಾಗದಿಂದ ಬಿಡಿಸಿದರೆ ಅವರನ್ನು ಸೆಂಟ್ರಲ್ ಜೈಲಿನಲ್ಲಿ ತಂದು ಇಡಬೇಕು. ಮತ್ತೆಲ್ಲೂ ಜಾಗವಿಲ್ಲ, ಏಕೆಂದರೆ ಅವರನ್ನು ಕರೆತಂದು ರಸ್ತೆಯ ಮೇಲೆ ಬಿಟ್ಟರೆ ಅವರೆಲ್ಲಾ ಸತ್ತುಹೋಗುತ್ತಾರೆ. ಇದಕ್ಕೆ ಅವರಿಗೆ ಏನು ಪರಿಹಾರ ಕೊಡಲಿಕ್ಕೆ ನಿಮ್ಮ ಬಳಿ ದಾರಿಯಿದೆ? ಆ ಲಕ್ಷಾಂತರ ರೈತರ ಕುಟುಂಬಗಳ ರಕ್ಷಣೆಗೆ ತಾವು ಬರಬೇಕು. ಸರ್ಕಾರ ಆ ರೈತರಿಗೆ ಹಕ್ಕುಪತ್ರ ಕೊಡಿಸಬೇಕೆಂದು ಒತ್ತಾಯಮಾಡುತ್ತೇನೆ. ಈ ಜಾಗದ ವಿಷಯ ಹೇಳಲಿಕ್ಕೆ ರಾತ್ರಿ ಬೆಳಗಿನವರೆಗೆ ಇರುತ್ತದೆ. ಸಮಯವಿಲ್ಲವೆಂದು ಹೇಳುತ್ತಿದ್ದೀರಿ. ವಿನೋಬಾ ಬಾವೆಯವರು ಶಾಲೆಗಳಿಗೆಲ್ಲಾ ಜಾಗಗಳನ್ನು ದಾನ ಕೊಡಿ ಎಂದು ಹೇಳಿದ್ದಾರೆ. ನಮ್ಮ ಕಂದಾಯ ಸಚಿವರು ಇಲ್ಲಿಯವರೆಗೂ ಇದ್ದರು, ಈಗ ಇಲ್ಲ, ಅವರಿದ್ದಿದ್ದರೆ ಅವರಿಂದ ಒಂದು ಪ್ರಗತಿಪರ ಯೋಜನೆಯ ಒಂದು ಉತ್ತರ ಈ ತಕ್ಷಣವೇ ಸಿಗುತ್ತಿತ್ತು. ಈ ರಾಜ್ಯದಲ್ಲಿ ಬಹಳಷ್ಟು ಜನ ತಮ್ಮ ಸ್ವಂತ ಜಾಗಗಳನ್ನು ಶಾಲೆಗಳಿಗೆ 7, 8, 10, 20, ಎಕರೆ ಜಾಗಗಳನ್ನು ದಾನವಾಗಿ ಕೊಟ್ಟಿದ್ದಾರೆ. ಆದರೆ ಆ ಜಾಗದ ಪರಿಸ್ಥಿತಿ ಹೇಗಿದೆಯೆಂದರೆ, ಆ ಜಾಗ ದಾನ ಕೊಟ್ಟಿರುವವನಿಗೆ ಇವತ್ತು ಊಟಕ್ಕಿಲ್ಲ. ಆತ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದ್ದರೂ ಆತ ಯಾವತ್ತು ಅಲ್ಲಿ ಹೋಗಿ ಶಾಲೆಗಾಗಿ ಕೊಟ್ಟಿರುವ ತನ್ನ ಜಾಗವನ್ನು ವಾಪಸ್ಸು ಕೊಡಿ, ಅದು ನಮ್ಮ ಅಜ್ಜ, ಅಪ್ಪ ಕೊಟ್ಟು ತಪ್ಪು ಮಾಡಿದ್ದಾರೆ ಎಂದು ಕೇಳಲಿಲ್ಲ. ಯಾರು ಆ ಜಾಗವನ್ನು ಹೂಡುತ್ತಿದ್ದಾರೆ, ಸ್ಕೂಲಿನ ಮಕ್ಕಳು ಆ ಜಾಗವನ್ನು ಹೂಡಲಿಕ್ಕಾಗುವುದಿಲ್ಲ. ಅದನ್ನು ಯಾರು ಹೂಡಬೇಕು. ಪಕ್ಕದಲ್ಲಿ ಯಾರೋ ಇದ್ದವರು ಶಾಲೆಗೆ ಇಷ್ಟು ದುಡ್ಡು ಕೊಡಪ್ಪ ಎಂದು ಕೊಟ್ಟರು. ನಾನು ಒಂದು ಶಾಲೆಯ ಉದಾಹರಣೆ ಕೊಡುತ್ತೇನೆ. ಕೊಪ್ಪದಲ್ಲಿ ಒಂದು ಶಾಲೆ ಇದೆ. ಕೊಗರೆ ಅಂತ ಹೇಳಿ, ಆ ಶಾಲೆಯಲ್ಲಿ 7 ಎಕರೆ ಜಾಗ ಇದೆ. ಆ 7 ಎಕರೆ ಜಾಗವನ್ನು ಅವನು ಬಿಟ್ಟುಕೊಂಡು 450 ರೂಪಾಯಿ ಕೊಡುತ್ತಾನೆ ಆ ಶಾಲೆಗೆ; ಅದನ್ನು ಶುಂಠಿ ಹಾಕುವುದಕ್ಕೆ ಒಬ್ಬ ಬಂದು ಕೇಳಿದ, ಹೇಳಿ ಸಾರ್ ಎಕರೆಗೆ 30 ಸಾವಿರ ರೂ. ಕೊಡುತ್ತೇನೆ ಎಷ್ಟಾಯಿತು ಸಾರ್ 2 ಲಕ್ಷ 10 ಸಾವಿರ ರೂಪಾಯಿ, ಆ ಶಾಲೆಗೆ 2 ಲಕ್ಷ 10 ಸಾವಿರ ರೂಪಾಯಿ ಬಂದರೆ ಇಡೀ ಶಾಲೆಗೆ ಕರೆಂಟ್ ಹಾಕಿ, ಕಂಪ್ಯೂಟರ್ ಹಾಕಿ, ಮಕ್ಕಳಿಗೆ ಕೊಡಬಹುದಾಗಿತ್ತು. ನನ್ನ ಕ್ಷೇತ್ರದಲ್ಲಿ 210 ಜನ ಶಿಕ್ಷಕರ ಕೊರತೆ ಇದೆ. ಆ ದುಡ್ಡಲ್ಲಿ ಮಕ್ಕಳಿಗೆ ಪಾಠ ಹೇಳುತ್ತಿದ್ದರು, ಆದರೆ ಅದನ್ನು ಅವನು ಬಿಟ್ಟುಕೊಡುವುದಕ್ಕೆ ತಯಾರಿಲ್ಲ. 450 ರೂ. ಅನ್ನು ತೆಗೆದುಕೊಂಡು 7 ಎಕರೆ ಜಮೀನು ಮಾಡುತ್ತಾನೆ. ಎನ್.ಆರ್.ಪುರ ಟೌನ್ ಪಕ್ಕದಲ್ಲಿರುವ ಶಾಲೆಗಳಲ್ಲಿ ಎಲ್ಲಾ ಶಾಲೆಗಳಿಗೆ ದಾನ ಕೊಟ್ಟ ಜಮೀನುಗಳು ಇವೆ. ಆದರೆ ಅದನ್ನು ಟೆನೆಂಟ್ ಆಕ್ಟ್ ಬರುತ್ತದೆ, ರಾಜ್ಯಪಾಲರ ಖಾತೆಯಲ್ಲಿರುವ ಜಮೀನಿಗೆ ಅದು ಯಾವ ರೀತಿ ಅದನ್ನು ಬಿಡಿಸಿಕೊಳ್ಳುವುದಕ್ಕೆ ನಮ್ಮ ಹತ್ತಿರ ಆಗುತ್ತಿಲ್ಲ. ಸರ್ಕಾರ ಸ್ಪಷ್ಟವಾಗಿ ಹೇಳಬೇಕಿದೆ. ಈ ಜಮೀನನ್ನು ನಾವು ಶಾಲೆಗೆ ಬಿಡಿಸಿ ಕೊಡುತ್ತೇವೆಯೋ ಇಲ್ಲ ಹೂಡುತ್ತಿರುವವರಿಗೆ ಕೊಡುತ್ತೇವೆಯೋ; ಹೂಡುತ್ತಿರುವವರಿಗೆ ಕೊಡಬೇಕು ಅಂತ ಯೋಚನೆ ಮಾಡಿದರೆ, ನನ್ನದೊಂದು ಮನವಿ ಇದೆ ಯಾವುದೇ ಕಾರಣಕ್ಕೂ ಅದನ್ನು ಯಾರು ದಾನ ಕೊಟ್ಟಿದ್ದಾನೋ ಅವನಿಗೆ ವಾಪಸ್ಸು ಕೊಟ್ಟುಬಿಡಿ. ಅವರಾದರೂ ಬದುಕಲಿ; ಇಲ್ಲದಿದ್ದರೆ ಈ ರೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಮಾನ್ಯ ಅಧ್ಯಕ್ಷರೆ, ಇದು ಸೂಕ್ತವಲ್ಲ, ಈ ಶಾಲೆಗಳಿಗೆ ಕೊಟ್ಟಿರುವಂತಹ ದಾನದ ಜಮೀನನ್ನು ಏನು

ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ನಾನೇನು ಬಹಳ ವಿಷಯ ಹೇಳುವುದಿಲ್ಲ, ಆದರೆ ಒಂದು ವಿಷಯವಂತೂ ಸತ್ಯ. ನಾನು ಎಲೆಕ್ಷನ್‌ಗೆ ನಿಲ್ಲಬೇಕಾದರೆ ಹೇಳುತ್ತಿದ್ದೆ, ಎರಡು ಎಲೆಕ್ಷನ್‌ನಲ್ಲಿ ಸೋತಾಗಲೂ ಹೇಳಿದ್ದೆ, ಯಾರು ಹುಲ್ಲಿನ ಮನೆಯಲ್ಲಿ ವಾಸ ಮಾಡುತ್ತಾರೆ, ಸೋಗೆ ಮನೆಯಲ್ಲಿ ವಾಸ ಮಾಡುತ್ತಾರೆ ಇವರಿಗೆ ಒಂದು ಹೆಂಚಿನ ಮನೆ ಕೊಡಿಸುವುದು ನನ್ನ ಆದ್ಯತೆ ಅಂತ ಹೇಳಿದ್ದೆ; ನಮ್ಮ ಕ್ಷೇತ್ರಗಳಲ್ಲಿ ಹೇಗಿದೆ ಅಂತ ಹೇಳಿದರೆ ನಾಲ್ಕು ಮನೆ ಇವೆ, ಒಬ್ಬೊಬ್ಬರ ಹತ್ತಿರ, ಆಶ್ರಯ ಮನೆ; ಅದರಲ್ಲಿ ಒಂದು ಸಾರಾಯಿ ಅಂಗಡಿ, ಇನ್ನೊಂದು ಅವನ ದನದ ಕೊಟ್ಟಿಗೆ, ಇನ್ನೊಂದರಲ್ಲಿ ಅವನೂ ವಾಸ ಇಲ್ಲ, ಬಾಡಿಗೆಗೆ ಕೊಟ್ಟಿದ್ದಾನೆ; ಮತ್ತೊಂದರಲ್ಲಿ ಅವನು ದೊಡ್ಡ ಮನೆಯಲ್ಲಿ ವಾಸ ಮಾಡುತ್ತಾನೆ. ಆಶ್ರಯ ಲೇಔಟ್‌ಗಳು ಆರ್.ಸಿ.ಸಿ. ಲೇಔಟ್‌ಗಳಾಗಿವೆ. ಯಾರು ಈ ಹುಲ್ಲಿನ ಮನೆ ಸೋಗೆ ಮನೆಯಲ್ಲಿ ವಾಸ ಮಾಡುತ್ತಾನೆ ಅವನಿಗೆ ಈ ವರೆಗೂ ಹೆಂಚಿನ ಮನೆ ಕೊಡಲಿಲ್ಲ. ನಾನು ಬೆಳವಣಕೊಡಿಗೆ ಎನ್ನುವಂತಹ ಒಂದು ಊರಿಗೆ ಹೋಗಿದ್ದೆ; ಅಲ್ಲಿನ ಪರಿಶಿಷ್ಟ ಜಾತಿಯ ಯಜಮಾನರು ನನ್ನ ಹತ್ತಿರ ಬಂದು ಹೇಳಿದರು. ಸ್ವಾಮಿ, ನನಗೆ ಮಳೆಗಾಲದಲ್ಲಿ ಒಲೆ ಒಳಗೆ ನೀರು ಬರುತ್ತದೆ, ಬೇಸಿಗೆಯಲ್ಲಿ ಎರಡು ಕಿಲೋ ಮೀಟರ್ ದೂರ ನೀರಿಗೆ ಹೋಗಬೇಕು ಅಂತ; ಇದನ್ನು ತಮಾಷೆಯಾಗಿ ತೆಗೆದುಕೊಳ್ಳುವಂತಹ ವಿಷಯವಲ್ಲ. ನಾವು ಚುನಾಯಿತ ಪ್ರತಿನಿಧಿಗಳು, ಅವರಿಗೆ ಮನೆ ಕೊಡಿಸುವಂತಾದ್ದರ ಕಡೆ ಗಮನಹರಿಸಬೇಕಾಗಿತ್ತು. ನಾವು ಅವರಿಗೆ ಮನೆ ಕೊಡಲಿಲ್ಲ. ಮೊದಲ ಆದ್ಯತೆ ಯಾರು ಹುಲ್ಲಿನ ಮನೆಯಲ್ಲಿ ವಾಸ ಮಾಡುತ್ತಾರೆ, ಸೋಗೆ ಮನೆಯಲ್ಲಿ ವಾಸ ಮಾಡುತ್ತಾರೆ ಅವನಿಗೆ ಮನೆ ಕೊಟ್ಟು ಆಮೇಲೆ ಇನ್‌ಫ್ಲೂಯನ್ಸ್‌ನವರಿಗೆ ಮನೆ ಕೊಡುವುದರ ಬಗ್ಗೆ ನಾವು ಗಮನಹರಿಸಿದರೆ ಮಾತ್ರ ನಾವು ಇಲ್ಲಿಗೆ ಏತಕ್ಕೆ ಬಂದಿದ್ದೇವೆ ಅದು ಸಾರ್ಥಕವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಿದೆ. ಅದು ಬಿಟ್ಟು ಪೊಲಿಟಿಕಲ್ ಇನ್‌ಫ್ಲೂಯನ್ಸ್, ನನಗೆ ಬೇಕಾದವನಿಗೆ ಒಂದು ಮನೆ, ಇನ್ನೊಬ್ಬ ನನ್ನ ಹೆಂಡತಿಗೆ ಬೇಕಾದವನಿಗೆ ಒಂದು ಮನೆ, ಈ ರೀತಿ ಮನೆ ಕೊಡುವುದರಿಂದ ಮಾತ್ರ ಯಾವುದೇ ಅನುಕೂಲ ಇಲ್ಲ. ನಾನು ಸೀರಿಯಸ್ ಆಗಿ ಹೇಳುತ್ತಿದ್ದೇನೆ. ನಾನು ಏಕೆ ಇದನ್ನು ಹೇಳಿದೆ ಅಂದರೆ ನಾನು ಅದಕ್ಕೆ ಕ್ಲಾರಿಫಿಕೇಷನ್ ಕೊಟ್ಟುಬಿಡುತ್ತೇನೆ. ಎನ್.ಆರ್. ಪುರದಲ್ಲಿ ಶಿಂಸೆ ಎನ್ನುವಂತಹ ಒಂದು ಊರು ಇದೆ. ಅಲ್ಲಿ ಒಂದು ಆಶ್ರಯ ಲೇಔಟ್ ಇದೆ. ಆ ಆಶ್ರಯ ಲೇಔಟ್‌ನಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಯಾರು ಇದ್ದರು ಅವರು ಅವರಿಗೆ ಬೇಕಾದವರಿಗೆಲ್ಲಾ ಮನೆ ಕೊಟ್ಟಿದ್ದಾರೆ. ಅವರಿಗೆ ಇಲ್ಲಿ ಹೇಳುತ್ತಿದ್ದಾರೆ ಉಪ ಪತ್ನಿಯವರಿಗೆ ಅಂತ ಹೇಳಿ; ಅದೂ ಸತ್ಯ. ಅದೂ ಏನು ಸುಳ್ಳಲ್ಲ. ನಾನು ಹೇಳುವುದರ ಬಗ್ಗೆ ತನಿಖೆ ನಡೆಸಿ, ನಾನು ಇಲ್ಲಿ ನಿಯಮ 351ರಲ್ಲಿ ಒಂದು ಪ್ರಶ್ನೆ ಕೇಳಿದ್ದೆ, ಇದುವರೆಗೂ ನನಗೆ ಉತ್ತರ ಬಂದಿಲ್ಲ ಏಕೆ ಬಂದಿಲ್ಲವೋ ಗೊತ್ತಿಲ್ಲ.

(ಗೊಂದಲ)

ಸ್ವಲ್ಪ ಹೀಗೆ ರಾಜ್ಯದಲ್ಲಿ ಇರಬಹುದೋ ಏನೋ ಗೊತ್ತಿಲ್ಲ. ಅಂದರೆ ಅತ್ಯಂತ ಕೆಟ್ಟದಾಗಿದೆ. ಟೌನ್ ಪಕ್ಕದಲ್ಲಿ ಯಾವ ಯಾವ ಜಾಗಗಳು ಇವೆ ಅವು ಆರ್.ಸಿ.ಸಿ.ಲೇಔಟ್‌ಗಳಾಗಿರುವುದನ್ನು ಬಿಟ್ಟರೆ ಆಶ್ರಯ ಲೇಔಟ್ ಆಗಿಲ್ಲ. ನಮ್ಮಲ್ಲಿರುವಂತಹ ಇ.ಓ.ಒಬ್ಬರು ಒಂದು ಆದೇಶ ಮಾಡುತ್ತಾರೆ ಒಂದು ಜಾಗಕ್ಕೆ ನಾನು ಕೇಳಿದೆ ಅವರಿಗೆ ಆ ಮನೆ ಹೇಗೆ ಕೊಟ್ಟಿದ್ದಿಯಪ್ಪ ಟೌನ್‌ನಲ್ಲಿ ಅವರಿಗೆ ಸೈಕಲ್ ಷಾಪ್ ಇದೆ, ಟೌನ್‌ನಲ್ಲಿ 120:20 ಉದ್ದದ ಮನೆ ಇದೆ, ಅವರಿಗೆ ಹೇಗೆ ಆಶ್ರಯ ಮನೆ ಕೊಟ್ಟೆ ಎಂದು ಹೇಳಿ ನಾನು ಇ.ಓ ಅವರನ್ನು ಹೋಗಿ ಕೇಳಿದರೆ, ಸಾರ್ ಲೈಸೆನ್ಸ್ ಕೊಟ್ಟಿರುವುದನ್ನು

ಕ್ಯಾನ್ಸಲ್ ಮಾಡುತ್ತೇನೆಂದು ಹೇಳಿದರು. ಲೈಸೆನ್ಸ್ ಕ್ಯಾನ್ಸಲ್ ಮಾಡಿದರು. 4 ದಿನ ಆದಮೇಲೆ ಕೇಳಿದೆ, ಮತ್ತೆ ಲೈಸೆನ್ಸ್ ಕೊಟ್ಟರು, ಕರೆದು ಕೇಳಿದೆ, ಏಕಪ್ಪ ಲೈಸೆನ್ಸ್ ಕೊಟ್ಟೆ ಅಂತ. ಆಗ ಏನು ಮಾಡುತ್ತಾರೆ ಎರಡನೇ ಆದೇಶ ಮಾಡುತ್ತಾರೆ, ಲೈಸೆನ್ಸ್ ಕ್ಯಾನ್ಸಲ್ ಮಾಡಿದ್ದೇನೆ ಅಂತ ಮೂರನೇ ಆದೇಶ ಮಾಡುತ್ತಾರೆ. ಅವರಿಗೆ ಲೈಸೆನ್ಸ್ ಕೊಟ್ಟಿದ್ದೇನೆ ಅಂತ. ಮತ್ತೆ ಯಾವ ಕಾರಣಕ್ಕೆ ಮೊದಲು ಕೊಟ್ಟರು, ಎರಡನೆ ಆದೇಶ ಏಕೆ ಕ್ಯಾನ್ಸಲ್ ಮಾಡಿದರು? ಮೂರನೆಯದು ಏಕೆ ಕೊಟ್ಟರು? ನಾಲ್ಕನೇ ಆದೇಶ ಮಾಡಿದ್ದಾರೆ ಅವನಿಗೆ ಮನೆ ಕೊಟ್ಟಿರುವಂತಾದ್ದು ಅಕ್ರಮ ಇದೆ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಆ ಮನೆ ಕಿತ್ತಾಕಿ ಬಾ ಅಂತ ಹೇಳಿ ಇ.ಓ. ಆದೇಶ ಮಾಡುತ್ತಾರೆ. ಅಂದರೆ ಇದು ಏನಿದು? ಈ ಸರ್ಕಾರದಲ್ಲಿ ಇ.ಓ. ಒಬ್ಬರು ನಾಲ್ಕು ಆರ್ಡರ್ ಅನ್ನು ಒಂದು ಸೈಟ್ ಮೇಲೆ ಮಾಡುತ್ತಾರೆ ಅಂದರೆ ಇದರ ಬಗ್ಗೆ ತನಿಖೆ ಆಗಬೇಕೋ ಬೇಡವೋ? ಇದನ್ನು ತನಿಖೆ ಮಾಡಬೇಕು ಅಂತ ಕೇಳಿದರೆ ಇದು ಅನ್ಯಾಯ ಎಂದು ಹೇಳುವಂತಹ ಪರಿಸ್ಥಿತಿ ಇದೆ. ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ನಾವು ಆಡಳಿತ ಮಾಡಬೇಕಾದಂತಹ ಸ್ಥಿತಿಯಲ್ಲಿದ್ದೇವೆ. ತಾವು ಮಾನ್ಯ ಅಧ್ಯಕ್ಷರೆ, ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಈ ಸರ್ಕಾರ ನಮಗೆ ಸಮರ್ಪಕವಾಗಿ ಉತ್ತರಗಳನ್ನು ಕೊಡಬೇಕು. ನನ್ನ ಕ್ಷೇತ್ರದ ಯಾವುದೇ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ. ಎನ್.ಆರ್. ಪುರದಲ್ಲಿ 7 ಜನ ಇರಬೇಕಾದಲ್ಲಿ, ಮೊನ್ನೆಯತನಕ ಒಬ್ಬರೂ ಇರಲಿಲ್ಲ, ಈಗ ಒಬ್ಬರು ಬಂದಿದ್ದಾರೆ. ಆದರೆ ಯೋಗಾ ಯೋಗಾ ನಮಗೆ ಡಾಕ್ಟರ್ ಬೇಕು ಎನ್ನುವಷ್ಟರೊಳಗೆ ಮಾನ್ಯ ಆರೋಗ್ಯ ಮಂತ್ರಿಗಳೆ, ಸದನಕ್ಕೆ ಬಂದಿದ್ದಾರೆ. ಇದಕ್ಕೆ ಅದೃಷ್ಟ ಅಂತಾರೆ ಸ್ವಾಮಿ. ಎನ್.ಆರ್.ಪುರಕ್ಕೆ ನಮ್ಮ ಆರೋಗ್ಯ ಸಚಿವರು ಏಳು ಜನ ಡಾಕ್ಟರ್‌ಗೆ ಆದೇಶ ಮಾಡಿದ್ದಾರೆ. ಆದರೆ ಒಬ್ಬರೇ ಒಬ್ಬರು ಡಾಕ್ಟರ್ ಬಂದಿದ್ದು; ಇನ್ನು 6 ಜನರ ಮೇಲೆ ಇವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಅವರು ಏಕೆ ಅಲ್ಲಿಗೆ ಹೋಗಿಲ್ಲ ಅಂತ ಹೇಳಿ ಅವರ ಮೇಲೆ ಏನಾದರೂ ಶಿಸ್ತು ಕ್ರಮ ತೆಗೆದುಕೊಂಡಿದ್ದಾರಾ? ಸಸ್ಪೆಂಡ್ ಮಾಡಿದ್ದಾರಾ? ಅವರನ್ನು ಏನು ಮಾಡಿದ್ದಾರೆಂಬುದನ್ನು ಹೇಳಬೇಕು. ಇನ್ನೊಂದು ಆಶ್ಚರ್ಯ ಅಂದರೆ ಕಂಟ್ರಾಕ್ಟ್ ಬೇಸಿಸ್‌ನಲ್ಲಿ . . . .

ಶ್ರೀ ಎನ್. ಚೆಲುವರಾಯಸ್ವಾಮಿ(ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಅಟ್‌ಲಿಸ್ಟ್ ಅಷ್ಟೆಲ್ಲಾ ಹೇಳುತ್ತಿದ್ದಾರೆ ನಮ್ಮ ಮಾನ್ಯ ಸದಸ್ಯರು. ನಾನು ಬಂದ ಮೇಲೆ ಅಲ್ಲಿಗೆ ಏಳು ಜನ ಡಾಕ್ಟರ್‌ನ್ನು ಹಾಕಿದರು ಅಂತ, ಅದಕ್ಕೆ ಒಂದು ಥ್ಯಾಂಕ್ಸ್ ಹೇಳುತ್ತಿಲ್ಲವಲ್ಲಾ. ಅವರು ಬರದೇ ಇದ್ದರೆ ಅವರಿಗೆ ಬೇರೆ ಕಡೆ ಡ್ಯೂಟಿ ಕೊಟ್ಟಿಲ್ಲ. ಅವರು ಸೀದಾ ಮನೆಗೆ ಹೋಗಬಹುದು, ಇಲಾಖೆಯಲ್ಲಿದ್ದರೆ ಸಸ್ಪೆಂಡ್ ಮಾಡುತ್ತೇನೆ. ಅಟ್‌ಲಿಸ್ಟ್ ಏಳು ಜನ ಡಾಕ್ಟರ್‌ನ್ನು ಎನ್.ಆರ್.ಪುರಕ್ಕೆ ಹಾಕಿದ್ದೇವೆ ಅಂದರೆ ಅದರ ಶ್ರಮ ಎಷ್ಟು ಅಂತ ದಯಮಾಡಿ ತಾವು ಯೋಚನೆ ಮಾಡಬೇಕು.

ಶ್ರೀ ಡಿ.ಎಸ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ಅವರು ನನಗೆ ಸಮಯ ಕೊಡಲಿಲ್ಲ. ಸಮಯ ಕೊಟ್ಟಿದ್ದರೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೆ. ಅದಕ್ಕಿಂತ ಮುಂಚೆಯೇ ತಾವು ಎದ್ದು ನಿಂತುಬಿಟ್ಟರಲ್ಲಾ. ಇಲ್ಲದಿದ್ದರೆ ನಾನು ಅದನ್ನು ಹೇಳುತ್ತಿದ್ದೆ. 6 ಜನ ಡಾಕ್ಟರ್ಸ್‌ನಲ್ಲಿ ಒಬ್ಬರು ಡಾಕ್ಟರ್ ಬಂದಿದ್ದಾರೆ. ಕಟ್ಟಿನಮನೆಯಲ್ಲಿ ಡಾಕ್ಟರ್ ಇಲ್ಲ. ಬಾಳೆಹೊನ್ನೂರಿನಲ್ಲಿ 5 ಜನ ಡಾಕ್ಟರ್ ಇರಬೇಕಾದಲ್ಲಿ ಒಬ್ಬರು ಇದ್ದಾರೆ. ಶೃಂಗೇರಿಗೆ ಒಬ್ಬ ಡಾಕ್ಟರ್ ಬಂದು ಮನೆ ಎಲ್ಲಾ ಗುಡಿಸಿಟ್ಟು ಅವರು ಲೇಡಿ ಡಾಕ್ಟರ್ ಹೋಗಿಬಿಟ್ಟಿದ್ದಾರೆ. ಎಲ್ಲಿಗೆ ಹೋದರು ಅಂತ ಗೊತ್ತಿಲ್ಲ. ಈ ಸ್ಥಿತಿಯಲ್ಲಿ ಏನು ಮಾಡಬೇಕಿದೆ? ನಕ್ಸಲೈಟ್ ಅಫೆಕ್ಟೆಡ್ ಏರಿಯಾ ಒಂದು ಕಡೆ, ನಮ್ಮ ಪರಿಸ್ಥಿತಿ ಅತ್ಯಂತ

ಕೆಟ್ಟದಾಗಿದೆ, ಇದರ ಮಧ್ಯೆದಲ್ಲಿ ಬಹಳ ಸಂತೋಷದ ವಿಷಯ ಅಂದರೆ ಡೆಂಟಿಸ್ಟ್‌ಗಳನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕರೆದಿದ್ದರು. ನಾನೇನು ಹೇಳಿದೆ ಕಡೆಯ ಪಕ್ಷ ನಮ್ಮ ಕ್ಷೇತ್ರದವರಿಗೆ ಕೊಡಿ ಅಂತ ಹೇಳಿ ನಮ್ಮ ಡಿ.ಸಿ.ಗೆ ಕೇಳಿಕೊಂಡೆ, ಮಾನ್ಯ ಅಧ್ಯಕ್ಷರೆ, ಅದನ್ನು ಅವರು ಗಮನಿಸಬೇಕು. ಆದರೆ ದುರಾದೃಷ್ಟವಶಾತ್ ಅಥವಾ ಅದೃಷ್ಟವಶಾತ್ ಗೊತ್ತಿಲ್ಲ ನನ್ನ ಕ್ಷೇತ್ರಕ್ಕೆ ಬರುವ ಡಾಕ್ಟರ್ ಡೆಂಟಿಸ್ಟ್ ಅರಸೀಕೆರೆಯಿಂದ ಕಾಂಟ್ರಾಕ್ಟ್, ಬೇಸಿಸ್ ಮೇಲೆ ಬರುತ್ತಾರೆ. ನಮ್ಮ ಶೃಂಗೇರಿಯಲ್ಲಿರುವಂತಹ ಡಾಕ್ಟರ್ ಅರಸೀಕೆರೆಯವರಿಗಿಂತ ಜಾಸ್ತಿ ಪರ್ಸೆಂಟೇಜ್ ಇದ್ದರೂ, ಅವರಿಗೆ ಅನುಭವ ಇದ್ದರೂ ಅವರನ್ನು ಏಕೆ ತೆಗೆದುಕೊಳ್ಳಲಿಲ್ಲವೋ ಗೊತ್ತಿಲ್ಲ. ಇದರ ಹಿಂದುಗಡೆ ಇರುವಂತಹ ಉದ್ದೇಶ ಯಾವುದು ಅಂತ ಗೊತ್ತಿಲ್ಲ. ಇನ್ನು ಎನ್.ಆರ್.ಪುರಕ್ಕೆ ಒಬ್ಬರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡೆಂಟಿಸ್ಟ್‌ನ್ನು ಹಾಕುತ್ತಾರೆ. ಹೇಗೆ ಹಾಕುತ್ತಾರೆ ಅಂದರೆ ಎನ್.ಆರ್.ಪುರದಲ್ಲಿಯೇ ಇದ್ದಂತಹ ಒಬ್ಬರು ಡಾಕ್ಟರ್ ಒಬ್ಬರಿಗೆ 7 ವರ್ಷ ಸರ್ವೀಸ್ ಇನ್ನೊಬ್ಬರಿಗೆ 4–5 ವರ್ಷ ಸರ್ವೀಸ್, ಪರಿಶಿಷ್ಟ ವರ್ಗದಿಂದ ಬಂದವರು. ಅವರಿಬ್ಬರೂ ಕೇಳಿದರೆ ಅವರಿಬ್ಬರಿಗೂ ಕೊಡುವುದಿಲ್ಲ. ಹೊರಗಡೆಯವರನ್ನು ತೆಗೆದುಕೊಂಡು ಬಂದು ಹಾಕುತ್ತಾರೆ. ಡೆಂಟಿಸ್ಟ್‌ಗಳಿಗೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹಾಕಬೇಕಾದರೆ ನಮ್ಮ ಕ್ಷೇತ್ರದ ಬಗ್ಗೆ ಬಹಳ ಕಾಳಜಿ ಇರತಕ್ಕವರನ್ನು ಬಿಟ್ಟು ಅರಸೀಕೆರೆಯಿಂದ ತೆಗೆದುಕೊಂಡು ಬಂದು ಹಾಕುತ್ತಾರೆ; ಕಡೂರಿನಿಂದ ತೆಗೆದುಕೊಂಡು ಬಂದು ಹಾಕುತ್ತಾರೆ, ಕ್ಷೇತ್ರದವರಿಗೆ ಕೊಡುವುದಿಲ್ಲ. ಕಾಂಟ್ರಾಕ್ಟ್ ಬೇಸಿಸ್ ಡಾಕ್ಟರ್ ಅಲ್ಲಿರುವಂತಹ ಒಬ್ಬ ಅನಿಲ್ ಕುಮಾರ್ ಎನ್ನುವವರನ್ನು ಕಟ್ಟಿನಮನೆಗೆ ಹಾಕಿದ್ದರು, ಅವರಿಗೆ ನಿಮಗೆ 36 ವರ್ಷ ಆಗಿಬಿಟ್ಟಿದೆ ಅದಕ್ಕೆ ನೀನು ಬರಬೇಡ ನನಗೆ 36ರ ಒಳಗೆ ಇರುವವರು ಬೇಕಿತ್ತು ನಿನಗೆ 36 ವರ್ಷ ಆಗಿದೆ ಅಂತ ಹೇಳಿ ಕೈ ಬಿಟ್ಟರು. ಚಿಕ್ಕಮಗಳೂರು ಜಿಲ್ಲೆಯಿಂದ ಶಿವಮೊಗ್ಗದ ರಿಪ್ಪನ್‌ಪೇಟೆಯಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹೋಗಿ ಸೇರಿಕೊಂಡಿದ್ದಾರೆ. ಚಿಕ್ಕಮಗಳೂರಿನವರಿಗೆ ವಯಸ್ಸು ಆಗುತ್ತದೆ, ಶಿವಮೊಗ್ಗಕ್ಕೆ ಹೋಗಲಿಕ್ಕೆ ಏಕೆ ವಯಸ್ಸು ಆಗುವುದಿಲ್ಲ. ಇದರ ಉದ್ದೇಶ ಏನಿದೆ? ಚಿಕ್ಕಮಗಳೂರಿನ ನನ್ನ ಕ್ಷೇತ್ರದ ಬಗ್ಗೆ ಯಾವ ಉದ್ದೇಶ ಇಟ್ಟುಕೊಂಡಿದ್ದೀರಿ? ಯಾವ ಆದೇಶದ ಮೇಲೆ ಇದು ನಡೆಯುತ್ತದೆ? ಇದರ ಬಗ್ಗೆ ಹೇಳಬೇಕು ಅಂತ ಹೇಳುತ್ತಾ, ಸುದೀರ್ಘವಾಗಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ; ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ನಮಗೆ ಬಹಳಷ್ಟು ಅಂಗನವಾಡಿಗಳನ್ನು ಕೊಡುತ್ತೀರಿ ಅಂತ ತಿಳಿದುಕೊಂಡಿದ್ದೇನೆ. ಮೂರು ತಾಲ್ಲೂಕುಗಳ ಕ್ಷೇತ್ರ ಇಡೀ ರಾಜ್ಯದಲ್ಲಿ ನನ್ನದೊಂದೇ ಕ್ಷೇತ್ರ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಒಳ್ಳೆಯ ವಿಚಾರವನ್ನು ತೆಗೆದಿರಿ. ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಆ ಕಾಂಟ್ರಾಕ್ಟ್‌ಗೆ ದಯವಿಟ್ಟು ಯಾರೂ ಬರುವುದಿಲ್ಲ. ಅವರೆನ್ನು ಪರ್ಮನೆಂಟ್ ಆಗಿ ನೇಮಕ ಮಾಡಿ ಕಳುಹಿಸಿ. ಕಂಟ್ರಾಕ್ಟ್ ಬೇಸಿಸ್ ಮೇಲೆ ಹಾಕಿದವರು ಕೂಡ ಬಂದಿಲ್ಲ. ನೀವು ಕಾಂಟ್ರಾಕ್ಟ್ ಮೇಲೆ ತೆಗೆದುಕೊಂಡರೆ ಅವರು ಬರುವುದಿಲ್ಲ ಹುದ್ದೆಗಳು ಖಾಲಿ ಇರುತ್ತವೆ. ದಯವಿಟ್ಟು ಆ ಕಾಂಟ್ರಾಕ್ಟ್ ತೆಗೆಯಿರಿ ಫೈನಾನ್ಸ್‌ನವರ ಜೊತೆ ಮಾತನಾಡಿ ರೆಗ್ಯುಲರ್ ಆಗಿ ಡಾಕ್ಟರ್‌ನ್ನು ಹಾಕಿ, ಇಲ್ಲದಿದ್ದರೆ ಸುಮ್ಮನೇ ಖಾಲಿ ಇವೆ ದಾವಾಖಾನೆಗಳು. ಏನೂ ಉಪಯೋಗ ಇಲ್ಲ. ಅವುಗಳನ್ನು ಬಂದ್ ಮಾಡುವುದು ಒಳ್ಳೆಯದು. ಆ ಕಾರಣದಿಂದ ರೆಗ್ಯುಲರ್ ಡಾಕ್ಟರ್ಸ್‌ನ್ನು ಹಾಕಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ನೇರ ನೇಮಕಾತಿ ಮಾಡಲು ಕ್ಯಾಬಿನೆಟ್ ಅಪ್ರೂವಲ್‌ಗೆ ಹೋಗಿದೆ. 500 ಜನ ಡಾಕ್ಟರ್ಸ್‌ನ್ನು ತೆಗೆದುಕೊಳ್ಳುತ್ತಿದ್ದೇವೆ. ಅದನ್ನು ತಾತ್ಕಾಲಿಕವಾಗಿ ಮಾಡಿದ್ದೇವೆ. ಈಗ ಏನು ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ, ನಾವು ಅದನ್ನು ಅಧಿಕಾರ ವಿಕೇಂದ್ರಿಕರಣ ಅಂತ ಹೇಳಿ ಜಿಲ್ಲಾಧಿಕಾರಿಗಳಿಗೆ ಬಿಟ್ಟಿದ್ದೇವೆ. ಡೆಂಟಲ್ ಡಾಕ್ಟರ್ ಯಾರು ಬೇಕಾದರೂ ಅಪ್ಲಿಕೇಶನ್ ಹಾಕಬಹುದು ಚಿಕ್ಕಮಗಳೂರಿಗೆ, ನಿಮ್ಮ ಊರಿನವರಿಗೆ ಕೊಡಬೇಕು ಅಥವಾ ಅರಸೀಕೆರೆಗೆ ಕೊಡಬೇಕು ಶಿವಮೊಗ್ಗ ಅಂತ ಅಲ್ಲ, ಶಿವಮೊಗ್ಗದವರು ಅಪ್ಲಿಕೇಶನ್ ಹಾಕಿ ಅವನು ಹೈಯಸ್ಟ್ ಮೆರಿಟ್ ಇದ್ದರೆ ಶಿವಮೊಗ್ಗದವನಿಗೆ ಕೊಡಬೇಕಾಗುತ್ತದೆ. ಚಿಕ್ಕಮಗಳೂರುನವರಿಗೆ ಮೆರಿಟ್ ಇದ್ದವರಿಗೆ ಕೊಡಲಿಲ್ಲ ಅಂದರೆ, ತಾವು ದಯಮಾಡಿ ನನಗೆ ನೀವು ಹೇಳಿದರೂ ಕೇಳುತ್ತೇನೆ. ನೀವೇ ಅದನ್ನು ಡಿ.ಸಿ.ಯವರ ಹತ್ತಿರ ಕೇಳುವುದಕ್ಕೆ ಅಧಿಕಾರ ಇದೆ, ನಿಮ್ಮ ಜಿಲ್ಲೆಯಲ್ಲಿ ನೀವೇ ಶಾಸಕರಾಗಿರುತ್ತೀರಿ, ಅದನ್ನು ಅಷ್ಟು ಸುಲಭವಾಗಿ ಡಿ.ಸಿ.ಯವರು ಮುಚ್ಚಿಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಸಚಿವರು ಕೇಳಬೇಕು, ಅವರು ಹೇಳಿದ್ದು ಅರಸೀಕೆರೆಯವರು, ಶೃಂಗೇರಿ ಮಾತ್ರವಲ್ಲ ಮಾರ್ಕ್ಸ್ ಜಾಸ್ತಿ ಇದೆ ಆದರೂ ಕೊಡಲಿಲ್ಲ ಅಂತ ಅವರು ಹೇಳಿದರು. ಮೆರಿಟ್ ಇದ್ದರೂ ಸಿಗಲಿಲ್ಲ ಅಂತ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ಉತ್ತರವನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು ಡಿ.ಸಿ.ಯವರು ಹೇಳುವುದಕ್ಕಾಗುವುದಿಲ್ಲ. ದಯಮಾಡಿ ಅವರು ನೇರವಾಗಿ ಫೋನ್‌ನಲ್ಲಿಯೋ, ಖುದ್ದಾಗಿಯೋ, ಪತ್ರದಲ್ಲೂ ಬರೆದು ಅವರ ನೇಮಕಾತಿ ವಿಚಾರದಲ್ಲಿ, ಕಾಂಟ್ರಾಕ್ಟ್ ವಿಚಾರದಲ್ಲಿ ಸ್ಪಷ್ಟವಾಗಿ ಡಿಟೇಲ್ಸ್ ತೆಗೆದುಕೊಂಡು ಅವರನ್ನು ಪ್ರಶ್ನೆ ಮಾಡುವುದಕ್ಕೆ ಅಧಿಕಾರ ಇದೆ. ಅಥವಾ ನನಗೆ ಈಗ ಕೊಟ್ಟರೂ ನಾನು ನಾಳೆಯೇ ಅದರ ಬಗ್ಗೆ ವಿವರ ತರಿಸಿ ಏನು ತಪ್ಪಾಗಿದೆ ಎಂದು ನೋಡುತ್ತೇನೆ ಅದಕ್ಕೆ ಜಿಲ್ಲಾಧಿಕಾರಿಗಳು ಮನಸ್ಸಿಗೆ ಬಂದಂತೆ ಹಾಗೆ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಮಾಡಿದ್ದರೆ ಖಂಡಿತ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಹಾಗೇನಾದರೂ ಮಾಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದನ್ನು ಮಾಡೋಣ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಏನಾಗಿದೆ ಎಂದರೆ ಪ್ರತಿ 30,000 ಜನಸಂಖ್ಯೆಗೆ ಒಂದು ಪಿಹೆಚ್‌ಸಿಗಳನ್ನು ಪ್ರಾರಂಭ ಮಾಡಿದ್ದೇವೆ, ಪಿಹೆಚ್‌ಸಿಯಲ್ಲಿರತಕ್ಕಂಥ ಡಾಕ್ಟರ್ ಸಂಖ್ಯೆ ಕೇವಲ ಒಂದು. ಆ ಡಾಕ್ಟರ್‌ಗೆ ವಾರದಲ್ಲಿ ಮೂರು ದಿವಸ ಮೀಟಿಂಗ್ ಹೋಗುವಂತಹ ಪ್ರಸಂಗ ಬರುತ್ತದೆ, ರಜ ಬರುತ್ತವೆ, ರಜ ತೆಗೆದುಕೊಳ್ಳುತ್ತಾರೆ, ಹೀಗಾಗಿ ವಾರದಲ್ಲಿ ಎರಡು ದಿವಸವೂ ಕೂಡ ಡಾಕ್ಟರ್ ಪಿಹೆಚ್‌ಸಿಗಳಲ್ಲಿ ಸಿಗುತ್ತಿಲ್ಲ. ಅದಕ್ಕಾಗಿ ನಾನು ಏನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆಂದರೆ ಎರಡನೇ ಡಾಕ್ಟರ್ ನೇಮಕಾತಿಯಾಗಬೇಕಾಗುತ್ತದೆ, ಒಂದು ಪಿಹೆಚ್‌ಸಿಗೆ ಒಬ್ಬ ಡಾಕ್ಟರ್ ಜೊತೆಗೆ ಇನ್ನೊಬ್ಬ ಡಾಕ್ಟರ್‌ಗೆ ಮಂಜೂರಾತಿಯನ್ನು ಕೊಟ್ಟು ಸರ್ಕಾರ ನೇಮಕಾತಿ ಮಾಡಿದರೆ ಸುಮಾರು ಏಳೆಂಟುನೂರು ವೈದ್ಯರಿಗೆ ಅಕಾಮಿಡೇಟ್ ಮಾಡಿದಂತಾಗುತ್ತದೆ. ಜನರಿಗೆ ಅನುಕೂಲವಾಗುತ್ತದೆ, ಅದರಿಂದ ಸರ್ಕಾರಕ್ಕೇನೂ ದೊಡ್ಡ ಹೊರೆಯಾಗುವುದಿಲ್ಲ, ವರ್ಷಕ್ಕೆ ಹೆಚ್ಚೆಂದರೆ 25–30 ಕೋಟಿ ರೂಪಾಯಿಗಳು ಹೆಚ್ಚುವರಿ ಹಣಕಾಸಿನ ಹೊರೆಯಾಗುತ್ತದೆ. ಅದಕ್ಕೆ ನಾನೇನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆಂದರೆ, ಇದೇ ಸಂದರ್ಭದಲ್ಲಿ, ಪ್ರತಿ ಪಿಹೆಚ್‌ಸಿಗೆ ಇನ್ನೊಬ್ಬ ಹೆಚ್ಚುವರಿ ಡಾಕ್ಟರ್ ಅನ್ನು ಕೊಡುತ್ತೇವೆಂದು ಸಚಿವರು ಹೇಳಲಿ.

ಶ್ರೀ ಡಿ.ಎನ್. ಜೀವರಾಜ್: ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಡೆಂಟಿಸ್ಟ್‌ಗಳ ವಿಷಯ ಬಂದಾಗ ನನ್ನ ಕ್ಷೇತ್ರದ ಬಗ್ಗೆ ಇಡೀ ರಾಜ್ಯಕ್ಕೆ ಬಹಳ ಪ್ರೀತಿ. ಏಕೆಂದರೆ ಅವರಿಗೆ ಕೆಲಸವಿಲ್ಲದೆ ಇದ್ದಾರೆ, ಹಾಗಾಗಿ ನನ್ನ ಕ್ಷೇತ್ರದ ಬಗ್ಗೆ ಎಷ್ಟೊಂದು ಪ್ರೀತಿ. ಈ ಎಂಬಿಬಿಎಸ್ ಡಾಕ್ಟರ್ ವಿಷಯ ಬಂದಾಗ ಅರಿಸೀಕೆರೆಯವರನ್ನು ಹಾಕುವುದಿಲ್ಲ, ಕಡೂರಿನವರನ್ನು ಹಾಕುವುದಿಲ್ಲ, ನೀವು ಎಲ್ಲದಕ್ಕೂ ಒಂದೇ ಆದ್ಯತೆಯನ್ನು ಕೊಡಿ, ಆಗ ಏತಕ್ಕೆ ಹಾಕಿದಿರಿ ಎಂದು ಕೇಳುವುದಿಲ್ಲ. ಶೃಂಗೇರಿಯಲ್ಲಿರುವ ಡಾಕ್ಟರನ್ನು ಏನು ಹಾಕಿದ್ದರು, ಅವರು ಇವರೆಲ್ಲರಿಗಿಂತ ಪರ್ಸೆಂಟೇಜ್‌ನಲ್ಲಿ ಜಾಸ್ತಿ ಇದ್ದರು; ಅವರಿಗೆ ಕೊಟ್ಟಿಲ್ಲ, ನೀವು ಬೇಕಿದ್ದರೆ ತನಿಖೆ ಮಾಡಿಸಿ, ನಾನೊಂದು ಪ್ರಶ್ನೆ ಹಾಕಿದ್ದೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ, ದಯಮಾಡಿ ಉತ್ತರ ಒದಗಿಸಿಕೊಡಿ ಎಂದು ಬರೆದುಕೊಟ್ಟಿದ್ದೆ. ಪ್ರಶ್ನೆ ಇರುವುದು ಇಡೀ ರಾಜ್ಯದಿಂದ ಬೇರೆಯವರು ಬರಬಾರದೆಂದಲ್ಲ, ಎಂಬಿಬಿಎಸ್‌ನವರು ಬಂದಿರುವುದಕ್ಕೆ ಡೆಂಟಿಸ್ಟ್‌ನವರನ್ನು ಏಕೆ ಬೇರೆಡೆಯಿಂದ ತಂದು ಹಾಕುತ್ತೀರಿ? ಅದನ್ನೂ ಕೂಡ ಖಾಲಿ ಎಂದು ಬಿಟ್ಟುಬಿಡಿ; ಇದು ನನ್ನ ಉದ್ದೇಶ. ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, ಇಡೀ ರಾಜ್ಯದಲ್ಲಿ ಮೂರು ತಾಲ್ಲೂಕು ಇರುವಂತಹದ್ದು ನನ್ನ ಕ್ಷೇತ್ರ ಮಾತ್ರ. ಒಂದು ಲಕ್ಷ ಮೂವತ್ತೇಳು ಸಾವಿರ ಮತದಾರರು ಮಾತ್ರವಿದ್ದಾರೆ, ನಮ್ಮನ್ನು ಒಂದು ಮನೆಗೆ ಒಂದು ಊರೆಂದು ಕರೆಯುತ್ತಾರೆ, ನೂರು ಮನೆಗೆ ಒಂದು ಊರಲ್ಲ, ಒಂದು ಮನೆಗೆ ಒಂದು ಊರು, ಹಾಗಾಗಿ ಹತ್ತು ಹನ್ನೆರಡು ಮಕ್ಕಳಿದ್ದರೂ ಕೂಡ ತಾವು ಒಂದು ಅಂಗನವಾಡಿಯನ್ನು ಕೊಟ್ಟು, ಆ ಕ್ಷೇತ್ರದ ಕಡೆ ತಮ್ಮ ಕೃಪೆ ಇರಲಿ. ಒಂದಿಷ್ಟು ಅಂಗನವಾಡಿಗಳನ್ನು ನಮ್ಮ ಕ್ಷೇತ್ರಕ್ಕೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಾ, ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಒಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ರಘುಪತಿ ಭಟ್(ಉಡುಪಿ): ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಪ್ರಥಮವಾಗಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಮೀನುಗಾರಿಕೆ ಇಲಾಖೆಯ ಬಗ್ಗೆ ಸರ್ಕಾರದ ಗಮನಸೆಳೆಯುತ್ತಿದ್ದೇನೆ. ಇವತ್ತು ನಮ್ಮ ಕರಾವಳಿಯ ಮೂರು ಜಿಲ್ಲೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಂತಹ ಖಾತೆ ಇದಾಗಿದೆ. ಏಕೆಂದರೆ ಈ ಸರ್ಕಾರ ಮೀನುಗಾರಿಕೆಯ ಬಗ್ಗೆ ಬಹಳಷ್ಟು ನಿರ್ಲಕ್ಷ್ಯ ವಹಿಸಿದ್ದನ್ನು ನಾವು ನೋಡುತ್ತಿದ್ದೇವೆ. ಪ್ರಮುಖವಾಗಿ, ನಮ್ಮ ಮೀನುಗಾರಿಕೆ ಇಲಾಖೆಗೆ ಒಬ್ಬ ಸಚಿವರನ್ನು ಕೊಡಲಿಲ್ಲ, ಮುಖ್ಯಮಂತ್ರಿಗಳೇ ತಮ್ಮ ಬಳಿಯಲ್ಲಿ ಈ ಖಾತೆಯನ್ನು ಇಟ್ಟುಕೊಂಡಿದ್ದಾರೆ. ನಾವೇನಾದರೂ ಮೀನುಗಾರಿಕೆ ಸಮಸ್ಯೆಯ ಬಗ್ಗೆ ಏನಾದರೂ ಚರ್ಚೆ ಮಾಡಬೇಕೆಂದರೆ, ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದು ಬಹಳ ಕಷ್ಟವಾಗುತ್ತದೆ. ಪ್ರಾಯಶಃ ನಮ್ಮ ಮೀನುಗಾರಿಕೆಗೆ ಒಬ್ಬ ಸಚಿವರನ್ನು ನೇಮಕ ಮಾಡಿ ಆದ್ಯತೆ ಕೊಡುವ ದೃಷ್ಟಿಯಲ್ಲಿ ಸರ್ಕಾರ, ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕೆನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಕಳೆದ ವರ್ಷ ಸುನಾಮಿ ಬಂದು, ಇಡೀ ವಿಶ್ವದಲ್ಲಿ ಭಯದ ವಾತಾವರಣವಿದ್ದುದು ಇದು ತಮಗೆಲ್ಲಾ ಗೊತ್ತಿರುವಂತಹದ್ದು. ಸುನಾಮಿಗಿಂತ, ದೊಡ್ಡ ಭಯದ ಪರಿಸ್ಥಿತಿ ನಮ್ಮಲ್ಲಿ ಮಳೆಗಾಲದಲ್ಲಿ ಸಮುದ್ರ ಕೊರೆತದ ಸಮಸ್ಯೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಮೂರು ಜಿಲ್ಲೆಯ ಜನರು ಮಳೆಗಾಲ ಬಂದರೆ ಕಡಲುಕೊರೆತದ ಭೀತಿಯಿಂದ ಯಾವಾಗಲೂ ತೊಂದರೆಯನ್ನು ಎದುರಿಸುತ್ತಿದ್ದಾರೆ. 136 ಕೋಟಿ ರೂಪಾಯಿಗಳ ಶಾಶ್ವತ ತಡೆಗೋಡೆ ಯೋಜನೆ

ಪ್ರಸ್ತಾವನೆ ನಮ್ಮ ಉಡುಪಿ ಜಿಲ್ಲೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಪ್ರತಿ ವರ್ಷ ಮಳೆ ಬಂದಾಗ ಸಮುದ್ರ ಕೊರೆತವಾಗುತ್ತದೆ. ತಡೆಗೋಡೆ ರಚನೆಯಾಗಬೇಕೆಂದು ನೆನಪಾಗುತ್ತದೆ. ಸಚಿವರುಗಳು ಬರುತ್ತಾರೆ, ನಾವು ಮಾಡುತ್ತೇವೆ, ಮುಂದಿನ ವರ್ಷ ಮಾಡುತ್ತೇವೆಂದು ಘೋಷಣೆಗಳನ್ನು ಮಾಡುತ್ತಾರೆ, ಆದರೆ ಶಾಶ್ವತವಾದ ಯೋಜನೆಯನ್ನು ಇದುವರೆವಿಗೂ ಮಾಡಲಿಲ್ಲ, ಶಾಶ್ವತ ತಡೆಗೋಡೆಗೆ ಕಳೆದ ವರ್ಷ 136 ಕೋಟಿ ರೂಪಾಯಿಗಳ ಯೋಜನೆ ಪ್ರಸ್ತಾಪ ಹೋಗಿರುವುದು, ಹಿಂದಿನ ಸಚಿವರುಗಳು ಫ್ರಾನ್ಸ್‌ಗೆಲ್ಲಾ ಹೋಗಿ ಅಧ್ಯಯನ ಮಾಡಿ ಬಂದಿದ್ದಾರೆ, ಆದರೆ ಅದು ಇನ್ನೂ ಅನುಷ್ಠಾನವಾಗಿಲ್ಲ. ಇವತ್ತು ಈ ಮೂರು ಜಿಲ್ಲೆಗೆ ಸಂಬಂಧಪಟ್ಟಂತೆ ಕಡಲುಕೊರೆತವನ್ನು ತಡೆಯಲು ಶಾಶ್ವತ ತಡೆಗೋಡೆಯನ್ನು ಸರ್ಕಾರ ಮಾಡಲೇಬೇಕು. ಏಕೆಂದರೆ, ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದಿದ್ದರು, ಸುನಾಮಿ ನಿಧಿಯಿಂದ ನಮ್ಮ ಜಿಲ್ಲೆಗೆ ಮೂರು ಕೋಟಿ ರೂಪಾಯಿಗಳನ್ನು ತಡೆಗೋಡೆ ರಚನೆಗೆ ಕೊಡುತ್ತೇವೆಂದು ಹೇಳಿದ್ದರು, ಕೇವಲ ಒಂದು ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಮಾತನಾಡಲಿ ಅವರು ಮಾತನಾಡಿದ ನಂತರ ಸಭೆ ಮುಗಿಸಿ, ಏಕೆಂದರೆ ಎಲ್ಲರೂ ಎದ್ದೆದ್ದು ಹೋಗುತ್ತಿದ್ದಾರೆ. ನಾಳೆ ಬೆಳಿಗ್ಗೆ 9–00 ಗಂಟೆಗೆ ಸಭೆ ಶುರು ಮಾಡಿ, ನಾವು ಬೇಡ ಅನ್ನುವುದಿಲ್ಲ. ಏಕೆಂದರೆ ಈಗ 9 ಗಂಟೆಯವರೆಗೆ ಸಭೆ ನಡೆಸುತ್ತೇವೆಂದರೆ ಎಲ್ಲರೂ ಹೋಗುತ್ತಾರೆ, ನಾವು ಹೋಗಬೇಕಾಗುತ್ತದೆ.

ಛೇರ್ಮನ್: ಅಧ್ಯಕ್ಷರು, ಈಗ 9 ಗಂಟೆಯವರೆಗೂ ಸಭೆ ನಡೆಸಬೇಕೆಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಹಾಗಾದರೆ 8 ಗಂಟೆಯವರೆಗೆ ನಡೆಸಿ ನಾಳೆ ಬೆಳಿಗ್ಗೆ 9 ಗಂಟೆಗೆ ಸಭೆ ಕರೆಯಿರಿ, ಮಾನ್ಯ ಸದಸ್ಯರು ತಾವು ತಮ್ಮ ಭಾಷಣ ಮುಂದುವರೆಸಿ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಛೇರ್ಮನ್‌ರವರೆ, 3 ಕೋಟಿಯಲ್ಲಿ 1 ಕೋಟಿ ಬಿಡುಗಡೆಯಾಗಿದೆ, ಇನ್ನುಳಿದ ಎರಡು ಕೋಟಿ ರೂಪಾಯಿಗಳು ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ತಾತ್ಕಾಲಿಕ ತಡೆಗೋಡೆಗೆ ಮರುಳುಚೀಲದಲ್ಲೇ ಹಾಕಬೇಕೆನ್ನುವ ಆದೇಶವನ್ನು ಸರ್ಕಾರ ಟೆಕ್ನಿಕಲ್ ರಿಪೋರ್ಟ್ ಪ್ರಕಾರ ಮಾಡಿದೆ. ಇವತ್ತು ನಮಗೆ ಬಂದ ಮಾಹಿತಿಯ ಪ್ರಕಾರ ಅದರಲ್ಲೂ ದೊಡ್ಡ ಮಾಫಿಯ ಇದೆ. ಮರಳು ಚೀಲ ಹಾಕುವುದರಿಂದ ಅವರಿಗೆ ಹೆಚ್ಚು ಲಾಭ ಬರುವುದರಿಂದ ಅದನ್ನು ಮಾಡಿದ್ದಾರೆಂದು ಇವತ್ತು ಕೇಳುತ್ತಿದ್ದೇವೆ. ಕೆಲವು ಕಡೆಯಾದರೂ ಕಲ್ಲು ಹಾಕಿಯೇ ತಾತ್ಕಾಲಿಕ ತಡೆಗೋಡೆಯನ್ನು ರಚನೆ ಮಾಡಲೇಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮಲ್ಪೆಯಲ್ಲಿ, ಪಡುಕೆರೆ ಎನ್ನುವ ಭಾಗವಿದೆ ಒಂದು ಬದಿಯಲ್ಲಿ ನದಿ, ಇನ್ನೊಂದು ಬದಿಯಲ್ಲಿ ಸಮುದ್ರ, ಸಮುದ್ರಕೊರೆತವಾಗಿ ನೀರು ನದಿಗೆ ಸೇರಿಕೊಂಡರೆ ಕೆಲವು ಭಾಗ ಮುಳುಗಡೆಯಾಗುವ ಅವಕಾಶವಿದೆ. ಕಳೆದ ವರ್ಷ ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆಯಿಂದ ಒಂದು ಕಾಂಕ್ರೀಟ್ ರಸ್ತೆಯನ್ನು ಮಾಡಲಾಗಿತ್ತು ಆ ಕಾಂಕ್ರೀಟ್ ರಸ್ತೆ ಕಳೆದ ವರ್ಷ ಸಮುದ್ರ ಕೊರೆತಕ್ಕೆ ತುಂಡಾಗಿದೆ. ಅಂತಹ ಪ್ರದೇಶದಲ್ಲಾದರೂ ಸರ್ಕಾರ ಕಲ್ಲು ಹಾಕುವುದಕ್ಕೆ ಅನುಮತಿ ಕೊಡಬೇಕು ಮತ್ತು ಶಾಶ್ವತ ಪರಿಹಾರ ತಡೆಗೋಡೆ ರಚನೆ ಮಾಡಬೇಕು. ಈ ವರ್ಷ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದಾರೆ, ಅದರಲ್ಲಿ ಎರಡು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಬಂದರು ಅಭಿವೃದ್ಧಿಯ ಬಗ್ಗೆ, ನಮ್ಮ ಮಲ್ಪೆಯ ಬಂದರು ಅಭಿವೃದ್ಧಿ ಸಮಗ್ರವಾಗಿ ಇನ್ನೂ ಆಗಲಿಲ್ಲ, ಇದಕ್ಕೆ ಸರ್ಕಾರ ಆಯವ್ಯಯದಲ್ಲಾಗಲಿ ಅಥವಾ ಯಾವುದೇ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಿಲ್ಲ. ಮಲ್ಪೆ ಸರ್ವಋತು ಮೀನುಗಾರಿಕೆ ಬಂದರು, ಅದರ ಅಭಿವೃದ್ಧಿಯ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನೂ ಹಾಕಿಕೊಳ್ಳಲಿಲ್ಲ. ಅದು ಬಿಟ್ಟು ನಮ್ಮ ಮೀನುಗಾರಿಕೆ ಬಂದರುಗಳಲ್ಲಿ ಕಮರ್ಷಿಯಲೈಸೇಷನ್ ಮಾಡುವುದನ್ನು ಆರಂಭ ಮಾಡಿದರು. ನಮಗೆಲ್ಲಾ ಗೊತ್ತಿಲ್ಲದಂತೆ ಒಂದು ಸ್ಲಿಪ್‌ವೇ ರಚನೆ ಮಾಡುತ್ತೇವೆಂದು ಶಿಪ್‌ಬಿಲ್ಡಿಂಗ್ ಟನ್ ಮತ್ತು ಬಾರ್ಜ್ ರಿಪೇರಿ ಮತ್ತು ಹೊಸದು ರಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಮೀನುಗಾರಿಕೆ ಬಂದರಿನಲ್ಲಿ, ಮೀನುಗಾರಿಕೆ ಮಾತ್ರ ಇರಬೇಕಾಗಿತ್ತು, ಇವತ್ತು ಅಲ್ಲಿ ಕಮರ್ಷಿಯಲ್ ಶಿಪ್‌ಬಿಲ್ಡಿಂಗ್‌ಗೆ ಅವಕಾಶ ಮಾಡಿಕೊಡಲಾಗಿದೆ. ಇವತ್ತು ಅದನ್ನು ಆಕ್ಷೇಪ ಮಾಡಿ ವಾಪಸ್ ಕಳುಹಿಸುವ ಹಾಗೆ ಇಲ್ಲ. ಏಕೆಂದರೆ, ಈಗಾಗಲೇ ಹಣ ಕಟ್ಟಿದ್ದಾರೆ, ಟೆಂಡರ್ ಅವರಿಗಾಗಿದೆ, ಕೆಲಸ ಪ್ರಾರಂಭವಾಗಿದೆ ಆದರೆ ಇವತ್ತು ಅದಕ್ಕೆ ನಾವು ಕೆಲವೊಂದು ಬೇಡಿಕೆಗಳನ್ನು ಜಿಲ್ಲೆಯ ಶಾಸಕರುಗಳೆಲ್ಲಾ ಸೇರಿಕೊಂಡು ಹಾಕಿದ್ದೆವು, ಒಂದು ಸಮಿತಿಯನ್ನು ರಚನೆ ಮಾಡಿ ಚಾನಲ್‌ನಲ್ಲಿ ಬರುವುದನ್ನು ಕಂಟ್ರೋಲ್ ಮಾಡಬೇಕೆಂಬುದಾಗಿತ್ತು. ಆ ಜಿ.ಓ. ಅನ್ನು ಶಾಸಕರುಗಳ ಗಮನಕ್ಕೆ ತರದೆ ಹೊರಡಿಸಿದ್ದಾರೆ. ಆ ಸಭೆಯಲ್ಲಿ ನಮ್ಮ ಜಿಲ್ಲೆಯ ಶಾಸಕರುಗಳೆಲ್ಲಾ ಇದ್ದರು, ನಮಗೆ ಈ ಕರಡು ಪ್ರತಿ ಜಿ.ಓ.ವನ್ನು ತೋರಿಸಿ ಆಮೇಲೆ ಫೈನಲ್ ಮಾಡಬೇಕೆಂದು ಹೇಳಿದ್ದೆವು. ಅದರಲ್ಲಿ ಶಾಸಕರುಗಳಿಗಾಗಲೀ ಸಂಸತ್ ಸದಸ್ಯರುಗಳಿಗಾಗಲೀ ಅವಕಾಶವಿಲ್ಲ, ಸಮಿತಿಯಲ್ಲಿ ಆ ಟೆಗ್ಮಾ ಕಂಪನಿಯವರು, ಅಧಿಕಾರಿಗಳು, ಒಂದೆರಡು ಜನ ಮೀನುಗಾರರ ಪ್ರಮುಖರು ಇರುತ್ತಾರೆ. ಇದರ ಜೊತೆಗೆ ಅದರಲ್ಲಿ ಜನಪ್ರತಿನಿಧಿಗಳನ್ನು ಸೇರಿಸುವಂತಹ ಭರವಸೆಯನ್ನು ಸರ್ಕಾರ ಕೊಡುವುದಾದರೆ ಒಳ್ಳೆಯದು. ಜಿ.ಓ. ಹೊರಡಿಸುವ ಕೊನೆ ಸಮಯದಲ್ಲಿ ಇದನ್ನು ಮಾಡಲಿಲ್ಲ. ಆ ಸಮಿತಿ ಬಹಳ ಪ್ರಮುಖವಾದುದು, ನಾಳೆ ಘರ್ಷಣೆಗಳಾಗುವ ಸಂದರ್ಭಗಳಿರುತ್ತವೆ, ಚಾನಲ್‌ನೊಳಗೆ ದೋಣಿಗಳು ಅಥವಾ ಶಿಪ್‌ಗಳು ಬರುವಾಗ ಕಂಟ್ರೋಲ್ ಮಾಡುವ ಸಮಿತಿ ಅದರಲ್ಲಿ ಜನಪ್ರತಿನಿಧಿಗಳು ಇರಲೇ ಬೇಕಾಗುತ್ತದೆ, ಅದನ್ನು ಸರ್ಕಾರ ನಿರ್ಲಕ್ಷ್ಯ ಮಾಡಿದೆ ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಬಂದರಿನಲ್ಲಿರುವ ಇನ್ನೊಂದು ಸಮಸ್ಯೆ ಎಂದರೆ, ಮೀನುಗಾರಿಕಾ ಬೋಟ್‌ಗಳ ಪಾರ್ಕಿಂಗ್ ಬಗ್ಗೆಯಾಗಿದೆ ಇವತ್ತು ಸುಮಾರು 600–650 ಮೀನುಗಾರಿಕಾ ಬೋಟ್‌ಗಳು ನಮ್ಮ ಕ್ಷೇತ್ರದಲ್ಲಿ ಬರುವಂತಹ ಮಲ್ಪೆ ಬಂದರಿನಲ್ಲೇ ಇದೆ. ಅಲ್ಲಿ ಪಾರ್ಕಿಂಗ್‌ಗೆ ಎಷ್ಟು ವ್ಯವಸ್ಥೆ ಇದೆ ಎಂದರೆ, ಸರಿಯಾಗಿ ಪಾರ್ಕಿಂಗ್ ಮಾಡಿದರೆ ಕೇವಲ 150 ರಿಂದ 200 ಬೋಟ್‌ಗಳನ್ನು ಮಾತ್ರ ಪಾರ್ಕಿಂಗ್ ಮಾಡುವ ವ್ಯವಸ್ಥೆ ಇದೆ. ಆದರೆ ಇವತ್ತು ಅಸ್ತವ್ಯಸ್ತವಾಗಿದೆ ಕಳೆದ ನಾಲ್ಕೈದು ವರ್ಷದ ಹಿಂದೆ ದೊಡ್ಡ ಅವಘಡವಾಗಿತ್ತು. ಒಂದು ಬೋಟಿಗೆ ಬೆಂಕಿ ಬಿದ್ದು, ಸುಮಾರು ಬೋಟುಗಳು ಹೋದವು. ಕೇಂದ್ರ ಸರ್ಕಾರ ಆ ಸಂದರ್ಭದಲ್ಲಿ ಒಂದು ಕೋಟಿ ರೂಪಾಯಿ ಪರಿಹಾರವನ್ನೂ ಕೊಟ್ಟಿತ್ತು. ನಾನು ಇವತ್ತು ಸರ್ಕಾರವನ್ನು ಏನು ಒತ್ತಾಯ ಮಾಡುತ್ತಿದ್ದೇನೆ ಅಂದರೆ ಬಂದರು ಇಲಾಖೆಯಲ್ಲಿ ಖಾಲಿ ಜಾಗ ಇವತ್ತಿದೆ, ಅದನ್ನು ಖಾಸಗಿ ವ್ಯಕ್ತಿಗಳಿಗೆ ಬೇರೆಬೇರೆಯದಕ್ಕೆ ಲೀಸ್‌ಗೆ ಕೊಡುತ್ತಿದ್ದಾರೆ ಆದರೆ ಅಲ್ಲಿ ಮೀನುಗಾರಿಕೆ ಬೋಟುಗಳಿಗೆ ಪಾರ್ಕಿಂಗ್ ಮಾಡುವ ವ್ಯವಸ್ಥೆ ಮಾಡಿಕೊಡುತ್ತಿಲ್ಲ. ಆದ್ದರಿಂದ ಬಂದರು ಇಲಾಖೆಯಲ್ಲಿರುವ ಖಾಲಿ ಜಾಗ ಇಂತಹ ಮೀನುಗಾರಿಕಾ ಬೋಟುಗಳ ಪಾರ್ಕಿಂಗ್‌ಗಾಗಿ ಕಾದಿರಿಸಬೇಕೆಂದು

ಒತ್ತಾಯಮಾಡುತ್ತಿದ್ದೇನೆ. ಇನ್ನೊಂದು ಮತ್ಸಾಶ್ರಯ ಯೋಜನೆ. ಮೀನುಗಾರರಿಗಾಗಿರುವ ಈ ಯೋಜನೆಯಲ್ಲಿ ಕಳೆದ ವರ್ಷ ಮಂಜೂರಾದಷ್ಟು ಪೂರ್ತಿ ಹಣ ಇವತ್ತು ಬರಲಿಲ್ಲ. ಇನ್ನೂ ಹಲವಾರು ಬೇಡಿಕೆಗಳ ಪಟ್ಟಿ ಇದೆ ನಮ್ಮಲ್ಲಿ, ಮತ್ಸಾಶ್ರಯದಡಿ ಮನೆ ಬೇಕು ಎಂದು ಸಲ್ಲಿಸಿದವರ ಪಟ್ಟಿ ಇದೆ ಅದನ್ನು ಇನ್ನೂ ಬಿಡುಗಡೆ ಮಾಡಲಿಲ್ಲ. ಕೇವಲ ಭರವಸೆಗಳಲ್ಲಿದೆ ವಿನಾ ಮತ್ಸಾಶ್ರಯ ಯೋಜನೆ ಅನುಷ್ಠಾನಕ್ಕೆ ಬರುತ್ತಾ ಇಲ್ಲ. ಜೊತೆಗೆ ಅದರ ಅನುಷ್ಠಾನದಲ್ಲಿರುವ ತೊಂದರೆ ಅಂದರೆ, ಮತ್ಸಾಶ್ರಯ ಎಂದರೆ ಸರ್ಕಾರದಿಂದ ಬರುವ ಅನುದಾನ, ಮೀನುಗಾರರು ಅದನ್ನು ವಾಪಸ್ ಕಟ್ಟಬೇಕಿಲ್ಲ. ಅದಕ್ಕೂ ಆರ್‌ಟಿಸಿ ಬೇಕು ಅಂತ ಕಾನೂನನ್ನು ಮೀನುಗಾರಿಕಾ ಇಲಾಖೆಯವರು ವಿಧಿಸುತ್ತಿದ್ದಾರೆ. ಸಮುದ್ರ ತೀರದಲ್ಲಿರುವ ಎಷ್ಟೋ ಮೀನುಗಾರರ ಬಳಿ ಆರ್‌ಟಿಸಿ ಇಲ್ಲ, ಸರ್ವೆ ನಂಬರು ಮನೆ ನಂಬರು ಬೇರೆಲ್ಲ ಇದೆ. ಆರ್‌ಟಿಸಿಯಲ್ಲಿ ಏನಿದೆ ಅಂದರೆ ಸಮುದ್ರ ಅಂತಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಸದಸ್ಯರು ಹೇಳುತ್ತಿರುವುದು ಅದು ಕರೆಕ್ಟ್. ಹಿಂದೆ ನಾವಿದ್ದಾಗ ಆರ್‌ಟಿಸಿ ಬೇಡ ಅಂತ ಮಾಡಿದ್ದೆವು. ಕಾರಣ ಅದು ನೂರಕ್ಕೆ ನೂರು ಸಬ್ಸಿಡಿ, ವಾಪಸ್ ಕಟ್ಟಲಿಕ್ಕಿಲ್ಲ. ವಾಪಸ್ ಕಟ್ಟುವುದಾದರೆ ಅದನ್ನು ಸರ್ಕಾರಕ್ಕೆ ರಿಜಿಸ್ಟರ್ ಮಾಡಿಕೊಡಬೇಕಾಗುತ್ತದೆ. 100 ಪರ್ಸೆಂಟ್ ಸಬ್ಸಿಡಿ ಇರುವುದರಿಂದ ಆರ್‌ಟಿಸಿ ಏಕೆ ಕೇಳಬೇಕು?

ಶ್ರೀ ಕೆ. ರಘುಪತಿ ಭಟ್: ಆರ್‌ಟಿಸಿ ನಿಬಂಧನೆ ವಾಪಸ್ ತೆಗೆದುಕೊಂಡು ಸಾಲ ಕೊಡುವಂತಹ ವ್ಯವಸ್ಥೆ ಮಾಡಬೇಕು. ಇನ್ನೊಂದು ಮೀನುಗಾರರದ್ದು ಬಹಳ ರಿಸ್ಕಿ ಜಾಬ್; ಅಪಾಯದಲ್ಲೇ ಅವರು ಜೀವನ ನಡೆಸುವವರು, ಪ್ರತಿ ವರ್ಷ ಮಳೆಗಾಲದಲ್ಲಿ ಮೀನುಗಾರರಿಗೆ ಯಾವುದಾದರೂ ಅವಘಡ ನಡೆಯುತ್ತಿರುತ್ತವೆ, ಹೋದ ಮೀನುಗಾರರು ವಾಪಸ್ ಬರುವುದಿಲ್ಲ ಅಥವಾ ದೋಣಿ ದುರಂತವಾಯಿತು ಹೀಗೆ. ಇವತ್ತು ಸರ್ಕಾರದಿಂದ ಅವರಿಗೆ 50 ಸಾವಿರ ರೂ. ಮಾತ್ರ ಪರಿಹಾರ ಸಿಗುತ್ತಿದೆ. ಬಹಳ ವರ್ಷಗಳಿಂದ ನಮ್ಮ ಜನಪ್ರತಿನಿಧಿಗಳು ಒತ್ತಾಯಪಡಿಸುತ್ತಿರುವುದು; ಕನಿಷ್ಠ 2 ಲಕ್ಷ ರೂ. ಪರಿಹಾರವನ್ನು ಅವಘಡವಾದ ಸಂದರ್ಭದಲ್ಲಿ ಮೀನುಗಾರರಿಗೆ ಪರಿಹಾರ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಮೀನುಗಾರರಿಗೆ ಸೇಫ್ಟಿಬೆಲ್ಟ್ಸ್ ಮತ್ತಿತರ ಬೇಕಾದ ಉಪಕರಣಗಳನ್ನು ಸಬ್ಸಿಡಿ ರೇಟಿನಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮಲ್ಲಿ ನಾಡದೋಣಿ ಮೀನುಗಾರರು ಅಂತ ಇದ್ದಾರೆ, ಯಾಂತ್ರೀಕೃತ ದೋಣಿಗಳು ಬರುವ ಹಿಂದಿನಿಂದ ಪರಂಪರಾಗತವಾಗಿ ಸಹಕಾರಿ ವ್ಯವಸ್ಥೆಯಡಿ. ನಡೆಸಿಕೊಂಡು ಬಂದವರು. ಇವತ್ತು ಸಹಕಾರ ವ್ಯವಸ್ಥೆ ನೂರು ವರ್ಷದ ಆಚರಣೆ ಮಾಡುತ್ತಿದ್ದರೆ ಅದಕ್ಕಿಂತ ಎಷ್ಟೋ ಹಿಂದಿನಿಂದಲೂ ನಾಡದೋಣಿಯವರು ಸಹಕಾರ ವ್ಯವಸ್ಥೆಯಡಿ ಇದನ್ನು ನಡೆಸಿಕೊಂಡು ಬರುತ್ತಿದ್ದರು. ಬಡ ಮೀನುಗಾರರ ಉದ್ದಿಮೆ ಅದು. ಅದಕ್ಕೆ ಕಳೆದ ವರ್ಷದವರೆಗೂ 90 ಲೀಟರ್ ವರೆಗೂ ಸಬ್ಸಿಡಿ ಕೊಡುತ್ತಿದ್ದರು, ಮೊನ್ನೆ ಸಭೆ ನಡೆಸಿದ ನಂತರ 200 ಲೀಟರ್ ಕೊಡುತ್ತೇವೆ ಅಂತ ಭರವಸೆ ಕೊಟ್ಟಿದ್ದಾರೆ. ಅದು ಇನ್ನೂ ಅನುಷ್ಠಾನವಾಗಿಲ್ಲ. ನಮ್ಮ ಬೇಡಿಕೆ ಏನೆಂದರೆ ಇದು ಮುಖ್ಯಮಂತ್ರಿಗಳ ಖಾತೆಯಾದ್ದರಿಂದ ಸರ್ಕಾರ ಇವತ್ತು ಸರ್ಕಾರ ಉತ್ತರ ಕೊಡುವಾಗ ನಾಡದೋಣಿ ಮೀನುಗಾರರಿಗೆ ಕನಿಷ್ಠ 400 ಲೀಟರ್ ಸಬ್ಸಿಡಿ ದರದಲ್ಲಿ ಸೀಮೆಯೆಣ್ಣೆಯನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಬೇಡಿಕೆ ಮಾಡುತ್ತಿದ್ದೇನೆ. ಏಕೆಂದರೆ ನಮಲ್ಲಿ ಯಾಂತ್ರೀಕೃತ ದೋಣಿಯಲ್ಲಿ ಕೆಲಸಕ್ಕೆ ಹೋಗುವ ಬಹಳ ಮಂದಿ ಮಳೆಗಾಲದ ಮೂರು ತಿಂಗಳು ನಾಡದೋಣಿ ನಡೆಸುವ ಕೆಲಸ

ಮಾಡುತ್ತಿದ್ದಾರೆ. ಮೊನ್ನೆ ತಾನೇ ಅವರಿಗೆ ಔಟ್‌ಬೋರ್ಡಿಗೆ 25 ಎಚ್‌ಪಿ ಹಾಕಲಿಕ್ಕೆ ಸಮ್ಮತಿ ಕೊಟ್ಟಿದ್ದಾರೆ. ಅದು ಸ್ವಾಗತಾರ್ಹ. ಇನ್ನು ಮೀನುಗಾರಿಕಾ ದೋಣಿ ಡಿಸೇಲ್ ಮೇಲೆ ಸಬ್ಸಿಡಿಯನ್ನು 50 ಸಾವಿರದಿಂದ 55 ಸಾವಿರ ಕಿಲೋ ಲೀಟರ್‌ಗೆ ಹೋದವರ್ಷ ಮಾಡಿದ್ದಾರೆ, ಅದು ಸಾಕಾಗುವುದಿಲ್ಲ. ನಮ್ಮ ಮೀನುಗಾರರಿಗೆ ಕನಿಷ್ಠ 75 ಸಾವಿರ ಕಿಲೋ ಲೀಟರ್ ಸಬ್ಸಿಡಿ ಡೀಸೆಲ್ ಕೊಟ್ಟರೆ ಮಾತ್ರ ಅವರ ಬೋಟ್ ನಡೆಸಲು ಸಾಧ್ಯವಿದೆ. ಈ ವರ್ಷದ ಬಜೆಟ್‌ನಲ್ಲಿ 75 ಸಾವಿರ ಕಿಲೋ ಲೀಟರ್‌ಗೆ ಡೀಸೆಲ್ ಸಬ್ಸಿಡಿ ಕೊಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಸಾಲದ ಬಡ್ಡಿ ಮನ್ನಾ. ಇವತ್ತು ನಮ್ಮ ರಾಜ್ಯದಲ್ಲಿ ರೈತರೆಲ್ಲರಿಗೆ ಸಾಲದ ಬಡ್ಡಿ ಮನ್ನಾ ವ್ಯವಸ್ಥೆ ಸಿಗುತ್ತಾ ಇದೆ. ಮೀನುಗಾರರಿಗೂ ಈ ಸಾಲದ ಮೇಲಿನ ಬಡ್ಡಿ ಮನ್ನಾ ವ್ಯವಸ್ಥೆ ಮಾಡಬೇಕೆಂದು ಕರಾವಳಿ ಭಾಗದ ಶಾಸಕರೆಲ್ಲರೂ ಇವತ್ತು ಮಾಡುತ್ತಾ ಇದ್ದಾರೆ. ಅದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು ಅಂತ ವಿನಂತಿ ಮಾಡುತ್ತೇನೆ. ಏಕೆಂದರೆ ಕೇಂದ್ರದ ಮಟ್ಟಿಗೆ ಕೃಷಿಯಲ್ಲೇ ಮೀನುಗಾರಿಕೆಯೂ ಇದೆ. ಮೀನುಗಾರರೂ ಬಹಳ ಸಂಕಷ್ಟದಲ್ಲಿ ಇದ್ದಾರೆ ಸುನಾಮಿ ಬಂದನಂತರ ಎಷ್ಟೋ ಜನ ಮೀನು ತಿನ್ನುವುದನ್ನೇ ಬಿಟ್ಟಿದ್ದರು, ಮೀನುಗಾರರ ಮಹಿಳೆಯರು ಮಾರ್ಕೆಟಿಗೆ ಒಯ್ದ ಮೀನನ್ನು ರಾತ್ರಿ ವಾಪಸ್ ತರುವಂತಹ ಪರಿಸ್ಥಿತಿಯಲ್ಲಿ ಅವರು ಬಹಳ ಆರ್ಥಿಕ ಸಂಕಟದಲ್ಲಿದ್ದಾರೆ. ಸಹಕಾರಿ ವ್ಯವಸ್ಥೆಯಡಿ ಅಂಥವರು ಸಾಲ ತೆಗೆದುಕೊಂಡಿದ್ದಕ್ಕೆ ಅವರಿಗೂ ಬಡ್ಡಿ ಮನ್ನಾ ವ್ಯವಸ್ಥೆ ವಿಸ್ತರಿಸಬೇಕು ಅಂತ ಒತ್ತಾಯ ಮಾಡುತ್ತಿದ್ದೇನೆ. ಇನ್ನು ನಮ್ಮಲ್ಲಿ ಮೀನುಗಾರಿಕೆಗೆ ಸಂಬಂಧಿಸಿ ಐಸ್ ಫ್ಯಾಕ್ಟರಿಗಳಿವೆ. ಅದರ ಮೇಲೆ 4 ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಿದ್ದಾರೆ ಇವತ್ತು, ಅದನ್ನು ರದ್ದುಪಡಿಸಬೇಕೆಂಬ ಬೇಡಿಕೆ ಬಹಳ ಸಮಯದಿಂದ ಅವರು ಮಾಡುತ್ತಿದ್ದಾರೆ. ಏಕೆಂದರೆ ಲಾಭವಿಲ್ಲದೆ ಎಷ್ಟೋ ಘಟಕಗಳು ಇವತ್ತು ಮುಚ್ಚುತ್ತಿವೆ ಅವನ್ನು ಉಳಿಸಿಕೊಳ್ಳಬೇಕು ಎಂದರೆ ಇದನ್ನು ಕನಿಷ್ಠ ಮಾಡಬೇಕು. ಅವರಿಗೆ ವಿದ್ಯುತ್ ದರವನ್ನು ಯೂನಿಟ್‌ಗೆ ಒಮದು ರೂಪಾಯಿ ಮಾಡಬೇಕು ಎಂಬ ಬೇಡಿಕೆ ಮಾಡುತ್ತಿದ್ದೇವೆ. ಏಕೆಂದರೆ ತೋಟಗಾರಿಕಾ ಇಲಾಖೆಯಲ್ಲಿ ಶೀತಲೀಕರಣ ಘಟಕಕ್ಕೆ ಯೂನಿಟ್‌ಗೆ ಒಂದು ರೂಪಾಯಿನಂತೆ ಇವತ್ತು ವಿದ್ಯುತ್ ಕೊಡಲಾಗುತ್ತಿದೆ. ಅದೇ ರೀತಿ ಮೀನುಗಾರಿಕೆಯ ಐಸ್ ಫ್ಯಾಕ್ಟರಿಗಳಿಗೂ ಒಂದು ರೂಪಾಯಿದರದಲ್ಲಿ ವಿದ್ಯುತ್ ಕೊಡಬೇಕೆಂಬ ಬೇಡಿಕೆ ಇಡುತ್ತಿದ್ದೇವೆ. ಇನ್ನು ನಮ್ಮ ದೊಡ್ಡ ಸಮಸ್ಯೆ ಎಂದರೆ ಮೀನುಗಾರಿಕಾ ರಸ್ತೆಗಳು. ಕರಾವಳಿಯ ಎಲ್ಲಾ ಕ್ಷೇತ್ರಗಳಲ್ಲೂ ಮೀನುಗಾರಿಕಾ ರಸ್ತೆಗಳಿವೆ, ಬಜೆಟ್‌ನಲ್ಲಿ ಮೀನುಗಾರಿಕಾ ಇಲಾಖೆಗೆ ಹಣವಿಲ್ಲ, ಬೇರೆ ರೀತಿ ಮಾಡೋಣ ಅಂದರೆ ಈ ವರ್ಷ ನಮಗೆ ಶಾಸಕರ ನಿಧಿ ಅಂತ ಕೊಟ್ಟಿದ್ದಾರೆ. ಬೇರೆ ಯಾವ ವ್ಯವಸ್ಥೆಯೂ, ಪಿಡಬ್ಲ್ಯುಡಿ ಜಿಲ್ಲಾಪಂಚಾಯ್ತಿ ಮತ್ತು ನಗರಸಭೆಗಳವರ್ಯಾರೂ ಈ ಕೆಲಸ ಮಾಡುವುದಿಲ್ಲ. ಮೀನುಗಾರಿಕಾ ಇಲಾಖೆಯೇ ಮಾಡಬೇಕಾಗುತ್ತದೆ. ಆದ್ದರಿಂದ ನಮ್ಮೆಲ್ಲರ ಬೇಡಿಕೆ ಏನಿದೆ ಅಂದರೆ ಮೀನುಗಾರಿಕಾ ಇಲಾಖೆ ರಸ್ತೆಗಳನ್ನು ಪಿಡಬ್ಲ್ಯುಡಿಗೆ ಹಸ್ತಾಂತರಿಸಿ. ಸರ್ಕಾರ ಜಿಲ್ಲಾಪಂಚಾಯ್ತಿಗೆ ಹಸ್ತಾಂತರಿಸಬೇಕು ಎಂಬ ಪ್ರಸ್ತಾವನೆ ಮಾಡುತ್ತಿದೆ, ಯಾವುದೇ ಕಾರಣಕ್ಕೂ ಅದು ಮಾಡಬಾರದು ಯಾಕೆಂದರೆ ನಗರಪ್ರದೇಶಗಳಲ್ಲೇ ಇಂತಹ ರಸ್ತೆಗಳು ಜಾಸ್ತಿ ಇವೆ, ಅವುಗಳ ರಿಪೇರಿಗೆ ಜಿಲ್ಲಾಪಂಚಾಯ್ತಿಯವರು ಯಾವುದೇ ಕಾರಣಕ್ಕೂ ಹೋಗುವುದಿಲ್ಲ ಯಾಕೆಂದರೆ ಅವರಿಗೆ ವೋಟಿಲ್ಲ, ಅವರಿಗೆ ಎಲ್ಲಿ ವೋಟಿದೆಯೋ ಅಲ್ಲಿ ಮಾತ್ರ ರಿಪೇರಿ ಮಾಡುತ್ತಾರೆ. ಈ ಪರಿಸ್ಥಿತಿ ನಾವು ನೋಡುತ್ತಿದ್ದೇವೆ. ಆದ್ದರಿಂದ ಪಿಡಬ್ಲ್ಯುಡಿಗೆ ಹಸ್ತಾಂತರಿಸಿ ಒನ್‌ಟೈಂ ಅದನ್ನು ರಿಪೇರಿ ಮಾಡಲು ಬೇಕಾದ ಹಣದ

ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಒಟ್ಟಾರೆಯಾಗಿ ಇವತ್ತು ಮೀನುಗಾರಿಕಾ ಇಲಾಖೆಗೆ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಮಾಡಬೇಕಾಗಿದೆ. ಪ್ರಥಮವಾಗಿ ನಮಗೆ ಒಬ್ಬರು ಮೀನುಗಾರಿಕೆ ಸಚಿವರನ್ನು ಕೊಡಿ. ಯಾಕೆಂದರೆ ಪ್ರತಿಯೊಂದಕ್ಕೂ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದು ನಮಗೆ ಕಷ್ಟವಾಗುತ್ತಿದೆ.

ಅರಣ್ಯ ಸಚಿವರು ಇಲ್ಲೇ ಇದ್ದಾರೆ. ಒಂದು ವಿಚಿತ್ರವಾದ ಸಮಸ್ಯೆ ನಮ್ಮಲಿದೆ. ಹಿಂದೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಕಂದಾಯ ಇಲಾಖೆಯಡಿ ಇದ್ದ 400–500 ಮನೆಗಳಿಗೆ ಆಶ್ರಯ ಯೋಜನೆಯಡಿ ಹಕ್ಕುಪತ್ರ ಅಂತ ಕೊಟ್ಟರು. ಅವರೆಲ್ಲಾ ಮನೆ ಕಟ್ಟಿ ಕೊಂಡಿದ್ದಾರೆ. ವಿಶೇಷವಾಗಿ ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಎಂಬತ್ತು ಬಡುವಪೆಟ್ಟು ಮತ್ತು ಅಲೆಯೂರು ಪಂಚಾಯ್ತಿ, ಅದರ ನಂತರ ಏನಾಯ್ತು ಅಂದರೆ ಆರ್‌ಟಿಸಿ ಎಲ್ಲಾ ಆಗಿತ್ತು ಅದರ ನಂತರ ಸರ್ಕಾರ ಅದೆಲ್ಲ ಅರಣ್ಯ ಇಲಾಖೆ ಜಾಗ ಅಂತ ಹೇಳಿ ಅವರೆಲ್ಲರ ಆರ್‌ಟಿಸಿ ಕ್ಯಾನ್ಸಲ್ ಮಾಡಿ ಅವರೆಲ್ಲ ಮನೆ ಕಟ್ಟಿಕೊಂಡಿದ್ದರೂ ಅವರಿಗೆ ಹಕ್ಕುಪತ್ರ ಇಲ್ಲದಂತಹ ಸಮಸ್ಯೆಯಾಗಿದೆ. ಇನ್ನೂ ಕೆಲವು ಬಡವರು ಅಕ್ರಮವಾಗಿ 5 ಸೆಂಟ್ಸ್‌ನಲ್ಲಿ ಮನೆಕಟ್ಟಿಕೊಂಡು ಕೂತಿದ್ದಾರೆ. ನಮ್ಮಲ್ಲಿ ಯಾವುದೇ ಅರಣ್ಯಬೆಳೆಯುವ ಪ್ರದೇಶವಿಲ್ಲ, ಅರಣ್ಯ ಅಂತ ಮಧ್ಯಮ ಪ್ರದೇಶ ಮಾಡಿದ್ದರೆ, ಜಿಲ್ಲಾಧಿಕಾರಿಗಳು ಒಂದು ಪ್ರಸ್ತಾವನೆ ಕಳುಹಿಸಿದ್ದಾರೆ. ಫಾರೆಸ್ಟ್ ಲ್ಯಾಂಡ್ ನಮ್ಮದು ಅಂತ ಹೇಳುತ್ತಿರುವುದಕ್ಕೆ ಬದಲಿಯಾಗಿ ರೆವಿನ್ಯೂಲ್ಯಾಂಡನ್ನು ಐದು ಎಕರೆಯಷ್ಟು ಜಾಗವನ್ನು ನಾವು ಕೊಡುತ್ತೇವೆ ಅಂತ. ಅಂದರೆ ರೆವಿನ್ಯೂಲ್ಯಾಂಡನ್ನು ಫಾರೆಸ್ಟ್‌ನವರು ತೆಗೆದುಕೊಂಡು ಫಾರೆಸ್ಟ್‌ನವರು ಇದನ್ನು ಬಿಟ್ಟುಕೊಡುವಂತಹ ವ್ಯವಸ್ಥೆ ಮಾಡಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಮತ್ತು ಪರಿಸರ ಖಾತೆ ಸಚಿವರು): ಅದು ಯಾವ ಫಾರೆಸ್ಟ್? ರಿಸರ್ವ್ ಫಾರೆಸ್ಟ್? ಮಾಡಲು ಬಂದರೆ ಪರಿಶೀಲನೆ ಮಾಡಿ ಮಾಡೋಣ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಅಧ್ಯಕ್ಷರೆ ಇನ್ನು ಅರಣ್ಯ ಅಧಿಕಾರಿಗಳಿಂದ ಸುತ್ತೋಲೆಗಳು ಈಚೆಗೆ ಬರುತ್ತಿವೆ. ನಮ್ಮ ಜಿಲ್ಲೆಯಲ್ಲಿ ಸ್ವಿಚ್‌ಬೋರ್ಡ್ ಫ್ಯಾಕ್ಟರಿಗಳಿವೆ, ಬಂದರಿನೊಳಗೆ ಮೀನುಗಾರಿಕಾ ಬೋಟ್‌ಗಳನ್ನು ರಿಪೇರಿ ಮಾಡುವಂತಹ ಸಣ್ಣಮಟ್ಟದ ಕೈಗಾರಿಕೆಗಳು. ಅಲ್ಲಿ ಅವರು ಸಾಯಿಂಗ್‌ಮಿಷನ್ ಹಾಕಿಕೊಂಡಿದ್ದಾರೆ. ಹಿಂದೆ ಅವರು ಅರಣ್ಯ ಇಲಾಖೆಗೆ ನಮಗೆ ಪರ್ಮಿಶನ್ ಕೊಡಿ ಅಂತ ಬರೆದಿದ್ದಾರೆ. ಈಗ ಏಕಾಏಕಿ ಎರಡು ಮೂರು ತಿಂಗಳಿಂದ ಅವರ ಮೆಶಿನ್‌ಗಳನ್ನು ಅರಣ್ಯ ಅಧಿಕಾರಿಗಳು ಕಿತ್ತೊಯ್ಯುತ್ತಿದ್ದಾರೆ. ಅವರೆಲ್ಲಾ ಬಡವರು, ಫಸ್ಟ್ ಸಾಯಿಂಗ್ ಅಲ್ಲ; ಅದು ಸೆಕೆಂಡ್ ಸಾಯಿಂಗ್; ಸಾಮಿಲ್‌ನಿಂದ ಮರ ತಂದು ಅದರ ವೇಸ್ಟ್‌ಮರದಿಂದ ಸ್ವಿಚ್‌ಬೋರ್ಡ್ ಮಾಡುವ ವಿಶೇಷ ಘಟಕಗಳು. ಜೊತೆಗೆ ಮೀನುಗಾರಿಕಾ ನೋಣಗಳನ್ನು ರಿಪೇರಿ ಮಾಡುವ ಘಟಕಗಳೂ ಇವೆ. ಇದಕ್ಕೆ ಅರಣ್ಯಾಧಿಕಾರಿಗಳು ಸಾಯಿಂಗ್‌ಲೈಸೆನ್ಸ್ ಆಗಬೇಕು ಎಂಬ ಕಾನೂನನ್ನು ಮಾಡುತ್ತಿದ್ದಾರೆ. ದಯವಿಟ್ಟು ಅರಣ್ಯ ಸಚಿವರ ಬಳಿ ನನ್ನ ವಿನಂತಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೊಸದಾಗಿ ಯಾವ ಸಾಮಿಲ್‌ಗಳನ್ನೂ ನಾವು ಕೊಡುವುದಿಲ್ಲ. ಸುಪ್ರೀಂಕೋರ್ಟ್ ಆದೇಶವಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಸುಪ್ರೀಂಕೋರ್ಟ್ ಆರ್ಡರನ್ನು ಮಿಸ್ ಇಂಟರ್‌ಪ್ರಿಟ್ ಮಾಡುತ್ತಿದ್ದಾರೆ. ರೀಸಾಯಿಂಗ್ ಇದು, ಸಾಯಿಂಗ್ ಅಲ್ಲ, ಅದನ್ನು ಕಾರ್ಪೆಂಟರ್ಸ್; ಯೂಸ್ ಮಾಡುತ್ತಾರೆ ಸ್ವಿಚ್‌ಬೋರ್ಡ್‌ಗೆ ಯೂಸ್ ಮಾಡುತ್ತಾರೆ ಬೋಟ್ ರಿಪೇರಿಗೆ ಬಳಸುತ್ತಾರೆ. ಇದು ರೀಸಾಯಿಂಗ್.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದು ರೀಸಾಯಿಂಗ್; ನೋಡೋಣ ರಿಪೋರ್ಟ್ ತರಿಸಿಕೊಂಡು ನಾನು ನೋಡುತ್ತೇನೆ.

ಶ್ರೀ ಕೆ. ರಘುಪತಿ ಭಟ್: ನಾನು ತಮ್ಮ ಗಮನ ಸೆಳೆಯುವುದೇನೆಂದರೆ ಎಷ್ಟೋ ಜನ ನಿರುದ್ಯೋಗಿಗಳಿಗೆ ಅದರಿಂದ ಕೆಲಸ ಸಿಕ್ಕಿದೆ. ಸಣ್ಣ ಕೈಗಾರಿಕೆಗಳಂತೆ ನಡೆದಿವೆ, ವೇಸ್ಟ್‌ಮರದಿಂದ ಸ್ವಿಚ್‌ಬೋರ್ಡ್ ಮಾಡುತ್ತಿರುವುದು, ಅವರಿಗೆ ನಿಮ್ಮ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ದಯವಿಟ್ಟು ತಾವು ಇವತ್ತೇ ಅದರ ಬಗ್ಗೆ ಗಮನಹರಿಸಿ, ನಮ್ಮ ಬಹಳಷ್ಟು ಜನ ಯುವಕರು ಆ ಉದ್ದಿಮೆಯಲ್ಲಿದ್ದಾರೆ ಸಾಮಿಲ್ ಕಾನೂನನ್ನು ಕಡಿಮೆ ಮಾಡಿ ಅಂತ ನಾವು ಹೇಳುವುದಿಲ್ಲ, ಮಾಡಿ, ಆದರೆ ಇದು ಸೆಕೆಂಡ್‌ಸಾಯಿಂಗ್, ಫಸ್ಟ್ ಸಾಯಿಂಗ್‌ನ್ನು ಸಾಮಿಲ್‌ನಲ್ಲಿ ಮಾಡಿರುತ್ತಾರೆ. ಅದರ ಬಗ್ಗೆ ಆದೇಶ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು, ಗ್ರಾಮೀಣಾಭಿವೃದ್ಧಿ ಇಲಾಖೆಯ ರಸ್ತೆಗಳ ಬಗ್ಗೆ. ಇವತ್ತೇನಾಗುತ್ತಿದೆ ಅಂದರೆ, ಅಧಿಕಾರಿಗಳು ಡಾ: ನಂಜುಂಡಪ್ಪ ವರದಿ ಅಂತ ಇಟ್ಟುಕೊಂಡು ನಮ್ಮಂತಹ ಜಿಲ್ಲೆಗಳಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಮುಖ್ಯಮಂತ್ರಿ ಗ್ರಾಮೀಣ ಸಡಕ್ ಯೋಜನೆ ಅಂತ, ರಸ್ತೆಗಳನ್ನು ರಿಪೇರಿ ಮಾಡಲು ಅನುದಾನ ಬರುತ್ತಾ ಇದೆ. ನಮ್ಮ ಕ್ಷೇತ್ರಗಳಿಗೆ 6 ಲಕ್ಷ 7 ಲಕ್ಷ ರೂಪಾಯಿ ಎಲ್ಲಿಂದ ಸಾಕಾಗುತ್ತದೆ? ನಮ್ಮದು ಕರಾವಳಿ, ಮಳೆ ಜಾಸ್ತಿ ಬರುವುದು ಎಲ್ಲಾ ರಸ್ತೆಗಳು ಹೋಗುತ್ತವೆ, ಜಿಲ್ಲಾ ಪಂಚಾಯ್ತಿಯನ್ನು ಕೇಳಿದರೆ ಅವರ ಹತ್ತಿರ ಅನುದಾನವಿಲ್ಲ. ಸರ್ಕಾರವನ್ನು ಕೇಳಿದರೆ ಡಾ: ನಂಜುಂಡಪ್ಪ ವರದಿ ಅಂತ ಹೇಳಿ, ಒಂದೊಂದು ಕ್ಷೇತ್ರಕ್ಕೆ 7 ಲಕ್ಷ ರೂಪಾಯಿ ಕೊಟ್ಟರೆ ರಸ್ತೆ ಮೇಂಟನೆನ್ ಹೇಗೆ ಆಗುತ್ತದೆ? ಹಿಂದುಳಿದ ಜಿಲ್ಲೆ ತಾಲ್ಲೂಕುಗಳನ್ನು ಅಭಿವೃದ್ಧಿ ಮಾಡಬೇಕು, ಅದಕ್ಕೆ ಸಹಮತವಿದೆ, ಆದರೆ ಹೊಸ ರಸ್ತೆಗಳನ್ನು ಕೊಡುವಾಗ ನಬಾರ್ಡ್ ಯೋಜನೆಗಳನ್ನು ಕೊಡುವಾಗ ನೀವು ಮಾಡಿ. ಮುಖ್ಯಮಂತ್ರಿ ಗ್ರಾಮಸಡಕ್ ಯೋಜನೆ ಮೇಂಟನೆನ್ಸ್‌ಗೆ ಕೊಡುವಂತಹ ಗ್ರಾಂಟ್, ಅದರಲ್ಲಿ ನೀವು ಈ ತರಹ ಮಾಡಿದರೆ ನಮ್ಮಂತಹ ಜಿಲ್ಲೆಗಳಿಗೆ, ಜಾಸ್ತಿ ಮಳೆ ಬೀಳುವ ಕಡೆ, ನಮಗೆ ಇವತ್ತು ಶಾಸಕರಾಗಿ ರಸ್ತೆಯಲ್ಲಿ ಹೋಗುವಾಗ ಮುಖ ಎತ್ತಿಕೊಂಡು ಹೋಗಲಾಗುತ್ತಿಲ್ಲ, ಜನ ನಮ್ಮನ್ನು ನೋಡಿ ಕೈತೋರಿಸುತ್ತಾರೆ ಇದು ರಸ್ತೆನಾ ಗುಂಡಿ ಅಂತ. ಆದ್ದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲಿಕ್ಕೆ ವಿಶೇಷ ಅನುದಾನ ಏನಾದರೂ ಕೊಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಸ್ವಜಲಧಾರಾ ಯೋಜನೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗೆ ಸ್ವಜಲಧಾರಾ ಯೋಜನೆಗೆ 10 ಪರ್ಸೆಂಟ್ ಪಂಚಾಯ್ತಿಯಲ್ಲಿ ಸಿಕ್ಕಿದವರ ಹತ್ತಿರ ಕೇಳಿಕೊಂಡು ಒಂದು ಸಾವಿರ ಎರಡು ಸಾವಿರ, ಕೆಲವರು ಚಿನ್ನ ಅಡವಿಟ್ಟು ಹಣ ಕೊಟ್ಟಿದ್ದಾರೆ. ಎರಡು ವರ್ಷವಾಯಿತು, 9 ಲಕ್ಷದವರೆಗೂ ಪಂಚಾಯ್ತಿಯವರು ಕಟ್ಟಿದ್ದಾರೆ. ನಾವು ಸರ್ಕಾರದಲ್ಲಿ ಕೇಳಿದರೆ, ಕೇಂದ್ರ ಸರ್ಕಾರದಿಂದ ಹಣ ಬರಲಿಲ್ಲ ಎನ್ನುತ್ತಾರೆ. ಹಣ ಬರಲಿಲ್ಲ ಅಂದರೆ ನೀವು ಲಿಮಿಟ್ ಹಾಕಿಕೊಳ್ಳಬೇಕಾಗಿತ್ತು ಇಷ್ಟು ಮಾತ್ರ ನಾವು ಕೊಡುತ್ತೇವೆ ಅಂತ. ಬೇಕಾದಷ್ಟು ಕೊಡುತ್ತೇವೆ ಅಂತ ಕಾರ್ಯಕ್ರಮ ಹಾಕಿಕೊಂಡರು. ಎಲ್ಲರೂ 9 ಲಕ್ಷದವರೆಗೆ ಕಟ್ಟಿದ್ದಾರೆ. ಬೇರೆ ಬೇರೆ ಪಂಚಾಯ್ತಿಗಳು. ಆದರೆ ಹಣ ಇವತ್ತು ಬಿಡುಗಡೆ ಮಾಡುತ್ತಿಲ್ಲ. ಪಂಚಾಯ್ತಿಯವರಿಗೆ ಜನಪ್ರತಿನಿಧಿಗಳು ಹೋದಲ್ಲಿ ಜನ ಜೋರುಮಾಡಲು ಶುರುಮಾಡಿದ್ದಾರೆ ನೀವು ಒಂದೊಂದು ಎರಡು ಸಾವಿರ ತೆಗೆದುಕೊಂಡು ಹಣ ಕಟ್ಟಿಸಿದ್ದೀರಿ ನೀರಿನ ಯೋಜನೆ ಯಾಕೆ ಬರಲಿಲ್ಲ ಅಂತ. ನಾನು ಇವತ್ತು ಹೇಳುವುದು ಕೇಂದ್ರದಲ್ಲಿ ಪ್ರಭಾವ ಬೀರಿ ಸ್ವಜಲಧಾರಾ ಯೋಜನೆಗೆ ಹಣ ಪಡೆಯಬೇಕು

ಇಲ್ಲವೆಂದರೆ ರಾಜ್ಯಸರ್ಕಾರವೇ ಒನ್‌ಟೈಂ ಕಾರ್ಯಕ್ರಮ ಅದಕ್ಕೆ ಎಷ್ಟು ಆಗುತ್ತದೆ ಅಂತ ನೋಡಿಕೊಂಡು ಒಂದು ವ್ಯವಸ್ಥೆ ಮಾಡಬೇಕು ಅಂತ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಕಂದಾಯ ಇಲಾಖೆ ಬಗ್ಗೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಅರ್ಜಿ 94ಸಿ ಯಲ್ಲಿ ಹಲವಾರು ಬಡವರು ಅರ್ಜಿ ಹಾಕಿ 50 ರೂಪಾಯಿ ಕಟ್ಟಿದ್ದಾರೆ ಆದರೆ ಅವರಿಗೆ ಇನ್ನೂ ಅದು ಪರಿಹಾರ ಸಿಕ್ಕಿಲ್ಲ. ಆರ್ಡರ್ ಆಯಿತು ಎನ್ನುತ್ತಿದ್ದಾರೆ, ಅದನ್ನು ಕಡಿಮೆ ಮಾಡಬೇಕು. ಇನ್ನೊಂದು 94ಸಿ ಅರ್ಜಿ ಅವಧಿಯನ್ನು ಇನ್ನೊಮ್ಮೆ ಅವರಿಗೆ ಅವಕಾಶ ಕೊಡಬೇಕು. ಈಗ ಎಲ್ಲರೂ ಮನೆ ಕಟ್ಟಿಕೊಂಡಿದ್ದಾರೆ, ಅವರಿಗೂ ಅವಕಾಶ ಮಾಡಿಕೊಡಬೇಕು. ಕೊನೆಯದಾಗಿ ಕಂದಾಯ ಇಲಾಖೆ ಬಗ್ಗೆ, ಮಾನ್ಯ ಕಂದಾಯ ಸಚಿವರಿಲ್ಲ, ಚಾಮರಾಜನಗರದ ಬಗ್ಗೆ ಹೇಳುವಾಗ ಹೇಳಿದರು, ಎಲ್ಲಾ ಜಿಲ್ಲಾಧಿಕಾರಿ ಸಂಕೀರ್ಣಕ್ಕೆ ಹಣ ಕೊಡಲಾಗಿದೆ ಅಂತ, ನಮ್ಮ ಜಿಲ್ಲೆಗೂ ಸ್ಯಾಂಕ್ಷನ್ ಆಗಿದೆ ಎಂದಿದ್ದಾರೆ. ಉಡುಪಿ ಜಿಲ್ಲೆಯಾಗಿ 8 ವರ್ಷವಾಯಿತು. ಇನ್ನೂ ಜಿಲ್ಲಾಧಿಕಾರಿ ಸಂಕೀರ್ಣ ರಚನೆಯಾಗಲಿಲ್ಲ. ಕೇವಲ ರಾಜಕೀಯ ಕಾರಣಗಳಿಂದ ಪುನಃ ಪೋಸ್ಟ್‌ಫೋನ್ ಆಗುವ ಕೆಲಸವಾಗಿದೆ. ಏನು ಅಂದರೆ ಜಾಗ ನಿಗದಿ ಆಗಿಲ್ಲ ಅನ್ನುತ್ತಾರೆ. ನಮ್ಮ ಮಣಿಪಾಲದಲ್ಲಿ 32 ಎಕರೆ ಸರ್ಕಾರದ ಜಾಗ, ಖಾಸಗಿ ಅಲ್ಲ, ನಿಗದಿಮಾಡುವುದು ಕಂದಾಯ ಸಚಿವರು ಎಲ್ಲಾ ಮನಸ್ಸು ಮಾಡಿ ಮಾಡಿದರು. ಎಲ್ಲಾ ಆಗಿ ಅದಕ್ಕೊಂದು 5 ಲಕ್ಷ ರೂಪಾಯಿ ಕೊಟ್ಟು ಕೆಲಸ ಪ್ರಾರಂಭ ಮಾಡುವಂತೆ ಮಾಡಿದರು ಹಿಂದೆಯೆಲ್ಲಾ ರಾಜಕೀಯ ಕಾರಣಕ್ಕೋಸ್ಕರ ಅದು 6 ಕಿಲೋ ಮೀಟರ್ ದೂರವಿದೆ 9 ಕಿಲೋ ಮೀಟರ್ ದೂರವಿದೆ ಅಂತ ಸುಳ್ಳು ಹೇಳಿಕೊಂಡು ಅಲ್ಲಿ ಬೇಡ, ಉಡುಪಿಯಲ್ಲಿ ಮಾಡುತ್ತೇವೆ ಅಂತ ಮಾಡಿ ಅಲ್ಲೂ ಆಗದಂತೆ ಮಾಡಿದರು. ಈಗ ಮಾಹೆ ಸಂಸ್ಥೆ. ಎಂಬುವರು ಪುನಃ ಹೈಕೋರ್ಟ್‌ಗೆ ಹೋಗಿದ್ದಾರೆ. 15 ಎಕರೆಯಲ್ಲಿ ಜಿಲ್ಲಾಧಿಕಾರಿ ಸಂಕೀರ್ಣಕ್ಕೆ ನಾವು ಒಪ್ಪುತ್ತೇವೆ ಅಂತ ಆದೇಶಕ್ಕೆ ಒಪ್ಪಿಕೊಂಡಿದ್ದರೂ ಆ ಆರ್ಡರ್ ಮೇಲೆ ಪುನಃ ಹೈಕೋರ್ಟ್‌ಗೆ ಹೋಗಿದ್ದಾರೆ. ಸರ್ಕಾರಕ್ಕೆ ನಾನು ಕೇಳುವುದು ಅಂದರೆ, ಸಂಸ್ಥೆಗಳನ್ನು ಸರ್ಕಾರ ನಿಯಂತ್ರಣ ಮಾಡಬೇಕಾ ಅಥವಾ ಸಂಸ್ಥೆಯೇ ಸರ್ಕಾರವನ್ನು ನಿಯಂತ್ರಣ ಮಾಡಬೇಕಾ ಅಂತ. ಸರ್ಕಾರದ ಜಿಲ್ಲಾಧಿಕಾರಿ ಸಂಕೀರ್ಣದಂತಹ ಯೋಜನೆಗೆ ಯಾವುದೋ ಸಂಸ್ಥೆ ಹೈಕೋರ್ಟಿಗೆ ಹೋಗುತ್ತದೆ ಅಂದರೆ ಆ ಸಂಸ್ಥೆಯನ್ನು ನಿಯಂತ್ರಣ ಮಾಡುವಷ್ಟು ತಾಕತ್ ಸರ್ಕಾರಕ್ಕಿಲ್ಲವಾ ಅಂತ ಕೇಳುವುದು. ಸರ್ಕಾರ ಅವರಿಗೆ ಸವಲತ್ತು ನಿಲ್ಲಿಸಬೇಕಾಗುತ್ತದೆ. ನೀವು ಜಿಲ್ಲಾಧಿಕಾರಿ ಸಂಕೀರ್ಣ ನಮಗೆ ಬಿಟ್ಟುಕೊಡಲಿಲ್ಲ ಅಂದರೆ ಸರ್ಕಾರದಿಂದ ಯಾವುದೇ ಸವಲತ್ತು ಕೊಡುವುದಿಲ್ಲವೆಂಬ ಕಟ್ಟುನಿಟ್ಟಿನ ಕೆಲಸ ಮಾಡಬೇಕಾಗುತ್ತದೆ. ಇವತ್ತು ಒಂದು ಖಾಸಗಿ ಸಂಸ್ಥೆ ಸರ್ಕಾರವನ್ನು ನಿಯಂತ್ರಿಸುವ ಕೆಲಸ ಮಾಡುತ್ತಿದೆ.

ಶ್ರೀ ಟಿ. ನಾಗರಾಜಶೆಟ್ಟಿ: ನಮ್ಮ ಬಂಟ್ವಾಳ ಬಸ್ ಸ್ಟಾಂಡ್ ಕೆಲಸಕ್ಕೂ ಸ್ಟೇ ತಂದಿದ್ದಾರೆ: ಈ ರೀತಿ ಆದರೆ ಹೇಗೆ ಕೆಲಸ ಆಗುವುದು?

ಶ್ರೀ ಕೆ. ರಘುಪತಿ ಭಟ್: ಅದಕ್ಕೇ ನಾನು ಹೇಳುವುದು, ಯಾವುದೇ ಅಧಿಕಾರಿಗಳನ್ನು ಕೇಳಿದರೆ ಕನಿಷ್ಠ 10 ಎಕರೆ 15 ಎಕರೆ ಇಲ್ಲದೆ ಜಿಲ್ಲಾಧಿಕಾರಿ ಸಂಕೀರ್ಣ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಉಡುಪಿಯಲ್ಲಿ ಮೂರುನಾಲ್ಕು ಎಕರೆಗಿಂತ ಕಡಿಮೆ ಸಿಗುವುದಿಲ್ಲ. ಆದ್ದರಿಂದ ಎಲ್ಲಾದರೂ ಸರಿ ತಕ್ಷಣ ನಮಗೆ ಜಿಲ್ಲಾಧಿಕಾರಿ ಸಂಕೀರ್ಣ ಪ್ರಾರಂಭವಾಗಬೇಕು. ಮಣಿಪಾಲದ ಮಾಹೆ ಸಂಸ್ಥೆ ತಡೆ ಹಾಕಿದ್ದರೆ ಅವರ ಮೇಲೆ ಒತ್ತಡ ತರಬೇಕು, ಸರ್ಕಾರಕ್ಕೆ ಎಲ್ಲಾ ಸಾಧ್ಯವಿದೆ; ಇಚ್ಛಾಶಕ್ತಿ ಪ್ರದರ್ಶಿಸಿ ಪ್ರಾರಂಭ ಮಾಡಬೇಕು ಅಂತ ವಿನಂತಿ ಮಾಡಿಕೊಂಡು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ ಈಗ 8ಕ್ಕೆ ಮುಗಿಸಿರಿ, ನಾಳೆ ಬೆಳಿಗ್ಗೆ 9ಕ್ಕೆ ಬರುತ್ತೇವೆ, ಈಗ ಮಾತನಾಡುವವರೆಲ್ಲಾ ಬರಲಿ. ಬೆಳಿಗ್ಗೆ 10 ಗಂಟೆಗೆ ಬದಲಾಗಿ 9 ಗಂಟೆಗೆ ಶುರು ಮಾಡಿ ಇಷ್ಟು ಹೊತ್ತಿನಲ್ಲಿ ಏಕೆ ಮಾತನಾಡುತ್ತೀರಿ ಯಾರೂ ಇರುವುದಿಲ್ಲ, ನಾಳೆ ಮಾತನಾಡಿದರೆ ಪೇಪರ್‌ನಲ್ಲಿ ಅದು ಬರಲಿ ಹೆಣ್ಣು ಮಕ್ಕಳಿಗೆ ರಾತ್ರಿ ಕೊಡುತ್ತೀರಾ ಅಂತ ಮೊನ್ನೆ ಅವರು ತಕರಾರು ಮಾಡಿದ್ದಾರೆ.

ಶ್ರೀ ಡಿ.ಎನ್. ಜೀವರಾಜ್: ಹೆಣ್ಣುಮಕ್ಕಳಿಗೆ ದಯಮಾಡಿ ಬೆಳಿಗ್ಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಜೆಂಡಾ ಹೋಗಿಯಾಯ್ತು ನಾಳೆ ಬೆಳಿಗ್ಗೆ 10 ಗಂಟೆಗೆ ಅಂತ, ನಾಳೆ ಬೆಳಿಗ್ಗೆ 9 ಗಂಟೆಗೆ ಮಾಡಲು ಆಗುವುದಿಲ್ಲ.

ಛೇರ್ಮನ್: ನಾಳೆ ಬೆಳಿಗ್ಗೆ ರಿಪ್ಲೈ ಇದೆ, ಇವತ್ತೇ ಎಲ್ಲಾ ಮುಗಿಯಬೇಕು.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ(ಪುತ್ತೂರು): ಮಾನ್ಯ ಅಧ್ಯಕ್ಷರೆ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಾಕ್ಕಾಗಿ ಕೃತಜ್ಞತೆಗಳು. ನಾನು ಪ್ರಮುಖವಾಗಿ ಮಹಿಳಾ ಮಕ್ಕಳ ಕಲ್ಯಾಣದ ಬಗ್ಗೆ ಮಾತನಾಡುತ್ತೇನೆ. ಮಹಿಳಾ ಕಲ್ಯಾಣ ಅನ್ನುವುದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಈ ರಾಷ್ಟ್ರ ಮಾತೃದೇವೋಭವ ಅಂತ ಮಹಿಳೆಯರಿಗೆ ಗೌರವ ಕೊಟ್ಟಿತ್ತು, "ಯತ್ರ ನಾರೇಷು ಪೂಜ್ಯಂತೆ ರಮಂತೇ ತತ್ರ ದೇವತಾ," ಅಂತ ಪ್ರತಿಯೊಬ್ಬರೂ ಹಾಡಿ ಹೊಗಳುತ್ತಿದ್ದರು. ಆದರೆ ಇವತ್ತು ಎಲ್ಲಿ ನೋಡಿದರೂ ಹೆಣ್ಣುಮಕ್ಕಳ ಸ್ಥಿತಿ ಗರ್ಭದಲ್ಲಿದ್ದಾಗಲೇ ಅದನ್ನು ಹಿಚುಕುವ ಪ್ರಯತ್ನ ನಡೀತಾ ಇದೆ. ಎತ್ತಿಮುದ್ದಾಡುವ 6 ವರ್ಷದ 8 ವರ್ಷದ ಪ್ರಾಯದ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೀತಾ ಇದೆ. ಆಮೇಲೆ ಅಪ್ರಾಪ್ತ ಹುಡುಗಿಯರಿಗೆ ಮದುವೆ ನಡೀತಾ ಇದೆ. ಎಲ್ಲೂ ಕಾನೂನು ಪ್ರಯೋಗ ಆಗುತ್ತಾ ಇಲ್ಲ. ಮಾನ್ಯ ರಾಜೇಂದ್ರನ್ ಹೇಳಿದಂತೆ ಒಂದೆರಡು ದಿವಸಕ್ಕೆ ಜೈಲಿಗೆ ಹೋಗುತ್ತಾರೆ ವಾಪಸು ಬರುತ್ತಾರೆ. ಮೊನ್ನೆ ನಮ್ಮ ಸಮಿತಿಯಿಂದ ಜೈಲಿಗೆ ಭೇಟಿ ಕೊಟ್ಟಿದ್ದೆವು, ಅಲ್ಲೊಂದು ಪ್ರಕರಣ, ಬಹುಶಃ ಯಾರಾದರೂ ಕಣ್ಣೀರಿಡುವಂತಹ ಪರಿಸ್ಥಿತಿ. 14, 15 ವರ್ಷದ ಒಂದು ಹುಡುಗಿ ತಾಯಿಯೊಂದಿಗೆ ಜೈಲಿನಲ್ಲಿದ್ದಾಳೆ. ಕೇಳಿದರೆ ಹೇಳುತ್ತಾರೆ, ನನ್ನ ಮೇಲೆ ನನ್ನ ತಂದೇನೇ ಅತ್ಯಾಚಾರ ಮಾಡಿದ, ನಾನು ಆಗ ಕಿರಿಚಿದೆ, ತಾಯಿ ಬಂದು ಬಿಡಸಲಿಕ್ಕೆ ನೋಡಿದಾಗ ಆಗಲಿಲ್ಲ ಆಗ ತಾಯಿನೇ ಹೊಡೆದಳು ತಂದೆ ಸತ್ತುಹೋದ, ಜೈಲಿನಲ್ಲಿ ನಾನು ಕೊಳೆಯುತ್ತಿದ್ದೇನೆ ಅಂತ. ನಾನು ಕಿರಿಚಾಡಿದ್ದು ತಪ್ಪಾ ಅಥವಾ ಅತ್ಯಾಚಾರಕ್ಕೆ ಒಪ್ಪದ್ದು ತಪ್ಪಾ ಆ ಹುಡುಗಿ ಕೇಳಿದಾಗ ನಮಗೆ ಕಾನೂನು ಎಲ್ಲಿದೆ? ಕಾನೂನಿನ ರಕ್ಷಣೆ ಸ್ತ್ರೀಯರಿಗೆ ಎಲ್ಲಿದೆ ಅಂತ ಕೇಳುತ್ತಿದ್ದೇನೆ. ಏಕೆಂದರೆ ಆ ಹುಡುಗಿ ಯಾವ ತಪ್ಪೂ ಮಾಡದೆ, ನನಗೆ ಪಿಯುಸಿ ಓದಬೇಕು ಅಂತ ಆಸೆ ಇತ್ತು, ಎಸ್‌ಎಸ್‌ಎಲ್‌ಸಿ ಪಾಸಾಗಬೇಕು ಅಂತ ಆಸೆ ಇತ್ತು, ನನ್ನ ಇಡೀ ಜೀವನ ಜೈಲಿನಲ್ಲಾಯಿತು ನನಗೆ ಜಾಮೀನು ಸಿಗುತ್ತಿಲ್ಲ ಅಂತ ಆ ಹುಡುಗಿ ವ್ಯಥೆಪಡುತ್ತಾಳೆ ಅಂದರೆ, ನಮ್ಮ ಮಹಿಳಾ ಕಲ್ಯಾಣದಿಂದ ಏನು ಮಾಡಲಿಕ್ಕೆ ಆಯಿತು? ಮೊನ್ನೆ ತಾನೆ ಪತ್ರಿಕೆಯಲ್ಲಿ ಬಂದಿತ್ತು. ಅಮೇರಿಕ ಸಂಯುಕ್ತ ರಾಷ್ಟ್ರದ ಒಂದು ಪತ್ರಿಕೆ ಬರೆದಿದೆ. ಮಾನವ ಮಾರಾಟದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ನಡೆಯುವುದು ಕರ್ನಾಟಕ ರಾಜ್ಯದಲ್ಲಿ ಎಂದು. ನಾವು ವ್ಯಥೆ ಪಡುವಂಥ ವಿಚಾರಗಳು. ನಮ್ಮ ಹೆಣ್ಣುಮಕ್ಕಳ ಬಗ್ಗೆ ಮೊನ್ನೆ ಒಂದು ಪ್ರಶ್ನೆ ಕೇಳಿದ್ದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2004ರಿಂದೀಚೆಗೆ ಎಷ್ಟು ಹೆಣ್ಣುಮಕ್ಕಳು ನಾಪತ್ತೆಯಾಗಿವೆ ಎಂದು. 107 ಹೆಣ್ಣುಮಕ್ಕಳು ನಾಪತ್ತೆಯಾಗಿದ್ದಾರೆಂದು ಪೊಲೀಸ್...

ಬಂದಿದೆ. ಆದರೆ, ನಮ್ಮ ಲೆಕ್ಕ ಅದಕ್ಕಿಂತಲೂ ಹೆಚ್ಚು ಇರಬಹುದು. ಈ ಹೆಣ್ಣುಮಕ್ಕಳು ಎಲ್ಲಿಗೆ ಹೋಗುತ್ತಾರೆ? ನಮ್ಮ ಹೆಣ್ಣುಮಕ್ಕಳನ್ನು ಯಾವುದೋ ಮೋಸದ ಬಲೆಗೆ ಬೀಳಿಸಿ, ಅವರನ್ನು ವೇಶ್ಯಾವಾಟಿಕೆಗೆ ಅಥವಾ ನಕ್ಸಲೈಟ್, ಇನ್ನಾವುದೋ ವಿಚಾರಕ್ಕೆ ಅವರನ್ನು ಉಪಯೋಗ ಮಾಡುತ್ತಾರೆನ್ನುವ ಸಂಶಯ ನನ್ನಲ್ಲಿದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಪ್ರಥಮವಾಗಿ ನಮಗೆ ರಕ್ಷಣೆ ಕೊಡಿ. ಅಂಥ ಕಾನೂನು ತಯಾರು ಮಾಡಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಗ್ಗೆ ನನಗನ್ನಿಸುತ್ತಿದೆ. ನಾವು ಯಾವಾಗ 33 ಪರ್ಸೆಂಟ್ ಬೇಕೆಂದು ಕೇಳುತ್ತಿರುತ್ತೇವೋ, ಹಾಗೆ ಮಹಿಳೆಯೊಬ್ಬರಿಗೆ ಯವುದೋ ಒಂದು ಮಂತ್ರಿಯಾಗಿ ಕೂರಿಸಬೇಕೆಂದು ಹೇಳುವ ಒಂದು ಕಾರಣದಿಂದ ಈ ಇಲಾಖೆಯನ್ನು ಮಾಡಿದ್ದಾರೆ. ಕೇವಲ ಮಹಿಳೆಯರ ಕಲ್ಯಾಣಕ್ಕೆ ಅಲ್ಲ. ಮಹಿಳೆಯರ ಜವಾಬ್ದಾರಿಗೆ ಒಂದು ಮಂತ್ರಿಯ ಸ್ಥಾನ ಕೊಡಬೇಕೆಂದು ಆ ಸ್ಥಾನವನ್ನು ಕೊಟ್ಟಿದ್ದಾರೆ. ಅದಕ್ಕೆ ಹಣ ಕೇವಲ 33 ಕೋಟಿ ರೂಪಾಯಿಗಳು ಮಾತ್ರ. ನಾವು ಯಾವತ್ತೂ ಮಾತನಾಡುವಾಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಎಂದರೆ, ಅಂಗನವಾಡಿಗೆ ಮುಗಿದೇ ಹೋಯಿತು. ಸುಮಾರು ವರ್ಷಗಳಿಂದ ಅಂಗನವಾಡಿ ನಡೆಯುತ್ತಿದೆ. ಯಾವತ್ತು ಪ್ರಾರಂಭದಲ್ಲಿ ರಾಜ್ಯ ಸರ್ಕಾರ ಕಾರ್ಯಕರ್ತೆಗೆ 450 ರೂಪಾಯಿ ಮತ್ತು ಸಹಾಯಕಿಯರಿಗೆ 225 ರೂಪಾಯಿಗಳನ್ನು ಕೊಡುತ್ತಿತ್ತೋ, ಇವತ್ತಿಗೂ ಅದನ್ನೇ ಕೊಡುತ್ತಾ ಇದೆ. ಸಂಬಳ ಹೆಚ್ಚು ಮಾಡಲಿಲ್ಲ. ಕೇಂದ್ರ ಸರ್ಕಾರ ಸೇರಿಸಿದ ಹಣದಲ್ಲಿ ಒಂದು ಸಾವಿರ ಚಿಲ್ಲರೆ ಹಣ ಅವರಿಗೆ ಬರುತ್ತಿದೆ. ನಾನು ಸರ್ಕಾರವನ್ನು ಕೇಳುವುದೇನೆಂದರೆ, ಒಬ್ಬ ಹೆಣ್ಣು ಮಗಳು ಅಂಗನವಾಡಿಗೆ ಬಸ್ಸಿನಲ್ಲಿ ಬಂದು ಬಸ್ಸಿನಲ್ಲಿ ವಾಪಸ್ಸು ಹೋಗುವಾಗ ಅವಳಿಗೆ ಉಳಿಯುವುದೆಷ್ಟು? ಅದೂ ಕೂಡ ಆ ಹುಡುಗಿಯರನ್ನು ಇದ್ದ ಎಲ್ಲಾ ಕೆಲಸಗಳಿಗೆ ಕುರಿ, ನಾಯಿ, ದನ, ಎತ್ತು, ಯಾವುದಿದೆಯೋ, ಎಲ್ಲಾ ಲೆಕ್ಕಕ್ಕೂ ಅವರನ್ನೇ ಬಳಸುತ್ತಿದ್ದಾರೆ. ಎಲ್ಲದಕ್ಕೂ ಅದೇ ಅಂಗನವಾಡಿ ಹುಡುಗಿಯರು ಬೇಕು. ಏನು ಮಾತನಾಡಿದರೂ ಅಂಗನವಾಡಿ ಕಾರ್ಯಕರ್ತೆಯರು ಇದ್ದಾರೆ. ಅವರನ್ನು ಯಾಕಾಗಿ ಇಟ್ಟಿದ್ದಾರೆ? ಮಕ್ಕಳಿಗೋಸ್ಕರ ಅವರಿಗೆ ತಾಯಿ ಸ್ಥಾನ ಕೊಟ್ಟು ಮಕ್ಕಳನ್ನು ಪೋಷಿಸಬೇಕೆಂದು ಕೊಟ್ಟಿದ್ದಾರೆ. ಈಗ ನಾನು ಪ್ರಥಮವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿರುವುದೇನೆಂದರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುವ ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳ ಹೆಚ್ಚಿಸಲು ಅನುದಾನ ಇಡಿ. ಎರಡನೆಯದಾಗಿ, ಸ್ತ್ರೀಶಕ್ತಿ ಗುಂಪುಗಳಿಗೆ ಸ್ತ್ರೀಶಕ್ತಿ ಗುಂಪುಗಳು ಅವರೇ ದುಡಿದ ಹಣವನ್ನು ತೆಗೆದಿಟ್ಟು ಅದರಲ್ಲಿ ಸಾಲ ಪಡೆದು ಜೀವನ ಮಾಡುತ್ತಿದ್ದಾರೆ. ಕೇವಲ ಐದು ಸಾವಿರ ರೂಪಾಯಿಗಳ ಸುತ್ತು ನಿಧಿಯನ್ನು ಸರ್ಕಾರ ಕೊಡುತ್ತಿದೆ. ಇನ್ನೊಂದು ವಿಷಯವೇನೆಂದರೆ, ಮಾರುಕಟ್ಟೆಗೆ ಅವರಿಗೆ ನಾವು ಟ್ರೈನಿಂಗ್ ಕೊಡುತ್ತಿದ್ದೇವೆಂದು ಸರ್ಕಾರ ಹೇಳುತ್ತಿದೆ. ಹೈನುಗಾರಿಕೆ, ಸಿದ್ಧ ಉಡುಪು, ಕಂಬಳಿ ವ್ಯಾಪಾರ, ಬೀಜ, ಗೊಬ್ಬರ, ಹಪ್ಪಳ, ಸಾಂಬಾರು ಪುಡಿ, ಅಗರಬತ್ತಿ ಇತ್ಯಾದಿ . . . ನಾಚಿಕೆಯಾಗುತ್ತಿದೆ. ಸ್ವಾಮಿ, ನಾವು ಐವತ್ತು ಸಾವಿರ ವರ್ಷಗಳಿಂದಲ್ಲೂ ಉಪ್ಪಿನಕಾಯಿ ಹಾಕುತ್ತಿದ್ದೇವೆ. ನಮ್ಮ ಹುಡುಗಿಯವರಿಗೆ ಯಾವತ್ತೂ ಕೂಡ ಹಪ್ಪಳ, ಸಂಡಿಗೆ ಮಾಡಲು ಟ್ರೈನಿಂಗ್ ಅಗತ್ಯವಿಲ್ಲ. ಅದರಲ್ಲಿ ಇವೊತ್ತು ಸರ್ಕಾರದಿಂದ ನಾವು ಟ್ರೈನಿಂಗ್ ಪಡೆದುಕೊಂಡು, ಹೆಣ್ಣುಮಕ್ಕಳನ್ನು ಒಂದು ತರಹ ನೀವು ಶೋಷಣೆ ಮಾಡುತ್ತಿದ್ದೀರೆಂದು ನನಗೆ ಕಾಣುತ್ತಿದೆ. ಹಪ್ಪಳ, ಸಂಡಿಗೆಯನ್ನು ಎಲ್ಲಾ ಮನೆಯವರೂ ಮಾಡುತ್ತಿದ್ದಾರೆ. ಅದಕ್ಕೆ ಮಾರುಕಟ್ಟೆ ಸಿಗುವುದಕ್ಕೆ ಸಾಧ್ಯವೇ? ಇನ್ನು ಕಂಬಳಿ ಮಾರಾಟ.

ನನಗೆ ನಮ್ಮ ಕುಕ್ಕೆ ಸುಬ್ರಹ್ಮಣ್ಯದ್ದು ನೆನಪಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಕಂಬಳಿ ಎಂದು ಹೇಳಿದರೆ ಡಿಸೆಂಬರ್ ತಿಂಗಳಿನಲ್ಲಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಬೇಕೆಂದು ಎಲ್ಲರೂ ಹೇಳುತ್ತಿದ್ದರು. ಈಗ ಮಳೆಯೂ ಇಲ್ಲ, ಚಳಿಯೂ ಇಲ್ಲ. ಈ ಕಂಬಳಿಯನ್ನು ಈ ಹುಡುಗಿಯರು ಎಲ್ಲಿ ಮಾರುಕಟ್ಟೆ ಮಾಡಬೇಕು? ಕಂಬಳಿ ಮಾರಾಟ ಮಾಡುತ್ತಿದ್ದಾರೆಂದು ಹೇಳಬೇಕಿದ್ದರೆ, ಇಂತಹ ತರಬೇತಿ ಕೊಡುವ ಬದಲು ನಮ್ಮ ದಕ್ಷಿಣ ಕನ್ನಡದಲ್ಲಿ ಬಂದು ನೋಡಿ. ಗೋಡಂಬಿ ಕಾರ್ಖಾನೆಗಳಿವೆ, 400–500 ಹೆಣ್ಣುಮಕ್ಕಳು ದುಡಿಯುತ್ತಿದ್ದಾರೆ. ಬೀಡಿ ಉದ್ಯಮ ಇದೆ. ಮೂರು–ಮೂರೂವರೆ ಲಕ್ಷದಷ್ಟು ಹುಡುಗಿಯರು ಅದರಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಮಾರ್ಬಲ್ಸ್ ಇದೆ. ಅದರಲ್ಲಿ ಸಾವಿರಾರು ಹೆಣ್ಣು ಮಕ್ಕಳು, ಸಾಧಾರಣವಾಗಿ 50 ಸಾವಿರದಷ್ಟು ಹೆಣ್ಣು ಮಕ್ಕಳು ಅದರಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಒಟ್ಟಾಗಿ 10–50 ಗುಂಪುಗಳು ಸೇರಿ ಯಾವುದೋ ಒಂದು ಸ್ಮಾಲ್ ಇಂಡಸ್ಟ್ರೀಸ್ ಮಾಡಿಕೊಂಡು ಕೆಲಸ ಮಾಡುವಂಥ ತರಬೇತಿ ಕೊಡಬೇಕೇ, ವಿನಾ ಹಪ್ಪಳ, ಸಂಡಿಗೆ ನಮಗೆ ಅಗತ್ಯವಿಲ್ಲವೆಂಬುದು ನನ್ನ ಅನಿಸಿಕೆ. ಅಂಥಾದ್ದನ್ನು ಸರ್ಕಾರ ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಹೆಣ್ಣು ಮಕ್ಕಳು ಏನೇನೋ ತಯಾರು ಮಾಡುತ್ತಿದ್ದಾರೆ. ಈಗಿನ ಲೆಕ್ಕದಲ್ಲಿ ಅದೇ ಇರೋದು. ಹಪ್ಪಳ, ಸಂಡಿಗೆ, ಸಾಂಬಾರು ಪುಡಿ, ಇನ್ನು ಏನೇನೂ ಮಾಡುತ್ತಿದ್ದಾರೆ. ನಮ್ಮ ಜನ್ಮದಲ್ಲಿ ನನಗೆ ಒಮ್ಮೊಮ್ಮೆ ಕಾಣುತ್ತದೆ. ಯಾವ ಪಾಪಕ್ಕೆ ನಾವು ಹೆಣ್ಣಾಗಿ ಹುಟ್ಟಿದೆವಪ್ಪಾ ಎಂದು ಇವೊತ್ತಿಗೂ ಕೂಡ ಶೌಚಾಲಯದ ವಿಷಯಕ್ಕೆ ಬಂದರೆ, ಎಲ್ಲರಿಗೂ ಕಾಣುವುದು ಹೆಣ್ಣು ಮಕ್ಕಳ ಶೌಚಾಲಯ. ಅಡುಗೆ ಮನೆ ಹೆಣ್ಣು ಮಕ್ಕಳಿಗೆ. ನಳ ಅಡಿಗೆ ಮಾಡಿದ್ದ, ಭೀಮ ಅಡುಗೆ ಮಾಡಿದ್ದ. ಯಾಕೆ ನೆನಪಾಗುತ್ತಿಲ್ಲ? ಹೆಣ್ಣು ಮಕ್ಕಳು ಅಡುಗೆ ಮನೆಯಲ್ಲಿ ಕಷ್ಟಪಡುತ್ತಾರೆ. ಅಡುಗೆ ಭಟ್ಟರಾಗಿ ಕೆಲಸ ಮಾಡುವುದು ಗಂಡಸರೇ. ಅವರ ಬಗ್ಗೆ ಮಾತನಾಡುವುದಿಲ್ಲ. ಯಾವುದೇ ಶೋಷಣೆಗೆ ಗುರಿಯಾಗುವವರು ಹೆಣ್ಣು ಮಕ್ಕಳೇ ಆಗಿದ್ದಾರೆ. ಅಂತಹ ಹೆಣ್ಣು ಮಕ್ಕಳನ್ನು ಉದ್ಧಾರ ಮಾಡಬೇಕಿದ್ದರೆ, ಅವರಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡಬೇಕಾಗಿದೆ. ಮಳಿಗೆಗಳ ಸ್ಥಾಪನೆಯಾಗಬೇಕಾಗಿದೆ. ಅಂತಹ ವ್ಯವಸ್ಥೆಯನ್ನು ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸರ್ಕಾರದ ವತಿಯಿಂದ ಒದಗಿಸಿಕೊಡುವುದಕ್ಕೆ ಹಣ ಕಾದಿರಿಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಅವರ ಮಾರುಕಟ್ಟೆಗೆ ಏನಾದರೂ ಪ್ರಯೋಜನವಾಗಬಹುದು ಅಂತ ನನ್ನ ಅನಿಸಿಕೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡದಲ್ಲಿ ಸ್ವಯಂ ಸೇವಾ ಸಂಸ್ಥೆಗಳಲ್ಲೂ ಸಹ ಸ್ವಸಹಾಯ ಗುಂಪುಗಳನ್ನು ಮಾಡುತ್ತಿದ್ದಾರೆ. ಬಹುಶಃ ಉತ್ತರ ಕನ್ನಡದಲ್ಲಿರಬೇಕು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಸ್ವಸಹಾಯ ಸಂಘದಿಂದ ಬಹಳ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಬೇರೆ ಬೇರೆ ರೀತಿಯ ಉತ್ಪನ್ನಗಳನ್ನು ಮಾಡಿ, ಅದಕ್ಕೆ 'ಸಿರಿ' ಅಂತ ಹೆಸರಿಟ್ಟು ಮಾರುಕಟ್ಟೆ ಮಾಡುತ್ತಿದ್ದಾರೆ. ಅಷ್ಟು ಮಾತ್ರವಲ್ಲ. ಮಹಿಳೆಯರನ್ನು ಮಾತ್ರವಲ್ಲ, ಸೋಮಾರಿಗಳ ಹಾಗೆ ತಿರುಗಾಡುತ್ತಿದ್ದ ಯುವಕರನ್ನು, ಗಂಡಸರನ್ನು ಒಂದು ಮಾಡಿ, ಅವರಿಗೆ 'ಪ್ರಗತಿ ಬಂಧು' ಅಂತ ಒಬ್ಬರಿಗೆ ಒಂದು ಗುಂಪು ಮಾಡಿ, ಒಂದು ವಾರದಲ್ಲಿ, ಒಂದು ದಿನ ಎಲ್ಲರೂ ಒಂದು ಮನೆಯಲ್ಲಿ ಸೇರಿ ದುಡಿಯುವ ರೀತಿಯಲ್ಲಿ ಕಲಿಸಿಕೊಟ್ಟು, ಎಲ್ಲರನ್ನೂ ಕೃಷಿಯಲ್ಲಿ, ದುಡಿಮೆಯಲ್ಲಿ ತೊಡಗಿಸಿ, ಅವರಿಂದಲೂ ಈ ಸ್ತ್ರೀಶಕ್ತಿ ಹಾಗೆಯೇ ಹಣ ಸಂಗ್ರಹ ಮಾಡುವಂಥ ಯೋಜನೆ ಮಾಡಿದ್ದಾರೆ. ಅಷ್ಟು ಮಾತ್ರವಲ್ಲ, ಇನ್ನೂ ಉತ್ತಮ ವಿಚಾರವೆಂದರೆ, ಮದ್ಯ ವರ್ಜನ ಶಿಬಿರ. ಯುವಕ–ಯುವತಿಯರನ್ನು ಸೇರಿಸಿ ಅವರಿಗೆ ಮದ್ಯ ವರ್ಜನದ ಬಗ್ಗೆ

ವಿವಿಧ ರೀತಿಯ ತರಬೇತಿ ಕೊಟ್ಟು, ಶಿಬಿರ ನಡೆಸಿ, ಅವರುಗಳು ಮದ್ಯಪಾನ ವರ್ಜನ ಶಿಬಿರದಲ್ಲಿ ಭಾಗವಹಿಸಿ, ಮದ್ಯಪಾನದ ವಿರುದ್ಧವಾಗಿ, ಆ ವ್ಯಸನವನ್ನು ಹೋಗಲಾಡಿಸುವಂಥ ಪ್ರಯತ್ನವನ್ನು ಇವೊತ್ತು ಸಾಮಾಜಿಕ ಸಂಸ್ಥೆ ಮಾಡುತ್ತಿರುವಾಗ, ಸರ್ಕಾರ ಬಹುಶಃ ಎಲ್ಲಾ ಕಡೆಗಳಲ್ಲೂ ಗಡಂಗುಗಳನ್ನು ಇಟ್ಟುಕೊಂಡು ನಮ್ಮ ಯುವಕರನ್ನು ಹಾಳು ಮಾಡುತ್ತಿರುವಂಥ ಸ್ಥಿತಿ ಬಹಳ ದುರಂತ ಎಂಬುದು ನನ್ನ ಅನಿಸಿಕೆ. ಇದೇ ಸ್ತ್ರೀಶಕ್ತಿಯವರಿಗೆ ಕಾನೂನು ಮಾಹಿತಿ, ಲಿಂಗ ತಾರತಮ್ಯದ ಬಗ್ಗೆ ಶಿಬಿರ ನಡೆಸುತ್ತಿದ್ದಾರೆ. ನಾನು ಪ್ರಥಮವಾಗಿ ಹೇಳುವುದೇನೆಂದರೆ, ಹೆಣ್ಣು ಮಕ್ಕಳಿಗೆ ಕೊಡುವ ತರಬೇತಿಯನ್ನು ಗಂಡು ಮಕ್ಕಳಿಗೆ ಕೊಡುವುದು ಉತ್ತಮ. ಹೆಣ್ಣು ಮಕ್ಕಳ ಮೇಲೆ ಶೋಷಣೆ ನಡೆಸಿದಾಗ, ಹೆಣ್ಣು ಮಕ್ಕಳ ಮೇಲೆ ಅನ್ಯಾಯವಾದಾಗ ನಿಮಗೆ ಇಂತಹ ಶಿಕ್ಷೆ ಬರುತ್ತದೆಂದು ಮೊದಲೇ ಅವರಿಗೆ ತಿಳಿಸಿ, ಆಮೇಲೆ ನಿಮ್ಮ ರಕ್ಷಣೆಗಾಗಿ ಇಂತಹ ಕಾನೂನುಗಳಿವೆ ಅಂತ ಹೆಣ್ಣು ಮಕ್ಕಳಿಗೆ ತರಬೇತಿ ಕೊಡುವುದು ಒಳ್ಳೆಯದೆಂಬುದು ನನ್ನ ಅನಿಸಿಕೆ. ಏಕೆಂದರೆ, ನಿನ್ನೆ ಪತ್ರಿಕೆಯಲ್ಲಿ ಓದಿದೆ. ಎಲ್‌ಎಲ್‌ಬಿ ಕಲಿತು ಎರಡು ವರ್ಷ ವಕಾಲತ್ತು ಮಾಡಿದಂಥ ಹೆಣ್ಣು ಮಗಳು ಅವಳ ಗಂಡನ ಕ್ರೌರ್ಯಕ್ಕೆ, ವರದಕ್ಷಿಣೆಯ ಪಿಡುಗಿಗೆ ಬಲಿಯಾಗಿದ್ದಾಳೆಂದು ಹೇಳಿದರೆ, ಯಾವುದೇ ಕಾನೂನು ಪದವೀಧರೆಗೆ ಕಾನೂನು ರಕ್ಷಣೆಯಿಲ್ಲವೆಂದು ಹೇಳುವಾಗ ಬಹುಶಃ, ಯಾರು ಹೆಣ್ಣಿನ ಮೇಲೆ ದಬ್ಬಾಳಿಕೆ ಮಾಡುತ್ತಾರೋ, ಅಂತಹವರಿಗೆ ಮೊದಲು ನಾವು ಆ ತರಬೇತಿಯನ್ನು ಕೊಡಬೇಕಾಗಿದೆ ಮತ್ತು ಕಾನೂನಿನ ಮಾಹಿತಿ ಕೊಡಬೇಕಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಅಧ್ಯಕ್ಷರೆ, ಇನ್ನು ಸರ್ಕಾರದಲ್ಲಿ ಸಂಕಷ್ಟದಲ್ಲಿ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಆರ್ಥಿಕ ಸಹಾಯ ಯೋಜನೆ ಎಂದು ಹಿಂದೆ ಇತ್ತು. ಈಗ ಮೂರು ವರ್ಷಗಳಿಂದ ಯಾವುದೇ ಆಯವ್ಯಯವನ್ನು ಅದಕ್ಕೆ ಸರ್ಕಾರ ಒದಗಿಸಿಲ್ಲ. ಇನ್ನು ಅಂಗವಿಕಲತೆ. ಅಂಗ ವೈಕಲ್ಯ ಇದ್ದವರಿಗೆ ಎರಡೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರ ಕಾದಿರಿಸಿದೆ. ನಿನ್ನೆ ನಮ್ಮ ಮಾನ್ಯ ಸದಸ್ಯರಾದ ನಾಗಮಣಿ ನಾಗೇಗೌಡರವರು ಮತ್ತು ವಿಶ್ವೇಶ್ವರ ಹೆಗಡೆಯವರು ಹೇಳಿದರು. ಸಾವಿರಾರು ಯೋಜನೆಗಳು, 'ಕೌಶಲ್ಯ', 'ಉದ್ಯೋಗಿನಿ' ಎಂದು ಹಾಗೆ ಏನೇನು ಕಾರ್ಯಕ್ರಮಗಳನ್ನು ಅಂಗವಿಕಲರಿಗೆ ಹಮ್ಮಿಕೊಳ್ಳುತ್ತಿದ್ದಾರೆ, ಒಂದು ತಾಲ್ಲೂಕಿಗೆ ಒಂದು ಸೈಕಲ್. ಅಥವಾ ಯಾವುದೋ ಒಂದು ಕಾಲುಗಳನ್ನು, ಏನೋ ಕೊಟ್ಟು ಅಲ್ಲಲ್ಲಿ ಮುಗಿಸಿಬಿಡುತ್ತಾರೆ. ಅಂಗ ವೈಕಲ್ಯತೆ ಎಂದರೆ ಅದು ಆರೋಗ್ಯಕ್ಕೂ ಬರುತ್ತದೆ. ನಮ್ಮ ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳ ಆಜುಬಾಜುಗಳಲ್ಲಿ ಗೇರು ಪ್ಲಾಂಟೇಷನ್ ಇದ್ದಲ್ಲಿ, ಅದಕ್ಕೆ ಸಿಂಪಡಿಸಿದ ರಾಸಾಯನಿಕದಿಂದಾಗಿ ಆಸುಪಾಸಿನ ಹೆಚ್ಚಿನ ಜನರಿಗೆ ಅಂಗವೈಕಲ್ಯತೆ ಬಂದಿದೆ. ಅದೂ ಕೂಡ ಅಲ್ಲಿಂದ ಕೊಟ್ಟ ಹೆಣ್ಣು ಮಕ್ಕಳು ಬೇರೆ ಕಡೆ ಹೆರಿಗೆಯಾದಾಗ, ಆ ಮಕ್ಕಳಿಗೂ ಅಂಗ ವೈಕಲ್ಯತೆ ಬಂದಿದೆ. ಆದರೆ, ಸರ್ಕಾರ ಅದರ ತನಿಖೆಗೆ ಬೇರೊಂದು ಆಯೋಗ ಕಳುಹಿಸಿ, ಅದು ಯಾವುದೂ ಅಲ್ಲವೆಂದು ಹೇಳುವ ಮೂಲಕ ಅದನ್ನು ಕೈ ಜಾರಿಸಿದೆ ಆದರೆ, ಅಂತಹ ಅಂಗ ವೈಕಲ್ಯತೆ ಇರುವಂತಹ ಸಾವಿರಾರು ಮಕ್ಕಳಿರುವಾಗ ಅದಕ್ಕಾಗಿ ಹೆಚ್ಚಿನ ಧನ ಸಹಾಯವನ್ನು ಸರ್ಕಾರ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ದೇವದಾಸಿಯರ ಮಕ್ಕಳಿಗೆ ಹಾಜರಾತಿ ಶಿಷ್ಯವೇತನ ಕಳೆದ ಎರಡು ವರ್ಷಗಳಿಂದ ಕೊಟ್ಟೇ ಇಲ್ಲ. ಆ ಮಕ್ಕಳನ್ನು ಎಲ್ಲರಿಗಿಂತಲೂ ಹೆಚ್ಚು ಉದ್ಧಾರ ಮಾಡಬೇಕು ಎಂದು ಸರ್ಕಾರ ಬಾಯಲ್ಲಿ ಹೇಳುತ್ತಿದೆ. ಆದರೆ ಕಳೆದ ಎರಡು ವರ್ಷಗಳಿಂದ ಅದಕ್ಕಾಗಿ ಹಣ ಮೀಸಲಾಗಿಟ್ಟಿಲ್ಲ. ದೇವದಾಸಿಗಳಿಗೆ pension ಕೊಡುವ ಬಗ್ಗೆ ಹೇಳುವುದಾದರೆ, ಮಹಾರಾಷ್ಟ್ರದಲ್ಲಿ ದೇವದಾಸಿಗಳಿಗೆ

ಒಂದು ತಿಂಗಳಿಗೆ 500 ರೂಪಾಯಿಗಳ pension ಅನ್ನು ನೀಡಲಾಗುತ್ತಿದೆ. ಏಕೆಂದರೆ, ಅವರು ಇರುವಂತಹ ಉದ್ಯೋಗವನ್ನು ಬಿಟ್ಟು, ಅವರು ಉತ್ತಮ ನಡತೆಯಿಂದ ಮುಂದುವರೆಯಬೇಕು ಎಂದು ಹೇಳುವ ಸದುದ್ದೇಶದಿಂದ ಮಹಾರಾಷ್ಟ್ರ ಸರ್ಕಾರ ಅವರ ಜೀವನಕ್ಕಾಗಿ ತಿಂಗಳಿಗೆ 500 ರೂಪಾಯಿಗಳನ್ನು ಕೊಡುತ್ತಿದೆ. ಆದರೆ ನಮ್ಮ ಸರ್ಕಾರದಲ್ಲಿ ಅಂತಹ ಯೋಜನೆ ಇಲ್ಲ. ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂತಹ ಯೋಜನೆಯನ್ನು ಜಾರಿಗೆ ತರುವುದಕ್ಕಾಗಿ ಹಣವನ್ನು ತೆಗೆದಿಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನಮ್ಮ ಇಡೀ ರಾಜ್ಯದ ಪ್ರಾಥಮಿಕ ಶಾಲೆ ಮಕ್ಕಳಿಗೆ ಹಾಗೂ ಹೈಸ್ಕೂಲಿನ ಹೆಣ್ಣು ಮಕ್ಕಳಿಗೆ ಸಮವಸ್ತ್ರವನ್ನು . . . . . .

ಶ್ರೀ ಎಸ್.ಎಸ್. ಪಾಟೀಲ್: ದೇವದಾಸಿಯರಿಗೆ ಕೊಡಬೇಕು ಎಂದಷ್ಟೇ ಹೇಳಿ ಮುಗಿಸಿಬಿಟ್ಟಿರಿ. ದೇವದಾಸಿ ಪದ್ಧತಿ ಇನ್ನೂ ಇರಬೇಕೇ? ಅದು ಬೇಡ ಎಂದು ನೀವು ಹೇಳಲಿಲ್ಲ. ಮೊನ್ನೆ ನಮ್ಮಲ್ಲಿ ಒಬ್ಬ ಹರಿಜನ ಹುಡುಗಿಯನ್ನು, ಪಂಚಾಯಿತಿ ಅಧ್ಯಕ್ಷಣಿ, ತನ್ನ ಮೊಮ್ಮಗಳನ್ನು ದೇವದಾಸಿಗೆ ಬಿಟ್ಟಿದ್ದಾಳೆ. ಮೊನ್ನೆ ಹಿಡಿದು ತರಿಸಿ ಆಕೆಯನ್ನು ಕರೆದು . . . . .

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ: ದೇವದಾಸಿ ಪದ್ಧತಿ ಬೇಕು ಎಂದು ನಾನು ಹೇಳಲಿಲ್ಲ. ಅವರನ್ನು . . . . . .

ಶ್ರೀ ಎಸ್.ಎಸ್. ಪಾಟೀಲ್: ಅದನ್ನು ನಿಲ್ಲಿಸಬೇಕು ಎಂದು ಹೇಳಿಬಿಡಿ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಮಾನ್ಯ ಅಧ್ಯಕ್ಷರೆ, ದೇವದಾಸಿ ಕಾಯ್ದೆ ಬಂದು ಸುಮಾರು 40–45 ವರ್ಷಗಳಾಯಿತು. 25 ವರ್ಷದ ಹುಡುಗಿಗೂ pension ಕೊಡಿ ಎಂದು ಹೇಳುತ್ತೀರಿ, ಅದನ್ನು ಕೊಡಬಾರದು, ಅದು ತಪ್ಪು. ನನ್ನನ್ನು ಕೇಳಿದರೆ, ಸಣ್ಣ ಸಣ್ಣ ಹುಡುಗಿಯರು ಏನು ದೇವದಾಸಿ ಪದ್ಧತಿಯಲ್ಲಿ ಬಿಟ್ಟಿದ್ದರೆ. ಅವರಿಗೆ ಅದನ್ನು ಕೊಡಬಾರದು. ಕೊಡಲಿಕ್ಕೆ ಕಲಿಸಿದರೆ ಅದೇ ಶುರುವಾಗುತ್ತದೆ. ಅದರಲ್ಲೂ ಹೆಚ್ಚಾಗಿ ಹರಿಜನ–ಗಿರಿಜನರಲ್ಲೇ ಈ ಪದ್ಧತಿ ಇದೆ. ಮೊನ್ನೆ ನಮ್ಮಲ್ಲಿನ ಹಳ್ಳಿಗುಡಿ ಎಂಬಂತಹ ಗ್ರಾಮದಿಂದ ನನಗೊಂದು ಸುದ್ದಿ ಬಂತು. ನಾನು ಮಹಿಳಾ ಇಲಾಖೆಯವರನ್ನು ಅಲ್ಲಿಗೆ ಕಳುಹಿಸಿಕೊಟ್ಟು, ಆ ಮಗುವನ್ನು ಕರೆಸಿ, ಬೇರೆ ಕಡೆಗೆ ಇರುವಂತಹ ವ್ಯವಸ್ಥೆ ಮಾಡಿಸಿದೆ. ಆ ಹುಡುಗಿ ಒಲ್ಲೆ ಎಂದರೂ ಕೂಡ ಜೋರು ಮಾಡಿ ದೇವದಾಸಿಗೆ ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿ ಇವತ್ತು ನಡೆಯುತ್ತಿದೆ. ಅದಕ್ಕಾಗಿ ನಾನು ಅದನ್ನು ಕಡುವಾಗಿ ವಿರೋಧ ಮಾಡುತ್ತೇನೆ. ದೇವದಾಸಿ ಕಾಯ್ದೆ ಬಂದು 40–45 ವರ್ಷಗಳಾಯಿತು. ಅದಕ್ಕಿಂತ ಹಿಂದೆ ಇದ್ದವರಿಗೆ ಬೇಕಾದರೆ ಕೊಡಲಿಕ್ಕೆ ಅಡ್ಡಿ ಇಲ್ಲ. ಈಗ 25 ವರ್ಷದ ಹುಡುಗಿಗೆ, ಆಕೆ ದೇವದಾಸಿ ಎಂದು ಕೊಡಿ ಎಂದು ಹೇಳಿದರೆ, ನಾವು ನಾಳೆಗೆ ಆ ಪದ್ಧತಿಯನ್ನು ಮುಂದುವರೆಸಲಿಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ: ಅಲ್ಲಾ ಸಾರ್. ವೃದ್ಧೆಯಾಗಿರುವವರಿಗೆ ವೃದ್ಧಾಪ್ಯ ವೇತನವಾಗಿ 500 ರೂಪಾಯಿಗಳನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಈಗ ಯಾರನ್ನು ಆ ವೃತ್ತಿಯಿಂದ ಬಿಡಿಸಿ, ಅವರಿಗೆ ಪುನರ್ ವಸತಿ ಕೊಟ್ಟಿದ್ದಾರೋ, ಅಂತಹವರಿಗೆ 500 ರೂಪಾಯಿಗಳನ್ನು ಮಾಸಿಕ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೊಟ್ಟ ರೀತಿಯಲ್ಲಿ ಅಂಗನವಾಡಿ ಮಕ್ಕಳಿಗೂ ಕೊಡಬೇಕು. ಈಗ ಬಡವರ ಮಕ್ಕಳು ಮಾತ್ರ ಅಂಗನವಾಡಿಗೆ ಹೋಗುತ್ತಿದ್ದಾರೆ, ಮೂರು ವರ್ಷದಿಂದ ಆರು ವರ್ಷದೊಳಗಿನ ಶ್ರೀಮಂತರ ಮಕ್ಕಳೆಲ್ಲಾ LKG, UKGಯಲ್ಲಿ ಇರುತ್ತಾರೆ.

ಬಡವರ ಮಕ್ಕಳು ಮಾತ್ರ ಅಂಗನವಾಡಿಯಲ್ಲಿ ಇರುವುದರಿಂದ, ಆ ಮಕ್ಕಳಿಗೂ ಸಮವಸ್ತ್ರ ಒದಗಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಹೆಣ್ಣುಮಕ್ಕಳ ಬಗ್ಗೆ ನೋಡಿದರೆ, ಹೆಣ್ಣು ಮಕ್ಕಳು ಏನಾದರೂ ಸ್ವಲ್ಪ ಗಟ್ಟಿ ಮಾತನಾಡಿದರೆ, ಹೆಣ್ಣುಮಕ್ಕಳ ಕೈಯ್ಯಲ್ಲಿ ಲಟ್ಟಣಿಗೆ ಕೊಟ್ಟು ಚಿತ್ರಿಸುತ್ತಾರೆ. ಅದಕ್ಕಿಂತಲೂ ಬಹಳ ಅವರ ಪರ ಎಂದು ಮಾತನಾಡಿದರೆ, ಅವರನ್ನು ಸಾರ್ವಜನಿಕವಾಗಿ ಬಟ್ಟಬಯಲು ಮಾಡುವಂತಹ ವ್ಯವಸ್ಥೆಯನ್ನು ಮಾಡಿ ತೋರಿಸುತ್ತಾರೆ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಹೀಗಿರುವಲ್ಲಿ, ಇವತ್ತು ನಮ್ಮ ದೇಶದಲ್ಲಿ 25 ನಿಮಿಷಕ್ಕೊಂದು ಲೈಂಗಿಕ ಕಿರುಕುಳ, 30 ನಿಮಿಷಕ್ಕೊಂದು ಅತ್ಯಾಚಾರ, 45 ನಿಮಿಷಕ್ಕೊಂದು ಆತ್ಮಹತ್ಯೆ, ಗಂಟೆಗೊಂದು ವರದಕ್ಷಿಣೆ ಸಾವು ಆಗುತ್ತಿರುವಾಗ, ನಾವು ಅದನ್ನು ತಡೆಯುವುದಕ್ಕೆ ಒಂದು ಬಲವಾದ ಕಾನೂನನ್ನು ಜಾರಿಗೆ ತರಬೇಕಾದಂತಹ ಅಗತ್ಯ ಇದೆ. ಮೊನ್ನೆ ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರಿಗೊಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಮೂರು ವರ್ಷದಲ್ಲಿ ಎಲ್ಲಾ ದೌರ್ಜನ್ಯಗಳು, ಅತ್ಯಾಚಾರಗಳು ಸೇರಿ, 22 ಸಾವಿರ ನಮ್ಮ ಕರ್ನಾಟಕದಲ್ಲಿ ದಾಖಲಾಗಿವೆ ಎಂದು ಕೊಟ್ಟಿದ್ದಾರೆ. ದಾಖಲಾಗದಿರುವುದು ಎಷ್ಟು ಇರಬಹುದು ಎಂದು ನಾವೇ ನೋಡಿಕೊಳ್ಳೋಣ. ನನಗನ್ನಿಸುತ್ತದೆ, ಇದರಲ್ಲಿ ಇಲಾಖೆಯನ್ನು ದೂರುವುದಲ್ಲ. ನಮ್ಮ ಪೊಲೀಸ್ ವ್ಯವಸ್ಥೆ ಬಹಳ ದೌರ್ಬಲ್ಯದಿಂದ ವರ್ತಿಸುತ್ತಿರುವ ಕಾರಣ ಹೀಗೆ ನಡೆಯುತ್ತಿದೆ ಎಂಬುದು ನನ್ನ ಅನಿಸಿಕೆಯಾಗಿದೆ. ಪೊಲೀಸರ ನೈತಿಕ ಬಲವನ್ನು ಕುಗ್ಗಿಸುವಂತಹ ಒಂದೊಂದು ಪ್ರಕರಣಗಳು ನಡೆಯುತ್ತವೆ ಎನ್ನುವುದಕ್ಕೆ ಉದಾಹರಣೆಯಾಗಿ ಘಟನೆಯೊಂದನ್ನು ಹೇಳುತ್ತೇನೆ. ನನ್ನ ಪುತ್ತೂರು ಗ್ರಾಮಾಂತರ ಪೊಲೀಸ್ ಸ್ಟೇಷನ್‌ನಲ್ಲಿ, ಜನವರಿ ತಿಂಗಳಿನಲ್ಲಿ ಶಿವಸ್ವಾಮಿ ಎಂದು ಒಬ್ಬ SI ಇದ್ದರು. ಫೆಬ್ರವರಿ ತಿಂಗಳ ಕೊನೆಗೆ ಜಯರಾಮ್‌ಗೌಡ ಎನ್ನುವ ಒಬ್ಬ SI ಬಂದರು. ಅವರು ಮಾರ್ಚ್ 15ರ ಹೊತ್ತಿಗೆ ಅವರು ಹೋದರು. ಆ ಜಯರಾಮಗೌಡ ಹೋದ ಮೇಲೆ, ವಾಪಸ್ ಒಬ್ಬರು ರಾಥೋಡ್ ಅನ್ನುವವರು ಬಂದರು. ಈಗ ಮೊನ್ನೆ ಐತಪ್ಪ ಮೆಹ್ರಾ ಎಂಬುವವರು ವಾಪಸ್ ಬಂದಿದ್ದಾರೆ. ಅಂದರೆ ಆರು ತಿಂಗಳಿನಲ್ಲಿ ಒಂದು ಪೊಲೀಸ್ ಸ್ಟೇಷನ್‌ನಲ್ಲಿ ನಾಲ್ಕು SIಗಳು ಬದಲಾವಣೆ ಆಗುತ್ತಾರೆ ಎಂದರೆ, ಯಾವ ಪೊಲೀಸರು ಯಾರನ್ನು ಹಿಡಿಯಲಿಕ್ಕೆ ಸಾಧ್ಯ ಸ್ವಾಮಿ? ಆದಕಾರಣ ಯಾರನ್ನು ಯಾರು ಅತ್ಯಾಚಾರ ಮಾಡಿದರೆ ನಮಗೇನಂತೆ ಎಂದು ಕೊನೆಗೆ ಅವರೊಂದು ಬರೆದು ಬಿಡುತ್ತಾರೆ. ಅದು ಅವರಿಬ್ಬರೂ ಒಪ್ಪಂದದಲ್ಲಿ ಮಾಡಿದ್ದು. ಈಗ ಯಾರೋ ಹೀಗೆ ನೋಡಿದ ಕಾರಣ, ಅದನ್ನು ಕೇಸ್ ಆಗಿ ಪರಿವರ್ತನೆ ಮಾಡಿದ್ದಾರೆ ಮೇಡಂ ಎಂದು ನನಗೆ ಉತ್ತರ ಹೇಳುವಂತಹ ಸ್ಥಿತಿ ಬರುತ್ತಿದೆ. ಆದಕಾರಣ ಪೊಲೀಸ್ ಇಲಾಖೆ ತನ್ನ ಸಾಮರ್ಥ್ಯವನ್ನು ತೋರಿಸಬೇಕಾಗಿದ್ದರೆ, ದಯಮಾಡಿ ರಾಜಕೀಯ ವ್ಯಕ್ತಿಗಳ ಅಥವಾ ಹಣಕಾಸಿನ ಒತ್ತಡಕ್ಕೆ ಬಲಿಯಾಗಬಾರದು ಎಂದು ನಾನು ನಿಮ್ಮ ಮುಖಾಂತರ ಸರ್ಕಾರವನ್ನು ಮತ್ತು ಪೊಲೀಸ್ ಇಲಾಖೆಯನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಯುವಜನ ಇಲಾಖೆ ಬಗ್ಗೆ ಹೇಳುವುದಾದರೆ, ಅದು ನಮ್ಮ ಮಹಿಳಾ ಇಲಾಖೆಯ ಹಾಗೆ ಹೆಸರಿಗೆ ತಕ್ಕ ಹಾಗೆ ಇದೆ ಎಂದು ಕಾಣುತ್ತಿದೆ. ಆದರೆ ಒಂದು ಸಂಗತಿ ಏನೆಂದರೆ, ಯುವಜನ ಸೇವಾ ಮಂತ್ರಿಗಳೇ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರೂ ಸಹಾ ಆಗಿದ್ದಾರೆ. ಸಾನಿಯಾ ಮಿರ್ಜಾ ಅವರು ರಾಷ್ಟ್ರಕ್ಕೆ ಹೆಸರು ತಂದಿದ್ದರೆ, ಕೇಂದ್ರದಿಂದ, ಆಂಧ್ರದಿಂದ, ಎಲ್ಲಾ ಕಡೆಯಿಂದ . . . . . .

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸದಸ್ಯರು Main ವಿಷಯವನ್ನೇ ಬಿಟ್ಟಿರಲ್ಲಾ. 33% ವಿಷಯವನ್ನು ತಾವು ಹೇಳಲೇ ಇಲ್ಲವಲ್ಲಾ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ: ಅದರ ಬಗ್ಗೆಯೂ ಹೇಳುತ್ತೇನೆ ಸಾರ್.

ಶ್ರೀ ಎಸ್.ಎಸ್. ಪಾಟೀಲ್: ಅದರ ಬಗ್ಗೆ ಹೇಳದೆ ತಾವು ಆಗಲೇ ಯುವಜನ ಇಲಾಖೆಗೆ ಹೋಗಿ ಬಿಟ್ಟಿರಿ. ದಯವಿಟ್ಟು ಅದಕ್ಕಾಗಿ resolution ಒಂದನ್ನು ಇಲ್ಲಿ move ಮಾಡಿ. 33% ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಸರ್ವಾನುಮತದಿಂದ ಶಿಫಾರಸ್ಸು ಮಾಡಬೇಕು ಎಂದು ಒಂದು ನಿರ್ಣಯ move ಮಾಡಿ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ:– 33% ಹೇಗೆ ಜಾರಿಗೆ ಬಂದಿದೆ ಎಂಬುದನ್ನು ನೋಡಿ. ಈ ಕಡೆಗೆ ಮೂವರು, ಆ ಕಡೆಗೆ ಮೂವರು ಮಾತ್ರ ಇದ್ದೇವೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ: ಸಾನಿಯಾ ಮಿರ್ಜಾಗೆ ನಮ್ಮ ಸರ್ಕಾರ ಬಹುಮಾನವಾಗಿ ಅವರನ್ನು ಆದರದಿಂದ ಗೌರವಿಸಿದೆ. ನಮ್ಮದೇ ಪುತ್ತೂರು ತಾಲ್ಲೂಕಿನ ರೋಸಾ ಮೇರಿ ಎಂಬುವವರು ಏಷ್ಯಾ ಕಬಡ್ಡಿ ಟೂರ್ನಿಮೆಂಟ್‌ನಲ್ಲಿ ಚಿನ್ನದ ಪದಕ ತೆಗೆದುಕೊಂಡು ಬಂದಿದ್ದಾರೆ. ಯುವಜನ ಸೇವಾ ಸಚಿವರೇ ನಮ್ಮ ಉಸ್ತುವಾರಿ ಸಚಿವರಾಗಿದ್ದಾರೆ. ಆದರೆ ಪಾಪ, ಅವರನ್ನು ಯಾವ ಸಚಿವರೂ, ಇಲಾಖೆಯೂ, ಯಾರೂ ಗಮನಿಸಲಿಲ್ಲ. ಸರ್ಕಾರ ಅವರಿಗೂ ಮುಂದೆ ಹೋಗುವುದಕ್ಕೆ ಏನಾದರೂ ಸಹಕಾರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇನ್ನು ಸಾರಿಗೆ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ಸಾರಿಗೆ ಸಚಿವರು ಇಲ್ಲೇ ಇದ್ದಾರೆ. ನಮ್ಮ ಪುತ್ತೂರು ಕೆಎಸ್‌ಆರ್‌ಟಿಸಿ ಡಿಪೋ ಇಡೀ ರಾಜ್ಯದಲ್ಲಿ ಎರಡನೆಯ ಸ್ಥಾನದಲ್ಲಿ, ಅತಿ ಹೆಚ್ಚು ಗ್ರಾಮಾಂತರ ಸಾರಿಗೆ ಸಂಪರ್ಕವನ್ನು ಹೊಂದಿರುವಂತಹ ಡಿಪೋ ಆಗಿದೆ. ಅಲ್ಲಿ ಇನ್ನೂ ಬಹಳಷ್ಟು ಬೇಡಿಕೆಗಳಿವೆ. ಇನ್ನೊಂದು ಅಲ್ಲಿ ಬಹಳ ಸಮಸ್ಯೆ ಏನೆಂದರೆ, ತೋರಿಕೆಗೆ ಅಲ್ಲಿ ನಷ್ಟವೆಂದು ಕಂಡುಬರುತ್ತಿದೆ ಎಂದು ಕಾಣುತ್ತದೆ. ಏಕೆಂದರೆ, ಸುಳ್ಯದಲ್ಲಿ ಡಿಪೋ ಇಲ್ಲದ ಕಾರಣ, ಸುಳ್ಯದಲ್ಲಿ ರಾತ್ರಿ halt ಆಗುವಂತಹ ಎಲ್ಲಾ ಬಸ್ಸುಗಳು ಡೀಸೆಲ್ ಹಾಕಿಸಿಕೊಳ್ಳಲಿಕ್ಕೆ ಪುತ್ತೂರಿಗೆ ಬಂದು ವಾಪಸ್ ಅಲ್ಲಿಗೆ ಹೋಗುವಂತಹ ಅನಿವಾರ್ಯತೆ ಇರುವ ಕಾರಣ, ಸುಳ್ಯಕ್ಕೊಂದು ಡಿಪೋ ಕೊಟ್ಟಾಗ, ನಮ್ಮ ಹೊಸ ಡಿಪೋ ಸರಿಯಾಗುತ್ತದೆ. ಹಾಗೆಯೇ, ನಾನು ತಮ್ಮಲ್ಲಿ ಬರಹದ ಮುಖಾಂತರ ಮೊನ್ನೆಯೇ ಕೇಳಿ ಕೊಂಡಿದ್ದೇನೆ . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮೊನ್ನೆ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಒಂದು ದೊಡ್ಡ ಬಸ್‌ಸ್ಟ್ಯಾಂಡ್ ಕಟ್ಟಿ, ಅಲ್ಲಿ ಕೆಲವು ಸೌಲಭ್ಯ ಕೊಡಬೇಕಾಗಿತ್ತು, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಕಟ್ಟಿದ್ದೇವೆ. ಈ ವರ್ಷದ ಬಜೆಟಿನಲ್ಲಿ ಸೂಳ್ಯದಲ್ಲೂ ಕೂಡ separate depot ಮಾಡಿಕೊಡುತ್ತೇವೆ ಎಂದು ಹೇಳಿದ್ದೆ. ಏಕೆಂದರೆ, ಪುತ್ತೂರಿನಿಂದ, ಅವರು ಹೇಳಿದಂತೆ, 30 ಕಿ.ಮೀ.ಗಳು ಹೋಗಬೇಕು, ಮತ್ತೆ 30 ಕಿ.ಮೀ.ಗಳು ವಾಪಸ್ ಬಂದು ಮತ್ತೆ ಇಲ್ಲಿಂದ ತಾಲ್ಲೂಕಾ ಪ್ಲೇಸಿನಿಂದ ಬೇರೆ ಕಡೆಗೆ ಹೋಗಬೇಕು. ಇದರಿಂದ ತೊಂದರೆಯಾಗುತ್ತಿದೆ, ಸರಿಪಡಿಸೋಣ ಎಂದು ನಾನು ಹೋದ ಸಲ ಹೇಳಿದ್ದೆ. ಇದು ಮುಂದಿನ ಬಜೆಟಿನಲ್ಲಿ ಬರುತ್ತದೆ. ಈ ಬಜೆಟಿನಲ್ಲಿ ಬರುವುದಿಲ್ಲ. ಅದನ್ನು ನಾವು ಮಾಡಿಕೊಡುತ್ತೇವೆ. ಅದರ ಬಗ್ಗೆ ನಾವು ಘೋಷಣೆ ಮಾಡಿದ್ದೇವೆ. ಉಳಿದಂತೆ ನೀವು ಹೇಳಿದ ಕೆಲಸವನ್ನೂ ಮಾಡಿದ್ದೇವೆ. ತಾವು ಏಕೋ ಅದನ್ನು ಹೇಳುತ್ತಿಲ್ಲ. ಮೊದಲು ಮಾಡಿದ್ದು ಹೇಳಿ, ನಂತರ ಮಾಡಬೇಕಾಗಿರುವುದು ಹೇಳಿ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ: ಇನ್ನೂ ಬಹಳಷ್ಟು ಬೇಡಿಕೆಗಳಿವೆ ಸಾರ್. ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಕೇಳಿದಾಗಲೆಲ್ಲಾ, ಬಸ್ಸಿಲ್ಲ, ಬಸ್ಸಿಲ್ಲ ಎಂದು ಹೇಳುತ್ತಾರೆ. ದಯಮಾಡಿ ನಮ್ಮ ಪುತ್ತೂರು ಡಿಪೋಗೆ ಹೆಚ್ಚುವರಿಯಾಗಿ 25 ಬಸ್ಸುಗಳನ್ನು ಕಳುಹಿಸಿಕೊಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮ ಇಡೀ ದಕ್ಷಿಣ ಕನ್ನಡ ಜಿಲ್ಲೆ . . . . .

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ: ನಾನು ಆಗಲೇ 33% ಹೇಗೆ ಜಾರಿಗೆ ಬಂದಿದೆ ಎಂಬುದನ್ನು ಹೇಳಿದೆ. ಆ ಕಡೆಗೆ ಮೂವರು, ಈ ಕಡೆಗೆ ಮೂವರು, ನಾವು ಇರತಕ್ಕಂಥವರು ಕೇವಲ ಆರು ಜನ ಮಾತ್ರ. ಯಾವುದೇ ಇಲಾಖೆಯಲ್ಲಿ ಯಾವುದೇ developments ಇರಬಹುದು, ಮೊದಲು ಮಹಿಳೆಯರಿಗೆ ಕೊಟ್ಟು, ಉಳಿದದ್ದನ್ನು ಬೇರೆಯವರಿಗೆ ಹಂಚಿ ಅನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ಎಲ್ಲರಿಗೂ ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಚಿವರೆ, ಅದಕ್ಕೆ ನಾವು ತಯಾರಾಗಿದ್ದೇವೆ. ಅದಕ್ಕೆ ನಾವು ಎರಡು ಕೈಯನ್ನೂ ಎತ್ತುತ್ತೇವೆ. ಎಲ್ಲಾ ತೆಗೆದುಕೊಂಡು ಬಿಡಿ, ಸಂಪೂರ್ಣ ಮಹಿಳೆಯರಿಗೇ ಕೊಡುತ್ತೇವೆ, ಎಲ್ಲಾ ತೆಗೆದುಕೊಳ್ಳಿ.

ಶ್ರೀಮತಿ ಎಂ.ಕೆ.ನಾಗಮಣಿ:- ಮಾನ್ಯ ಅಧ್ಯಕ್ಷರೆ, ICICI bank ನವರು ನಮ್ಮ ಕಡೆ 47 ಮಹಿಳಾ ಒಕ್ಕೂಟಗಳು ಆದ ನಂತರ, ನಮ್ಮ ಜಿಲ್ಲೆಯಲ್ಲಿ ಮಹಿಳಾ ಬ್ಯಾಂಕ್‌ಗಳನ್ನು ತೆರೆದಿದ್ದಾರೆ. ನಮ್ಮ ಜಿಲ್ಲೆಯಲ್ಲಿ. ಅದನ್ನೇಕೆ ನಮ್ಮ ಸರ್ಕಾರದವರು ಮಾಡಿ ಮಹಿಳೆಯರಿಗೆ ಜಿಲ್ಲೆಯಲ್ಲಿ ಮಹಿಳೆಯರೇ ಪೂರ್ತಿಯಾಗಿ ನಡೆಸುವಂಥ ಒಂದು ಮಹಿಳಾ ಬ್ಯಾಂಕನ್ನು ಮಾಡಬಾರದು ಎಂದು ತಮ್ಮ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯರು ಇಲ್ಲಿದ್ದಾರೆ ಅವರಿಗೆ ಒತ್ತಾಯ ಮಾಡುತ್ತೇನೆ. ಆ ನಂತರದ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲೂ ಒಂದೊಂದು ಮಹಿಳಾ ತಾಲ್ಲೂಕು ಬ್ಯಾಂಕುಗಳನ್ನು ತೆರೆಯಬೇಕೆಂದು ತಮ್ಮ ಮೂಲಕ ಸಚಿವೆಯರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಶಕುಂತಲಾ ಟಿ. ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ 14 ನದಿಗಳು ಹರಿಯುತ್ತಿದೆ. ಆ 14 ನದಿಗಳನ್ನು ಜೋಡಿಸಿದಾಗ ನೀರಿನ ಕೊರತೆ, ಎಲ್ಲೂ ಸಮಸ್ಯೆ ಬಾರದೆ ಎಲ್ಲಾ ಕಡೆ ನೀರು ಸಿಗುವಂಥ ವ್ಯವಸ್ಥೆಯಾಗಬಹುದು. ಅದಕ್ಕಾಗಿ ಆ ನದಿ ಜೋಡಣೆಯ ವ್ಯವಸ್ಥೆಯನ್ನು ಸರ್ಕಾರ ಮುಂದಿನ ಬಜೆಟ್‌ನಲ್ಲಾದರೂ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ವಿದ್ಯುತ್ ಬಗ್ಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಎರಡೂ ಒಂದಾಗಿತ್ತು. ಈಗ ಎರಡೂ ಪಾಲಾಗಿದೆ, ಆಗ ವ್ಯವಸ್ಥೆಯು ವ್ಯತ್ಯಾಸವಾಗಿದೆ. ನಮ್ಮ ಉಡುಪಿಯಲ್ಲಿ 24 ಗಂಟೆಯೂ ಕರೆಂಟ್ ಕೊಡುತ್ತಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು, ಆರು, ಎಂಟು ಗಂಟೆ ಹೀಗೆಲ್ಲಾ ಇದೆ. ಅದು ಕೂಡ ನದಿಯಿಂದ ನೀರು ಎತ್ತುವಂಥದ್ದು, ನಮ್ಮ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಒಂದು ಲಕ್ಷಕ್ಕೂ ಹೆಚ್ಚು ಪಂಪ್‌ಸೆಟ್ಟುಗಳಿಂದ ನೀರು ತೆಗೆದು ಕೃಷಿಗಳನ್ನು ಮಾಡುತ್ತಿದ್ದೇವೆ. ಒಮ್ಮೆ ನಮ್ಮ ಜಿಲ್ಲೆಯಲ್ಲಿ ನದಿ ನೀರನ್ನು ಉಪಯೋಗ ಮಾಡಬಾರದು ಎಂದು ಬಂದಿತ್ತು. ಹಾಗೇನಾದರೂ ಬಂದುಬಿಟ್ಟರೆ ನಮ್ಮ ಇಡೀ ಕೃಷಿ ನಾಶವಾಗುವ ವ್ಯವಸ್ಥೆ ಆಗಿಹೋಗಬಹುದು. ಅದಕ್ಕಾಗಿ ಪಂಪ್‌ಸೆಟ್‌ನಿಂದ ಕೃಷಿ ಮಾಡುವವರಿಗೆ ಯಾವತ್ತೂ 24 ಗಂಟೆ ಕರೆಂಟ್ ಕೊಡುವಂಥ ವ್ಯವಸ್ಥೆಯಾಗಬೇಕು. ನನ್ನ ಪುತ್ತೂರು ಕ್ಷೇತ್ರದಲ್ಲಿ ನೆಟ್ಲಮುಡ್ನೂರು ಮತ್ತು ನೆಲ್ಯಾಡಿ ಈ ಎರಡು ಕಡೆ ಸಬ್‌ಸ್ಟೇಷನ್‌ಗಳಿಗೆ ಒಂದು ಕಡೆ ಜಾಗ ನೋಡಿದ್ದಾರೆ ಒಂದು ಕಡೆ ಕೆಲಸವಾಗುತ್ತಿದೆ. ನೆಟ್ಲಮುಡ್ನೂರು

ಬಂಟ್ವಾಳ ತಾಲ್ಲೂಕಿನದ್ದು, ನನ್ನ ಕ್ಷೇತ್ರ, ಗುರುವಾಯನ ಕೆರೆಯಿಂದ ಅಲ್ಲಿಗೆ ಲೈನ್ ಬರಬೇಕು, ಆ ಲೈನಿಗೆ ಸಿಂಗಲ್ ಟೆಂಡರ್ ಎಲ್. ಅಂಡ್ ಟಿ ಯವರು ಹಾಕಿದ್ದಾರೆ. ಅದು ಸಿಂಗಲ್ ಟೆಂಡರ್ ಎಂದು ಸರ್ಕಾರ ಅದಕ್ಕೆ ಅನುಮತಿ ನೀಡಿಲ್ಲ. ಇವತ್ತು ಕರ್ನಾಟಕ ಸರ್ಕಾರದ ಬಹಳಷ್ಟು ಕೆಲಸಗಳಲ್ಲಿ ಎಲ್. ಅಂಡ್ ಟಿ ಮಾಡುತ್ತಿರುವಾಗ ಸಿಂಗಲ್ ಟೆಂಡರ್ ಆಗಿದ್ದರೂ ಅದಕ್ಕೆ ಮಾನ್ಯತೆ ಕೊಟ್ಟು ಕೆಲಸವನ್ನು ಆದಷ್ಟು ಬೇಗ ಮಾಡಿಸಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ

ಶಿಕಾರಿಪುರ ತಾಲ್ಲೂಕಿನ ಅಂಬಳಿಹುಳ ಜಲಾಶಯ ತುಂಬಿ ಕೆಲವು ಹಳ್ಳಿಗಳು ಮುಳುಗಿ ಹೋಗಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಈ ವಿಷಯ ಬೇರೆ, ಜಲಸಂಪನ್ಮೂಲ ಸಚಿವರು ತಾವು ಇರಲಿಲ್ಲ, ಇವತ್ತೊಂದು ವಿಶೇಷವಾದ ಸಮಾರಂಭದಲ್ಲಿ ತಾವಿದ್ದಿರಿ ಎಂದು ನಾನು ಎಂ.ಪಿ. ಪ್ರಕಾಶ್ ಇದ್ದಾಗ ಪ್ರಸ್ತಾಪ ಮಾಡಿದೆ. ಶಿಕಾರಿಪುರದ ತಾಲ್ಲೂಕಿನಲ್ಲಿ ಅಂಬ್ಳಿಗೊಳ್ಳ ಡ್ಯಾಂ ಬಹಳ danger ಪರಿಸ್ಥಿತಿಗೆ ಬಂದು ಅಲ್ಲಿ ಬಲಭಾಗದಲ್ಲಿರುವಂಥ ಸ್ಲೂಯಿಸ್ ಸುಮಾರು ಒಂಭತ್ತು ಅಡಿ ಪೂರ್ತಿ ಕಿತ್ತುಕೊಂಡು ಹೋಗಿ ಅಲ್ಲಿರುವ ಅಧಿಕಾರಿಗಳೆಲ್ಲಾ ಸೇರಿ ಮುನ್ನೂರು ನಾನೂರು ಮೂಟೆ ಮರಳು ತುಂಬಿ ಚೀಲಗಳನ್ನು ತುಂಬಿದ್ದಾರೆ. ಅದಕ್ಕೆ ಹದಿನೈದು ಇಪ್ಪತ್ತು ಸಾವಿರ ಚೀಲವಾದರೂ ಬೇಕು. ಎರಡನೆಯದು, ಒಂದು ಅಡಿ ನೀರು ಮೇಲುಗಡೆ, ಕೋಡಿ ಮೇಲೆ ಹೋಗುತ್ತಿದೆ. ಅದು ಯಾವ ಸಮಯದಲ್ಲಿ ಬೇಕಾದರೂ ಬ್ರೀಚ್ ಆಗಬಹುದು, ಇದರ ಪರಿಣಾಮ 25–30 ಅಡಿ ಮುಳುಗಿಹೋಗುತ್ತದೆ. ನಿಮ್ಮ ಎಕ್ಸಿಕ್ಯುಟೀವ್ ಇಂಜಿನಿಯರ್ ಏನು ತೀರ್ಮಾನ ತೆಗೆದುಕೊಳ್ಳಲು ಆಗುತ್ತಿಲ್ಲ. ಸುಮಾರು ಮೂರುವರೆ ನಾಲ್ಕುಗಂಟೆಯಲ್ಲಿ ನಾನು ಹೌಸ್‌ನಲ್ಲಿ ಪ್ರಸ್ತಾಪ ಮಾಡಿದೆ, ನಾನು ಹೊರಡುವ ಮೊದಲು ಅಲ್ಲಿ ಏನಾಗಿದೆ ನೋಡಿಕೊಂಡು ಹೋಗೋಣವೆಂದು wait ಮಾಡಿದೆ ಇಷ್ಟೊತ್ತು. ನಾನು ವಾಪಸ್ ವಿಷಯ ತಿಳಿದುಕೊಂಡರೆ, ನಿಮ್ಮ ಎಕ್ಸಿಕ್ಯುಟೀವ್ ಇಂಜಿನಿಯರ್ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ. ಸುಮಾರು ಒಂದು ಅಡಿ ನೀರು ಕೋಡಿ ಮೇಲೆ ಹರಿದು ಹೋಗುತ್ತಿದೆ. ಇದು ಯಾವ ಸಮಯದಲ್ಲಿ ಬೇಕಾದರೂ ಡ್ಯಾಮೇಜ್ ಆಗಬಹುದಾದ ಪರಿಸ್ಥಿತಿಯಲ್ಲಿದೆ. ಅದಕ್ಕೆ ಸೂಚನೆ ಕೊಟ್ಟು ಸರಿಪಡಿಸುತ್ತೇನೆ ಎಂದು ಹೇಳಿದ್ದರು, ನೀವೂ ಇದ್ದೀರಿ, ಸ್ವಲ್ಪ ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟು ನಿಮ್ಮ ಯಾರಾದರೂ ಅಲ್ಲಿ ಹೈಯರ್ ಅಥಾರಿಟೀಸ್ ಇದುವರೆಗೆ ಹೋಗಲಿಲ್ಲ. ಮಧ್ಯಾಹ್ನ ಎರಡೂವರೆ ಮೂರು ಗಂಟೆಯ ಮಧ್ಯೆ ನಾನು ಪ್ರಸ್ತಾಪ ಮಾಡಿದರೆ ಯಾರೂ ಇದನ್ನು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ. ನಿಮ್ಮ ಅಧಿಕಾರಿಗಳು ಯಾರು ಅಲ್ಲಿ ಸರಿಯಾದ ಡಿಸೀಷನ್ ತೆಗೆದುಕೊಳ್ಳುತ್ತಿಲ್ಲ. ಅನಾಹುತವಾಗುತ್ತದೆ, ಈಗ ಒಂದು ತಿಂಗಳ ಹಿಂದೆ ನಾನು ನಿಮ್ಮ ಇರಿಗೇಷನ್ ಸೆಕ್ರೆಟರಿಯನ್ನು ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಿದ್ದೇನೆ, ಈ ರೀತಿ ಡ್ಯಾಮೇಜ್ ಆಗಬಹುದು, ತೊಂದರೆಯಾಗಬಹುದು ನೋಡಿ ಎಂದು, ಯಾರೂ ಏನು ಡಿಸೀಷನ್ ತೆಗೆದುಕೊಳ್ಳದೆಯೆ ಸುಮಾರು ಏಳೆಂಟು ಸಾವಿರ ಎಕರೆಗೆ ನೀರಾವರಿಯಾಗುವಂಥದ್ದು ಈಗ ಕೋಡಿಯೆ ಹೊಡೆಯುವಂಥ ಸ್ಥಿತಿಗೆ ಬಂದಿದೆ. ಯಾರೂ ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ. ದಯಮಾಡಿ ಅದನ್ನು ನೋಡಿ ಒಂದು ರಿಪೋರ್ಟ್ ತರಿಸಿಕೊಂಡು ಗಮನಕೊಡಿ. ನಾನು ಅಲ್ಲಿ ಹೋಗಿಬರುತ್ತೇನೆ. ಅಂಬ್ಳಿಗೊಳ ಜಲಾಶಯ ದಯವಿಟ್ಟು ಅದನ್ನು ನಿಮ್ಮ ಗಮನಕ್ಕೆ ತರುವುದು ಒಳ್ಳೆಯದು. ಇಲ್ಲದಿದ್ದರೆ ಅದರ ಪರಿಣಾಮ ವಿಚಿತ್ರವಾಗಬಹುದೇನೋ